ಗ್ರಾಮೀಣಾಭಿವೃದ್ಧಿಯಲ್ಲಿ ಕಿರುಹಣಕಾಸಿನ ಪಾತ್ರ
ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

ನಿಬಂಧಕಾರರು

ಪ್ರಕಾಶ ಯಸ್.

ಮಾರ್ಗದರ್ಶಕರು

ಡಾ|| ಬಿ. ಜಯಕುಮಾರ್ ಶೆಟ್ಟಿ

747

ಡಾ|| ಹಾ.ಮಾ.ನಾ. ಸಂಶೋಧನ ಕೇಂದ್ರ, ಉಜಿರೆ

೨೦೦೯

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಶಂ.ಶಂ.ಠ.ಭಟ್ಟ

747

AKSHARA GRANTHALAYA

ACC.NO. 048556

741

ಗ್ರಾಮೀಣಾಭಿವೃದ್ಧಿಯಲ್ಲಿ ಕಿರುಹಣಕಾಸಿನ ಪಾತ್ರ

ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ.

ನಿಬಂಧಕಾರರು

ಪ್ರಕಾಶ. ಯಸ್.

ಮಾರ್ಗದರ್ಶಕರು

ಡಾ॥ ಎ.ಜಯಕುಮಾರ್ ಶೆಟ್ಟಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ॥ ಹಾಮಾನಾ - ಸಂಶೋಧನ ಕೇಂದ್ರ ಉಜಿರೆ

೨೦೦೯

307.14
PRA G
048556

ದೃಢೀಕರಣ

ಗ್ರಾಮೀಣಾಭಿವೃದ್ದಿಯಲ್ಲಿ ಕಿರು ಹಣಕಾಸಿನ ಪಾತ್ರ ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ ಇದು ನಾನು ಉಜಿರೆ ಹಾಮಾನಾ ಸಂಶೋಧನಾ ಕೇಂದ್ರದಲ್ಲಿ ಡಾ॥ ಎ. ಜಯಕುಮಾರ್ ಶೆಟ್ಟಿಯವರ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ ನಿಬಂಧವಾಗಿರುತ್ತದೆ. ಇದರ ಯಾವುದೇ ಭಾಗ ಎಲ್ಲೂ ಪ್ರಕಟವಾಗಿಲ್ಲ ಮತ್ತು ಇತರ ಯಾವುದೇ ಉದ್ದೇಶಗಳಿಗೆ ಬಳಕೆಯಾಗಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

(ಪ್ರಕಾಶ. ಯಸ್)

ಸ್ಥಳ:- ಉಜಿರೆ.

ದಿನಾಂಕ:- ೨೫/೯/೨೦೦೯.

ಪ್ರಮಾಣ ಪತ್ರ

ಗ್ರಾಮೀಣಾಭಿವೃದ್ಧಿಯಲ್ಲಿ ಕಿರು ಹಣಕಾಸಿನ ಪಾತ್ರ – ಬೆಳ್ತಂಗಡಿ ತಾಲೂಕಿನ ಒಂದು ಅಧ್ಯಯನ ಇದು ಶ್ರೀ. ಪ್ರಕಾಶ್. ಯಸ್ ಇವರು ಎಂ. ಫಿಲ್ ಪದವಿಗಾಗಿ ನಡೆಸಿದ ಅಧ್ಯಯನ ಮತ್ತು ವಿಶ್ಲೇಷಣೆಯಾಧಾರಿತ ನಿಬಂಧವಾಗಿದ್ದು ನನ್ನ ಮಾರ್ಗದರ್ಶನದಲ್ಲಿ ಉಜಿರೆಯ ಡಾ|| ಹಾಮಾನಾ ಸಂಶೋಧನಾ ಕೇಂದ್ರದಲ್ಲಿ ಸಿದ್ದಪಡಿಸಲಾಗಿದೆ. ಈ ನಿಬಂಧದ ಯಾವುದೇ ಭಾಗವು ಇನ್ನಿತರ ಯಾವುದೇ ಉದ್ದೇಶಗಳಿಗೆ ಬಳಕೆಯಾಗಿಲ್ಲ ಮತ್ತು ಎಲ್ಲೂ ಪ್ರಕಟವಾಗಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಡಾ|| ಎ.ಜಯಕುಮಾರ್ ಶೆಟ್ಟಿ)

ಸ್ಥಳ:– ಉಜಿರೆ

ದಿನಾಂಕ:– 26/09/2009

ಅನುಕ್ರಮಣಿಕೆ

ಕೋಷ್ಟಕಗಳ ಪಟ್ಟಿ

<u>ಚಿತ್ರಗಳ ಪಟ್ಟಿ</u>

ಅಧ್ಯಾಯ – ೧

ಪ್ರಸ್ತಾವನೆ

೧.೧. ಸ್ವ ಸಹಾಯ ಗುಂಪುಗಳು

೧.೧.೧ ಸ್ವ ಸಹಾಯ ಗುಂಪುಗಳೆಂದರೇನು?

೧.೧.೨. ಸ್ವ ಸಹಾಯ ಗುಂಪುಗಳ ಲಕ್ಷಣಗಳು

೧.೧.೩. ಸ್ವ ಸಹಾಯ ಗುಂಪುಗಳ ಪ್ರಾಮುಖ್ಯತೆ

೧.೧.೪ ಸ್ವ ಸಹಾಯ ಗುಂಪುಗಳ ಉದ್ದೇಶಗಳು

೧.೧.೫. ಸ್ವ ಸಹಾಯ ಗುಂಪುಗಳ ನಿಯಮಗಳು

೧.೨. ಸ್ವ ಸಹಾಯ ಸಂಘದ ಹುಟ್ಟು ಮತ್ತು ಬೆಳವಣಿಗೆ

೧.೩. ಸ್ವ ಸಹಾಯ ಗುಂಪುಗಳ ವರ್ಗೀಕರಣ

೧. ಪ್ರಸ್ತಾವನೆ

೧.೧:- ಸ್ವ-ಸಹಾಯ ಗುಂಪುಗಳು:

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟಗಳಲ್ಲಿ ಬಡತನದ ನಿವಾರಣೆಯು ಹತ್ತು ಹಲವು ಅಭಿವೃದ್ಧಿ ಕಾರ್ಯಕ್ರಮಗಳ ಯಶಸ್ವೀ ಅನುಷ್ಠಾನವನ್ನು ಬಯಸುತ್ತದೆ.[1] ಸ್ವಾತಂತ್ರ್ಯ ನಂತರದ ಅವಧಿಯಲ್ಲಿ ದೇಶದಲ್ಲಿ ಜಾರಿಗೊಳಿಸಲಾದ ಸಹಸ್ರಾರು ಬಡತನ ನಿವಾರಣೆಯ ಮತ್ತು ಉದ್ಯೋಗ ಸೃಷ್ಟಿಯ ಕಾರ್ಯಕ್ರಮಗಳು ಸ್ವಲ್ಪ ಮಟ್ಟಿನ ಯಶಸ್ಸಿಗೆ ಮಾತ್ರ ಪಾತ್ರವಾಗಿದೆ. ಇಂತಹ ಕಾರ್ಯಕ್ರಮಗಳು ಕೇವಲ ನಾಮಕಾವಸ್ಥೆಯಾಗಿದ್ದರಿಂದ ಜನರ ಪಾಲ್ಗೊಳ್ಳುವಿಕೆಯ ಕೊರತೆ, ಸ್ಥಳೀಯ ಸಂಪನ್ಮೂಲಗಳ ಬಳಕೆಗೆ ಸರಿಯಾದ ಅವಕಾಶ ಕಲ್ಪಿಸದಿದ್ದುದು, ತರಬೇತಿ ಮತ್ತು ಉದ್ಯೋಗ ಸೃಷ್ಠಿಯ ಕಾರ್ಯಕ್ರಮಗಳ ನಡುವೆ ಸಮರ್ಪಕವಾಗಿ ಸಂಪರ್ಕ ಕೊಂಡಿಯನ್ನು ಅಭಿವೃದ್ಧಿ ಪಡಿಸಲು ವಿಫಲತೆ ಮುಂತಾದುವು ಈ ಕಾರ್ಯಕ್ರಮಗಳು ಸಂಪೂರ್ಣ ಫಲಪ್ರದವಾಗದೇ ಇರಲು ಕಾರಣಗಳಾಗಿವೆ.

ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಸ್ವ ಸಹಾಯ ಸಂಘಗಳು ಪ್ರತ್ಯೇಕ ಸ್ಥಾನದಲ್ಲಿ ನಿಲ್ಲುತ್ತದೆ ಮತ್ತು ಬಡತನ ನಿವಾರಣೆಯಲ್ಲಿ ಮಹತ್ವಪೂರ್ಣವಾದ ಪಾತ್ರವನ್ನೂ ವಹಿಸುತ್ತದೆ. ಸ್ವ ಸಹಾಯ ಸಂಘಗಳು ಕೃಷಿ ಕಾರ್ಮಿಕರ, ಗ್ರಾಮೀಣ ಪ್ರದೇಶಗಳ ಅಸಂಘಟಿತ ಕುಶಲಕರ್ಮಿಗಳ ಮತ್ತು ಒಟ್ಟಾರೆಯಾಗಿ ಬಡವರ ಬದುಕನ್ನು ಹಸನುಗೊಳಿಸಲು ಹುಟ್ಟಿಕೊಂಡ ವೇದಿಕೆಗಳಾವೆ. ಮಹಿಳೆಯರ ಮತ್ತು ಆರ್ಥಿಕವಾಗಿ ಬಡತನದಲ್ಲಿರುವ ಜನರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಉನ್ನತಿಯಲ್ಲಿ ಈ ಗುಂಪುಗಳು ಅಸಾಧಾರಣ ಪಾತ್ರವನ್ನು ವಹಿಸಿವೆ.

ಭಾರತದಲ್ಲಿ ಬಹಳ ದೀರ್ಘ ಅವಧಿಗೆ ಜಾರಿಯಲ್ಲಿದ್ದ ಸಮಗ್ರ ಗ್ರಾಮೀಣ ಅಭಿವೃದ್ಧಿಯೋಜನೆ (ಐ. ಆರ್. ಡಿ. ಪಿ)ಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಸೂಕ್ತ. 1979 ರಿಂದ 1999 ರವರೆಗೆ ಇಪ್ಪತ್ತು ವರ್ಷಗಳ ಕಾಲ ಅನುಷ್ಠಾನದಲ್ಲಿದ್ದ ಈ ಯೋಜನೆಯು ಇಡೀ ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಸಾಲವನ್ನೂ ಆಧರಿಸಿದ ಬಡತನ ನಿರ್ಮೂಲನ ಕಾರ್ಯಕ್ರಮವಾಗಿತ್ತು. ತನ್ನ ಗಾತ್ರ, ಸಾಲವನ್ನು ಪಡೆದವರ ಸಂಖ್ಯೆ, ಹಣದ ಹೂಡಿಕೆಯ ಮಟ್ಟ ಮತ್ತು ಕಾರ್ಯಾಚರಣೆಯಲ್ಲಿದ್ದ ಪ್ರದೇಶ ಇವುಗಳನ್ನು ಆಧಾರವಾಗಿಟ್ಟುಕೊಂಡು ಗಮನಿಸಿದಾಗ ಇದೊಂದು ಸರಿಸಾಟಿಯಿಲ್ಲದ ಕಾರ್ಯಕ್ರಮವಾಗಿತ್ತು ಎಂಬುದು ಮನವರಿಕೆಯಾಗುತ್ತದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯು ಬಡತನ ನಿವಾರಣೆಯ ದಿಸೆಯಲ್ಲಿ ಸ್ಪಷ್ಟ ಹಾಗೂ ನಿರ್ದಿಷ್ಟ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಬಡತನ ರೇಖೆಯಿಂದ ಕೆಳಗಿರುವ ಗ್ರಾಮೀಣ ಜನರಿಗೆ ಆದಾಯ ಸೃಷ್ಟಿಯ ಆಸ್ತಿಗಳನ್ನು

ಮತ್ತು ಸ್ವಂತ ಉದ್ಯೋಗಾವಕಾಶಗಳನ್ನು ಒದಗಿಸುವ ಗುರಿಯನ್ನು ಈ ಕಾರ್ಯಕ್ರಮವು ಹೊಂದಿತ್ತು. ಆದರೆ ಬಹಳ ನಿರೀಕ್ಷೆಗಳನ್ನಿಟ್ಟುಕೊಂಡು, ಮಹತ್ವಾಕಾಂಕ್ಷೆಯಿಂದ ಆರಂಭಿಸಲಾದ ಈ ಯೋಜನೆಯು ಸರಿಯಾದ ಯಶಸ್ಸನ್ನು ಕಾಣಲಿಲ್ಲ. ಆಸ್ತಿಯ ಸೃಷ್ಟಿ, ಉದ್ಯೋಗ ಲಭ್ಯತೆ, ಸಾಲದ ಬಳಕೆ, ಆದಾಯ ಸೃಷ್ಟಿ, ಸಾಲದ ಮರುಪಾವತಿ ಮುಂತಾದ ಯಾವುದೇ ವಿಷಯವನ್ನು ಗಮನಿಸಿದರೂ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿನ ಪ್ರಗತಿ ಪ್ರೋತ್ಸಾಹದಾಯಕವಾಗಿರಲಿಲ್ಲ ಮತ್ತು ಕೆಲವೇ ಕೆಲವು ಸಂಖ್ಯೆಯ ಫಲಾನುಭವಿಗಳು ಬಡತನದ ರೇಖೆಯಿಂದ ಮೇಲೆ ಬಂದರು.

ಈ ಹಿನ್ನೆಲೆಯಲ್ಲಿ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ವಿಫಲತೆಯಿಂದ ಕಲಿತ ಪಾಠಗಳ ಆಧಾರದಲ್ಲಿ ಹೊಸ ರೀತಿಯ ಕಾರ್ಯತಂತ್ರವನ್ನು ಅನುಸರಿಸಬೇಕಾದ ಮತ್ತು ಹೊಸ ಯೋಜನೆಯನ್ನು ಅಳವಡಿಸಬೇಕಾದ ಅವಶ್ಯಕತೆ ಕಂಡುಬಂತು. ಆದ್ದರಿಂದ ಗುಂಪು ಚಟುವಟಿಕೆಗಳನ್ನು ಉತ್ತೇಜಿಸುವ, ಬೇಡಿಕೆಯಲ್ಲಿರುವ ಸರಕುಗಳನ್ನು ಗುಂಪಿನಲ್ಲಿ ಉತ್ಪಾದಿಸುವ ಮತ್ತು ಉತ್ಪಾದನಾ ಚಟುವಟಿಕೆಗಳಿಗೆ ಸಾಕಷ್ಟು ಪ್ರಮಾಣದ ಹಣಕಾಸಿನ ಸೌಲಭ್ಯವನ್ನು ಒದಗಿಸುವ ಚಿಂತನೆಗೆ ಪುಷ್ಟಿ ದೊರಕಿತು. 1999 ರ ಈಚೆಗೆ ಸರಕಾರವು ಫಲಾನುಭವಿಗಳನ್ನು ಗುಂಪಾಗಿ ಗುರುತಿಸಿ, ಗುಂಪು ಚಟುವಟಿಕೆಗಳಿಗೆ ಮಹತ್ವ ನೀಡಲಾರಂಭಿಸಿತು.

ಮಿತವ್ಯಯ, ಸಣ್ಣ ಮೊಬಲಗಿನ ಉಳಿತಾಯಗಳನ್ನು ಕ್ರೋಢೀಕರಿಸಲು ಅವಕಾಶಗಳ ಕಲ್ಪನೆ, ಕಿರು ಹಣಕಾಸು ಮುಂತಾದವುಗಳ ಬಗೆಗೆ ನಬಾರ್ಡ್‌ನ ಚಿಂತನೆ ಮತ್ತು ಪ್ರಯತ್ನಗಳು ಹೆಚ್ಚಿದವು. ಸ್ವ ಸಹಾಯ ಗುಂಪುಗಳು ದೇಶದಾದ್ಯಂತ ವ್ಯಾಪಕವಾಗಿ ಹರಡಲು ಮತ್ತು ಪ್ರವರ್ಧಮಾನಕ್ಕೆ ಬರಲು ಈ ಚಿಂತನೆ ಮತ್ತು ಪ್ರಯತ್ನಗಳು ಗಣನೀಯವಾಗಿ ಸಹಾಯ ಮಾಡಿದವು.

ಒಟ್ಟಿನಲ್ಲಿ ಸ್ವ ಸಹಾಯ ಗುಂಪುಗಳ ಹುಟ್ಟಿನಿಂದ ಗ್ರಾಮೀಣ ಭಾರತದ ಒಟ್ಟು ಸ್ವರೂಪ ಬದಲಾಗತೊಡಗಿತು. ಬಾಂಗ್ಲಾದೇಶದ ಪ್ರೋ. ಮೊಹಮ್ಮದ್ ಯೂನಸ್ ಹಣಕಾಸು ಯೋಜನೆಯನ್ನು ತಮ್ಮ ದೇಶದಲ್ಲಿ ಆರಂಭಿಸಿ ಇಡೀ ವಿಶ್ವಕ್ಕೆ ಪರಿಚಯಿಸಿದರು. ಜೊತೆಗೆ ವಿಶ್ವದ ಅತಿ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಗೆ ಪಾತ್ರರಾದರು. ಇದು ಸ್ವ ಸಹಾಯ ಗುಂಪುಗಳ ಮಹತ್ವಕ್ಕೆ ವಿಶ್ವ ನೀಡಿದ ಮನ್ನಣೆಯಾಗಿದೆ.

೧.೧.೧ ಸ್ವ ಸಹಾಯ ಗುಂಪು ಮತ್ತು ಸ್ವ ಸಹಾಯ ಸಂಘದ ಅರ್ಥ

ಜನರ ಆರ್ಥಿಕ ಉನ್ನತಿ, ಸಾಮಾಜಿಕ ವಿಕಾಸ, ಶೈಕ್ಷಣಿಕ ಅಭಿವೃದ್ಧಿ ಮೊದಲಾದ ಉದ್ದೇಶಗಳನ್ನಿಟ್ಟುಕೊಂಡು ಸ್ವಯಂ ಸ್ಫೂರ್ತಿಯಿಂದ ಕೆಲಸ ಮಾಡುತ್ತಿರುವ ಸಂಸ್ಥೆಗಳನ್ನು `ಸ್ವಯಂ ಸೇವಾ


ಸಂಸ್ಥೆಗಳು' ಎಂದು ಕರೆಯಲಾಗುತ್ತದೆ. ಮತ್ತು ಈ ಸಂಸ್ಥೆಗಳಲ್ಲಿ ಸಕ್ರಿಯವಾಗಿರುವ ಗುಂಪುಗಳನ್ನು ಸ್ವ ಸಹಾಯ ಗುಂಪುಗಳೆಂದು ಕರೆಯಲಾಗುತ್ತದೆ.[2]

ಸಮಾಜದ ಬಡ ಕುಟುಂಬ ಅಥವಾ ಬಡತನದ ಹಿನ್ನೆಲೆಯಿರುವ ಸಮಾನ ಮನಸ್ಸಿನ ಪರಸ್ಪರ ಪ್ರೀತ್ಯಾದರಗಳಿಂದ ಕೂಡಿದ 5-20 ಜನ ಸದಸ್ಯರು ಒಂದೆಡೆ ಸೇರಿ ತಮ್ಮ ಆರ್ಥಿಕ ಸಾಮಾಜಿಕ ಅಭಿವೃದ್ಧಿಗಾಗಿ ಸ್ವ-ಇಚ್ಛೆಯಿಂದ ರಚಿಸಿಕೊಂಡ ಗುಂಪಿಗೆ ಸ್ವ-ಸಹಾಯ ಸಂಘ ಎಂದು ಕರೆಯುವರು.[3]

ಸ್ವ ಸಹಾಯ ಸಂಘಟನೆಗಳು ಸಹಕಾರಿ ತತ್ತ್ವವನ್ನು ಒಳಗೊಂಡಿದೆ. 'ತಾನು ಎಲ್ಲರಿಗಾಗಿ; ಎಲ್ಲರೂ ತನಗಾಗಿ' ಎಂಬ ತತ್ವವೇ ಸ್ವ ಸಹಾಯ ಸಂಘಗಳ ರಚನೆಗೆ ಮೂಲವಾಗಿದೆ.

ಸ್ವ ಸಹಾಯ ಗುಂಪುಗಳ ಪರಿಕಲ್ಪನೆ

ಪ್ರಾರಂಭದಲ್ಲಿ ಸ್ವ ಸಹಾಯ ಗುಂಪುಗಳು ಗ್ರಾಮೀಣ ಭಾಗದಲ್ಲಿ ಕಾರ್ಯಾರಂಭ ಮಾಡಿದವು. ಮತ್ತು ಇವುಗಳ ಯಶಸ್ಸಿನಿಂದ ಪ್ರೇರಣೆಗೊಂಡು ನಗರ ಪ್ರದೇಶಗಳಲ್ಲೂ ಇಂದು ಸ್ವ ಸಹಾಯ ಗುಂಪುಗಳನ್ನು ಕಾಣುವಂತಾಗಿದೆ. ಜೊತೆಗೆ ನಿರುದ್ಯೋಗ, ಬಡತನ, ಅನಕ್ಷರತೆ, ಅಜ್ಞಾನಗಳಂತಹ ಪಿಡುಗುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಸ್ವ ಸಹಾಯ ಸಂಘಗಳು ಸಹಕರಿಸುತ್ತಿವೆ.



೧.೧.೨. ಸ್ವ ಸಹಾಯ ಗುಂಪುಗಳ ಲಕ್ಷಣಗಳು

ಸ್ವ ಸಹಾಯ ಗುಂಪುಗಳ ಸಾಮಾನ್ಯ ಲಕ್ಷಣಗಳು ಈ ಕೆಳಗಿನಂತಿವೆ.

➢ 5 ರಿಂದ 20 ಜನರ ಗುಂಪು:

ಸಾಮಾನ್ಯವಾಗಿ ಸ್ವಸಹಾಯ ಗುಂಪಿನಲ್ಲಿ 5ರಿಂದ 20ಮಂದಿ ಸದಸ್ಯರಿರಬೇಕು. ಹೀಗೆ ಚಿಕ್ಕ ಗುಂಪಾದಾಗ ಸಭೆಗಳನ್ನು ಸೇರಿಸಲು ಮತ್ತು ವಿಚಾರ ವಿನಿಮಯ ಮಾಡಿಕೊಳ್ಳಲು ಸುಲಭ ಸಾಧ್ಯವಾಗುತ್ತದೆ.

ಕೆಲವು ಕಡೆ ನಿಖರವಾಗಿ 5 ಸಂಖ್ಯೆಯ ಸದಸ್ಯರನ್ನು ಹೊಂದಿರುವ ಉದಾಹರಣೆಗಳು ದೊರೆಯುತ್ತದೆ. ಆದರೆ ಇಷ್ಟು ಸಣ್ಣ ಸಂಖ್ಯೆಯ ಸದಸ್ಯರನ್ನು ಹೊಂದಿರುವ ಗುಂಪುಗಳು ವ್ಯವಹಾರ ನಿರ್ವಹಣೆಯ ದೃಷ್ಟಿಯಿಂದ ಸಬಲವಾಗಲಾರವು ಹಾಗೂ ಪರಿಪೂರ್ಣ ಗುಂಪುಗಳಾಗಲಾರವು.

ಅಂತೆಯೇ ಸದಸ್ಯರ ಸಂಖ್ಯೆ ಇಪ್ಪತ್ತನ್ನು ಮೀರಿದರೆ ಅದು ವ್ಯವಹಾರ ನಿರ್ವಹಣೆಯ ದೃಷ್ಟಿಯಿಂದ ನಿಭಾಯಿಸಲಾಗದ ಗುಂಪಾಗಬಹುದು ಹಾಗೂ ಸದಸ್ಯರಲ್ಲಿ ಸಮಾನ ಚಿಂತನೆ ಮತ್ತು ಸಮಾನ ಯೋಚನಾ ಲಹರಿಯನ್ನು ತರುವುದು ಕಷ್ಟವಾಗುತ್ತದೆ.

➢ ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯ ಜನರ ಗುಂಪು:

ಸ್ವ ಸಹಾಯ ಗುಂಪು ಸಮಾನವಾದ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಹೊಂದಿರುವ ಜನರ ಗುಂಪು ಆಗಿರುತ್ತದೆ. ಸ್ವ ಸಹಾಯ ಗುಂಪಿನ ಸದಸ್ಯರು ಸಾಮಾನ್ಯವಾಗಿ ಬಡತನದ ರೇಖೆಯಿಂದ ಕೆಳಗಿರುವವರಾಗಿರುತ್ತಾರೆ. ಅಂತೆಯೇ ಆರ್ಥಿಕವಾಗಿ ಸಭಲರಾಗಿರುವವರು ಅಥವಾ ಉನ್ನತ ಶಿಕ್ಷಣವನ್ನು ಪಡೆದು ಕೈತುಂಬ ವೇತನ ಪಡೆಯುತ್ತಿರುವ, ಪಟ್ಟಣದಲ್ಲಿ ನೆಲೆಸಿರುವ ವ್ಯಕ್ತಿಗಳು ಗ್ರಾಮೀಣ ಪ್ರದೇಶದಲ್ಲಿ ಬಡವರ್ಗಗಳ ಜನರು ರಚಿಸಿಕೊಂಡಿರುವ ಸ್ವಸಹಾಯ ಗುಂಪಿನಲ್ಲಿ ಸದಸ್ಯರಾದರೆ, ಅದು ಆಭಾಸವಾಗುತ್ತದೆ ಮತ್ತು ಗುಂಪಿನ ಧ್ಯೇಯವು ಈಡೇರಲಾರದು.

➢ ಪರಸ್ಪರ ಗೌರವಾಧರ:

ಸಂಘದಲ್ಲಿ ಸದಸ್ಯರಾಗಿರುವವರು ಪರಸ್ಪರ ಗೌರವ ಮತ್ತು ಹೊಂದಾಣಿಕೆಯಿಂದ ಇರಬೇಕಾಗುತ್ತದೆ. ಮತ್ತು ಇಲ್ಲಿಯ ಪ್ರತಿಯೊಂದು ಚಟುವಟಿಕೆಗಳು ಪ್ರಜಾಪ್ರಭುತ್ವದ ನೆಲೆಯಲ್ಲಿಯೇ ನಡೆಯುತ್ತದೆ.

➢ ನೋಂದಾಯಿತವಲ್ಲದ ಮತ್ತು ವಿಧ್ಯುಕ್ತವಲ್ಲದ ಗುಂಪು:

ಸ್ವ ಸಹಾಯ ಗುಂಪು ನೊಂದಾಯಿಸಲ್ಪಟ್ಟಿರದ ಗುಂಪು ಆಗಿರುತ್ತದೆ. ಯಾವುದೇ ಸರಕಾರಿ ಕಛೇರಿಯಲ್ಲಿ ನೋಂದಾವಣೆ ಶುಲ್ಕವನ್ನು ಪಾವತಿಸಿ, ಗುಂಪನ್ನು ರಚಿಸಲು ಅನುಮತಿ ಪಡೆದು ನೋಂದಾವಣೆ ಮಾಡಿಸಿಕೊಂಡು ಅಸ್ತಿತ್ವಕ್ಕೆ ಬರಬೇಕಾದ ಗುಂಪು ಇದಲ್ಲ. ಗುಂಪಿನ ಸದಸ್ಯರ ಸಂಖ್ಯೆ ಇಪ್ಪತ್ತನ್ನು ಮೀರಿದರೆ ಕಂಪೆನಿ ಕಾಯಿದೆಯ ಪ್ರಕಾರ ಅದನ್ನು ನೋಂದಾವಣೆ ಮಾಡಿಸಬೇಕಾಗುತ್ತದೆ.

➢ ವಿಕೇಂದ್ರೀಕೃತ ನಾಯಕತ್ವ:

ಸ್ವ ಸಹಾಯ ಸಂಘಗಳಲ್ಲಿ ಎಲ್ಲಾ ಸದಸ್ಯರು ಸಮಾನರಾಗಿ ಜವಾಬ್ದಾರಿ ಹೊರುವ ಪದ್ಧತಿಯನ್ನು ಅಳವಡಿಸಲಾಗಿದೆ. ಸಂಘದ ದಿನನಿತ್ಯದ ವ್ಯವಹಾರವನ್ನು ನೋಡಿಕೊಳ್ಳಲು ಎಲ್ಲಾ ಸದಸ್ಯರು ಒಮ್ಮತದ ಮೂಲಕ ಇಬ್ಬರು ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಾರೆ. ಪ್ರತಿನಿಧಿಗಳಾದವರು ಸಂಘದ ಲೆಕ್ಕಪತ್ರ, ಅಂಕಿಅಂಶಗಳ ವಿವರ, ಪತ್ರವ್ಯವಹಾರ ಮುಂತಾದ ಕೆಲಸ ಕಾರ್ಯಗಳನ್ನು ನಿಭಾಯಿಸಬೇಕಾಗುತ್ತದೆ. ಇದಲ್ಲದೇ ಬ್ಯಾಂಕಿನ ಖಾತೆಯ ಸಾಲದ ವ್ಯವಹಾರಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಇದರ ಹೊರತಾಗಿ ಮತ್ತಾವುದೇ ವಿಶೇಷ ಅಧಿಕಾರ ಪ್ರತಿನಿಧಿಗಳಿಗೆ ಇರುವುದಿಲ್ಲ. ಇಲ್ಲಿ ಬಹುಮತದ ತೀರ್ಮಾನವೇ ಅಂತಿಮ.

➢ ಉಳಿತಾಯಗಳನ್ನು ಕೂಡಿಸುವಿಕೆ:

ಗುಂಪಿನ ಸದಸ್ಯರು ತಮ್ಮಲ್ಲಿರುವ ಸಣ್ಣ ಮೊಬಲಗಿನ ಉಳಿತಾಯಗಳನ್ನು ಕೂಡು ನಿಧಿಗೆ ಹಾಕಬೇಕು. ಅಂದರೆ ಗುಂಪಿನ ಸದಸ್ಯರು ಸಭೆ ಸೇರಿದಾಗ ಅವರು ತಮ್ಮ ಉಳಿತಾಯದ ಹಣವನ್ನು ಸಭೆಯಲ್ಲಿ ಇಡಬೇಕು. ಸದಸ್ಯರ ಸಣ್ಣ ಉಳಿತಾಯಗಳನ್ನು ಕೂಡಿಸಿ ದೊಡ್ಡ ಮೊತ್ತವಾಗಿ ಮಾಡಲು ಸ್ವ ಸಹಾಯ ಗುಂಪುಗಳು ಅತ್ಯುತ್ತಮ ವೇದಿಕೆಯ ರೀತಿಯಲ್ಲಿ ಕೆಲಸ ನಿರ್ವಹಿಸುತ್ತವೆ.

➢ ವಾರದ ಸಭೆಗಳನ್ನು ನಡೆಸುವಿಕೆ:

ಸ್ವಸಹಾಯ ಗುಂಪಿನ ಸದಸ್ಯರು ಕ್ರಮಬದ್ಧವಾಗಿ, ನಿಗದಿಗೊಳಿಸಿರುವಂತೆ ಸಭೆಗಳನ್ನು ನಡೆಸಬೇಕು. ನಿಯಮಿತವಾಗಿರುವಂತೆ ಮತ್ತು ಕ್ರಮಬದ್ಧವಾಗಿ ಸಭೆಗಳನ್ನು ನಡೆಸುವುದು ಎಂದಾಗ ಎಷ್ಟು ಅವಧಿಯ ಅಂತರವನ್ನಿಟ್ಟು ಸಭೆಗಳನ್ನು ನಡೆಸುವುದು ಎಂಬ ಪ್ರಶ್ನೆ ಎದುರಾಗುತ್ತದೆ. ಮತ್ತು

ತಿಂಗಳಿಗೊಮ್ಮೆ ಸಭೆ ನಡೆಸಿದರೆ ಜನರು ಪರಸ್ಪರ ಬೆರೆಯುವ ಸಮಯವು ತುಂಬಾ ಅತಿಯಾಗುತ್ತದೆ. ಅಥವಾ ಪ್ರತಿದಿನ ಸಭೆ ಸೇರಿದರೆ ಆಗಲೂ ಅದು ತ್ರಾಸದಾಯಕವಾಗುತ್ತದೆ. ಹಾಗಾಗಿ ವಾರಕ್ಕೆ ಒಂದರಂತೆ ಸಭೆ ನಡೆಸುವುದು ಸಮಂಜಸವಾಗುತ್ತದೆ.

- **ಸಹಕಾರ ತತ್ವದ ಅನುಷ್ಠಾನ:**

"ಪ್ರತಿಯೊಬ್ಬನೂ ಎಲ್ಲರಿಗಾಗಿ ಮತ್ತು ಎಲ್ಲರೂ ಪ್ರತಿಯೊಬ್ಬನಿಗಾಗಿ"[4] ಇದು ಸಹಕಾರದ ತತ್ವದ ಮೂಲ ಮಂತ್ರ. ಸ್ವ ಸಹಾಯ ಸಂಘಗಳು ನಿಂತಿರುವುದೂ ಇದೇ ತತ್ವದ ಮೇಲೆ. ಸ್ವ ಸಹಾಯ ಗುಂಪಿನಲ್ಲಿ ಪ್ರತಿಯೊಬ್ಬ ಸದಸ್ಯನೂ ಇತರ ಎಲ್ಲಾ ಸದಸ್ಯರ ಅಭ್ಯುದಯದ ಬಗ್ಗೆ ಚಿಂತಿಸುತ್ತಾನೆ ಮತ್ತು ಎಲ್ಲಾ ಸದಸ್ಯರು ಪ್ರತಿಯೊಬ್ಬ ಸದಸ್ಯನ ಏಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಗುಂಪಿನಲ್ಲಿ ಕೆಲಸ ನಿರ್ವಹಿಸುತ್ತಾರೆ.

- **ರಾಜಕೀಯೇತರ ಗುಂಪುಗಳು:**

ಸ್ವ ಸಹಾಯ ಸಂಘಗಳಲ್ಲಿ ಯಾವುದೇ ರಾಜಕೀಯ ಪಕ್ಷ ಹಸ್ತಕ್ಷೇಪ ಮಾಡದೇ ಜೊತೆಗೆ ಸದಸ್ಯರು ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೆ ಕೇವಲ ತಮ್ಮ ಆರ್ಥಿಕ, ಸಾಮಾಜಿಕ ಅಭ್ಯುದಯಕ್ಕೆ ಶ್ರಮಿಸುತ್ತಿರುವುದು ಸ್ವ ಸಹಾಯ ಸಂಘದ ವೈಶಿಷ್ಟವಾಗಿದೆ.

೧.೧.೩:-ಸ್ವ ಸಹಾಯ ಸಂಘಗಳ ಪ್ರಾಮುಖ್ಯತೆ

ಬಡತನ ನಿವಾರಣೆ :

ಬಡತನ ನಿವಾರಣೆಯು ಸ್ವ ಸಹಾಯ ಸಂಘಗಳ ಮುಖ್ಯವಾದ ಗುರಿಯಾಗಿರುತ್ತದೆ. ಭಾರತ ಸರಕಾರವು ಪಂಚವಾರ್ಷಿಕ ಯೋಜನೆಯ ಸಹಿತ ಹತ್ತು ಹಲವು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಬಡತನವನ್ನು ನಿವಾರಿಸುವುದು ಸಾಧ್ಯವಾಗಿಲ್ಲ. ಸರಕಾರದ ಸಮೀಕ್ಷೆಯ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 2400 ಕ್ಯಾಲೋರಿ ಮತ್ತು ನಗರ ಪ್ರದೇಶದಲ್ಲಿ 2100 ಕ್ಯಾಲೋರಿಗಳಿಗಿಂತ ಕಡಿಮೆ ಗುಣಮಟ್ಟದ ಆಹಾರ ಅನುಭೋಗಿಸುವವರು "ಬಡವರು" ಎಂದು ಕರೆಯಲ್ಪಡುತ್ತಾರೆ.[5] ಸ್ವ ಸಹಾಯ ಸಂಘಗಳು ತಮ್ಮ ಸದಸ್ಯರಿಗೆ ಉಳಿತಾಯ ಮಾಡುವುದು, ಅಗತ್ಯವಿರುವ ಉದ್ದೇಶಗಳಿಗೆ ಸಾಲಗಳನ್ನು

ಪಡೆಯುವುದು, ಆಹಾರ ಸೃಷ್ಟಿಸಿಕೊಳ್ಳುವಂತಹ ವಿಷಯಗಳನ್ನು ತಿಳಿಸಿಕೊಟ್ಟು ಆರ್ಥಿಕಾಭಿವೃದ್ಧಿ ಹೊಂದುವಂತೆ ಮಾಡಿ ಬಡತನದ ರೇಖೆಯಿಂದ ಮೇಲೆ ಬರಲು ಸಹಕರಿಸುತ್ತಿದೆ.

ಮಿತವ್ಯಯವನ್ನು ಪ್ರೋತ್ಸಾಹಿಸುವುದು:

ಬಡವರ್ಗಗಳ ಜನರು ತಮ್ಮ ಆದಾಯವನ್ನು ಮಿತವಾಗಿ ಖರ್ಚುಮಾಡುವ ಮತ್ತು ಆದಾಯದಲ್ಲಿ ಸ್ವಲ್ಪ ಭಾಗವನ್ನು ಉಳಿತಾಯ ಮಾಡುವ ಮನೋಭಾವನೆಯನ್ನು ಸ್ವ ಸಹಾಯ ಗುಂಪುಗಳು ಬೆಳೆಸುತ್ತವೆ. ಅಂದರೆ ಉಳಿತಾಯ ಮಾಡಲು ಒಂದು ವೇದಿಕೆ ಇದ್ದಾಗ ಮಾತ್ರ ಜನರು ತಮ್ಮಲ್ಲಿರುವ ಅಲ್ಪ ಆದಾಯದಲ್ಲಿಯೂ ಮಿತವ್ಯಯದಿಂದ ಸ್ವಲ್ಪ ಹಣವನ್ನು ಉಳಿತಾಯ ಮಾಡಲು ಪ್ರೇರಣೆಗೊಳ್ಳುತ್ತಾರೆ.

ಉಳಿತಾಯಗಳ ಸಂಗ್ರಹಣೆ:

ಸದಸ್ಯರು ಕ್ರಮಬದ್ಧವಾಗಿ ಮತ್ತು ನಿಗದಿತ ಮೊತ್ತದಲ್ಲಿ ಉಳಿತಾಯ ಮಾಡುವಂತೆ ಪ್ರೇರೇಪಿಸುವುದು ಸ್ವ ಸಹಾಯ ಗುಂಪಿನ ಒಂದು ಅತಿ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಪ್ರತಿ ವಾರದ ಸಭೆಯಲ್ಲಿ ಸದಸ್ಯರು ಉಳಿತಾಯದ ಹಣವನ್ನು ಗುಂಪಿನ ಮುಂದೆ ಇಡಬೇಕೆಂಬ ನಿಯಮವಿರುವುದರಿಂದ ಸದಸ್ಯರು ಅನಿವಾರ್ಯವಾಗಿ ಉಳಿತಾಯ ಮಾಡಲು, ಹಾಗೂ ಈ ಹಣವು ಸಂಗ್ರಹಗೊಂಡು ದೊಡ್ಡ ಮೊತ್ತವಾಗಲು ಸಾಧ್ಯವಾಗುತ್ತದೆ.

ಸದಸ್ಯರ ಆರ್ಥಿಕ ಉನ್ನತಿಯ ಸಾಧನೆ:

ಸದಸ್ಯರ ಆರ್ಥಿಕ ಉನ್ನತಿಯನ್ನು ಸಾಧಿಸುವುದು ಸ್ವ ಸಹಾಯ ಗುಂಪುಗಳ ಮೂಲ ಗುರಿಯಾಗಿರುತ್ತದೆ. ಸದಸ್ಯರು ತಮ್ಮ ಉಳಿತಾಯದ ಹಣವನ್ನು ಕೂಡಿಸುವುದು, ಉಳಿತಾಯದ ಮೊತ್ತದಿಂದ ಸಾಲ ಪಡೆಯುವುದು, ಬ್ಯಾಂಕಿನಿಂದ ಸಾಲ ಪಡೆಯುವುದು, ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳುವುದು ಮೊದಲಾದವುಗಳನ್ನು ನಿರ್ವಹಿಸಿದಾಗ ಅವರ ಉನ್ನತಿ ಸ್ವಾಭಾವಿಕವಾಗಿ ಸಾಧನೆಯಾಗುತ್ತದೆ.

ಸದಸ್ಯರ ಸಾಮಾಜಿಕ ಮತ್ತು ಶೈಕ್ಷಣಿಕ ವಿಕಾಸ:

ಸದಸ್ಯರ ಆರ್ಥಿಕ ಪ್ರಗತಿ ಸಾಧನೆಗೆ ಮಾತ್ರವಲ್ಲದೆ ಅವರ ಸಾಮಾಜಿಕ ಮತ್ತು ಶೈಕ್ಷಣಿಕ ವಿಕಾಸಕ್ಕೂ ನೆರವಾಗುವುದು ಸ್ವ ಸಹಾಯ ಗುಂಪುಗಳ ಉದ್ದೇಶವಾಗಿರುತ್ತದೆ. ಸ್ವ ಸಹಾಯ ಗುಂಪುಗಳಲ್ಲಿ

ವಿಚಾರ ವಿನಿಮಯ ಮಾಡಿಕೊಳ್ಳುವುದರಿಂದ ಅವರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಉನ್ನತಿ ಸಾಧ್ಯವಾಗುತ್ತದೆ.

ಗ್ರಾಮೀಣ ಅಭಿವೃದ್ಧಿ:-

ಸ್ವ ಸಹಾಯ ಗುಂಪುಗಳಿಂದ ಗ್ರಾಮೀಣ ಅಭಿವೃದ್ಧಿಯು ಸುಲಭವಾಗಿ ಸಾಧ್ಯವಾಗುತ್ತದೆ. ಜನರ ಆದಾಯವು ಹೆಚ್ಚುತ್ತದೆ. ಉತ್ಪಾದನೆಯು ಜಾಸ್ತಿಯಾಗುತ್ತದೆ. ಉದ್ಯೋಗಾವಕಾಶಗಳು ಸಿಗುತ್ತವೆ, ಆಸ್ತಿಗಳು ಸೃಷ್ಟಿಯಾಗುತ್ತವೆ ಮತ್ತು ಜನರ ಜೀವನ ಮಟ್ಟವು ಉತ್ತಮಗೊಂಡು ಇದರಿಂದ ಗ್ರಾಮೀಣಾಭಿವೃದ್ಧಿ ಸಾಧ್ಯವಾಗುತ್ತದೆ.

ಕಿರು ಉದ್ಯಮಗಳ ಸ್ಥಾಪನೆ:-

ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ಜನರಲ್ಲಿ ಉತ್ಪಾದನ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಉದ್ಯಮಗಳನ್ನು ಸ್ಥಾಪಿಸಲು ಸಾಕಷ್ಟು ಹಣಕಾಸಿನ ಸಂಪನ್ಮೂಲಗಳಿರುವುದಿಲ್ಲ. ಅಲ್ಲದೆ ಉತ್ಪಾದನಾ ಚಟುವಟಿಕೆಗಳನ್ನು ನಿರ್ವಹಿಸಲು ಅವರಿಗೆ ಸರಿಯಾದ ಮಾಹಿತಿ ಮತ್ತು ಕುಶಲತೆಯ ಕೊರತೆ ಇರುತ್ತದೆ. ಸ್ವ ಸಹಾಯ ಗುಂಪುಗಳು ಈ ಕೊರತೆಯನ್ನು ನಿವಾರಿಸಿ ಕಿರು ಉದ್ಯಮಗಳ ಸ್ಥಾಪನೆಗೆ ಗ್ರಾಮೀಣ ಜನರನ್ನು ಪ್ರೇರೇಪಿಸುತ್ತದೆ. ಕಿರು ಉದ್ಯಮಗಳು ಎಂದರೆ ಕಡಿಮೆ ಬಂಡವಾಳವನ್ನು ಅಪೇಕ್ಷಿಸುವ, ಸಣ್ಣ ಪ್ರಮಾಣದ ಮತ್ತು ಸ್ಥಳೀಯವಾಗಿ ದೊರಕುವ ಕಚ್ಚಾ ವಸ್ತುಗಳನ್ನು ಉಪಯೋಗಿಸಿಕೊಂಡು ನಿರ್ವಹಿಸುವಂತಹ ಉತ್ಪಾದನಾ ಚಟುವಟಿಕೆಗೆಳು ಎಂದರ್ಥ. ಉಳಿತಾಯಗಳ ಮೂಲಕ, ಆಂತರಿಕ ಸಾಲದ ಮೂಲಕ ಮತ್ತು ಬ್ಯಾಂಕಿನಿಂದ ಪಡೆಯುವ ಸಾಲದ ಮೂಲಕ ಕಿರು ಉದ್ಯಮಕ್ಕೆ ಹಣಕಾಸಿನ ಸಂಪನ್ಮೂಲಗಳು ದೊರೆಯುತ್ತದೆ. ಸದಸ್ಯರಿಗೆ ಗುಂಪು ಚಟುವಟಿಕೆಗಳ ಮೂಲಕ ಮತ್ತು ತರಬೇತಿಯ ಮೂಲಕ ಉತ್ಪಾದನೆಯ ಕಸುಬುಗಳನ್ನು ಕೈಗೊಳ್ಳಲು ಸಮರ್ಪಕ ಮಾಹಿತಿಯು ದೊರೆಯುತ್ತದೆ.

೧.೧.೪:- ಸ್ವ ಸಹಾಯ ಸಂಘದ ಉದ್ದೇಶಗಳು:-

ಸ್ವ ಸಹಾಯ ಸಂಘಗಳು ತಮ್ಮ ಸದಸ್ಯರುಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸೇರಿದಂತೆ ಹತ್ತು ಹಲವು ಆಯಾಮಗಳ ಸರ್ವತೋಮುಖ ಅಭಿವೃದ್ಧಿಯ ಉದ್ದೇಶಗಳನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾದವುಗಳು ಈ ಕೆಳಗಿನಂತಿವೆ.

- ಪರಸ್ಪರ ನೆರವಾಗುವುದು.
- ಕಡು ಬಡಜನರಿಗೂ ಉಳಿತಾಯ ಸಾಧ್ಯ ಮತ್ತು ಅವಶ್ಯಕ ಎಂದು ತೋರಿಸಿಕೊಡುವುದು.
- ಒಗ್ಗಟ್ಟಿನಿಂದ ಏಳಿಗೆ ಸಾಧ್ಯ ಎಂದು ತಿಳಿಸಿಕೊಡುವುದು.
- ಪರಸ್ಪರರಲ್ಲಿ ಸಹಕಾರ, ಅರಿವು, ತಿಳುವಳಿಕೆ ಮೂಡಿಸುವುದು.
- ಹಣಕ್ಕಾಗಿ ಬ್ಯಾಂಕುಗಳು ಅಥವಾ ಲೇವಾದೇವಿದಾರರನ್ನು ಆಶ್ರಯಿಸದೇ ತಮ್ಮ ಸ್ವಂತ ಉಳಿತಾಯದ ಹಣವನ್ನು ಬಳಸುವಂತೆ ಮಾಡುವುದು.
- ಪ್ರಾದೇಶಿಕ ಬ್ಯಾಂಕಿನಂತೆ ಕಾರ್ಯನಿರ್ವಹಿಸುವುದು.
- ಸಾಲಗಳ ಸೂಕ್ತ ಮರುಪಾವತಿ ಮಾಡುವುದು.
- ಸರಕಾರ ಮತ್ತು ಬ್ಯಾಂಕಿನ ಸವಲತ್ತುಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದು.
- ಬಡವರಿಗೂ ಬ್ಯಾಂಕಿನ ಸಂಬಂಧ ಕಲ್ಪಿಸುವುದು.
- ತಮ್ಮ, ತಮ್ಮ ಗ್ರಾಮದ ಸಂಪೂರ್ಣ ಅಭಿವೃದ್ಧಿಗೆ ಶ್ರಮಿಸುವಂತೆ ಮಾಡುವುದು.

ಈ ಮೇಲಿನ ಉದ್ದೇಶಗಳ ಈಡೇರಿಕೆಗಾಗಿ ಸ್ವ- ಸಹಾಯ ಸಂಘಗಳು ಕಾರ್ಯಾಚರಿಸುತ್ತಿದೆ.

೧.೧.೫:- ಸ್ವ ಸಹಾಯ ಸಂಘಗಳ ನಿಯಮಗಳು:-

ಪ್ರತಿ ಸಂಘ, ಸಂಸ್ಥೆಗಳೂ ತಮ್ಮದೇ ಆದ ನೀತಿ - ನಿಯಮಗಳನ್ನು ಹೊಂದಿರುತ್ತದೆ. ಮತ್ತು ಇದಕ್ಕನುಗುಣವಾಗಿ ಹೋದರೆ ಮಾತ್ರ ಸಂಘ, ಸಂಸ್ಥೆಗಳ ಉದ್ದೇಶ ಸಫಲವಾಗುತ್ತದೆ. ಹಾಗಾಗಿ ಸ್ವ-ಸಹಾಯ ಸಂಘಗಳು ತಮ್ಮ ಉದ್ದೇಶ ಈಡೇರಿಕೆಗೆ ಈ ಕೆಳಗಿನ ನಿಯಮಗಳನ್ನು ಜಾರಿಯಲ್ಲಿಟ್ಟಿರುತ್ತದೆ.

- ಸಂಘದ ಸದಸ್ಯರಾಗಲು ಕನಿಷ್ಟ 18 ವರ್ಷ ತುಂಬಿರಬೇಕು. ಹೀಗೆ ಮಾಡುವುದರಿಂದ ಬ್ಯಾಂಕಿನ ವ್ಯವಹಾರ ನಡೆಸಲು ಸಹಕಾರಿಯಾಗುತ್ತದೆ.
- ಸಾಧ್ಯವಾದಷ್ಟು ಸಂಘದ ಸದಸ್ಯರ ಸಂಖ್ಯೆಯನ್ನು 5 ರಿಂದ 20ರ ಒಳಗೆ ಇರುವಂತೆ ನೋಡಿಕೊಳ್ಳಬೇಕು.
- ಪ್ರತಿ ಸಂಘವೂ ಕನಿಷ್ಠ ಉಳಿತಾಯದ ಮೊತ್ತದನ್ನೂ ನಿರ್ಧರಿಸುತ್ತದೆ. ಪ್ರತಿ ಸದಸ್ಯನೂ ವಾರದ ಕನಿಷ್ಠ ಉಳಿತಾಯದ ಮೊತ್ತವನ್ನು ಕಟ್ಟಲೇಬೇಕು.

- ಸಂಘದ ಸದಸ್ಯರು ತಪ್ಪದೇ ವಾರದ ಸಭೆಗೆ ಖುದ್ದಾಗಿ ಹಾಜರಾಗಬೇಕು.
- ಯಾವುದಾದರೂ ಸಂದರ್ಭದಲ್ಲಿ ವಾರದ ಸಭೆಗೆ ಹಾಜರಾಗಲು ಅನಾನುಕೂಲವಾದರೆ ಸಂಘದ ಪ್ರತಿನಿಧಿಗೆ ಮುಂಜಾಗ್ರತೆಯಾಗಿ ತಿಳಿಸತಕ್ಕದ್ದು.
- ನಿಗದಿತ ಸಮಯದಲ್ಲಿ ಸಭೆಗೆ ಹಾಜರಾಗಿ ಶಿಸ್ತನ್ನು ಕಾಪಾಡುವುದು.
- ಬ್ಯಾಂಕಿನಿಂದ ಸಾಲ ತಂದಲ್ಲಿ ಅದಕ್ಕೆ ಎಲ್ಲರೂ ಜವಾಬ್ದಾರರು.
- ಸಂಘದ ನಿಯಮಗಳಿಗೆ ಎಲ್ಲರೂ ಬದ್ಧರಾಗಿರತಕ್ಕದ್ದು.

೧.೨. ಸ್ವ ಸಹಾಯ ಸಂಘದ ಹುಟ್ಟು ಮತ್ತು ಬೆಳವಣಿಗೆ

ಭಾರತದಲ್ಲಿ ಸ್ವ ಸಹಾಯ ಚಳುವಳಿ 1980ರ ದಶಕದಲ್ಲಿ ಪ್ರಾರಂಭವಾಯಿತು. ನಬಾರ್ಡ್ ಸಂಸ್ಥೆಯು 1986-87ರಲ್ಲಿ ಉಳಿತಾಯ ಮತ್ತು ಸಾಲದ ವಿಷಯಕ್ಕೆ ಸಂಬಂಧಿಸಿ ಬೆಂಬಲವನ್ನು ನೀಡಿತು. ಅದು ಸ್ವ ಸಹಾಯ ಸಂಘದ ಮಹಾಕ್ರಾಂತಿಗೆ ನಾಂದಿಯಾಯಿತು.[6]

1991-92ರಲ್ಲಿ ನಬಾರ್ಡ್ ಸಂಸ್ಥೆಯ ಸಹಕಾರದಿಂದ ವಾಣಿಜ್ಯ ಬ್ಯಾಂಕುಗಳು ಸ್ವ ಸಹಾಯ ಸಂಘಗಳಿಗೆ ಸಾಲ ನೀಡಲಾರಂಭಿಸಿದವು. ಇದರಿಂದ ಭಾರತದಲ್ಲಿ ಸ್ವ ಸಹಾಯ ಸಂಘಗಳು ವೇಗವಾಗಿ ಬೆಳವಣಿಗೆ ಹೊಂದಲಾರಂಭಿಸಿದವು.

೧.೩. ಸ್ವ ಸಹಾಯ ಸಂಘಗಳ ವರ್ಗೀಕರಣ

ಇಂದು ಭಾರತದಲ್ಲಿ ಎರಡು ರೀತಿಯ ಸ್ವ- ಸಹಾಯ ಗುಂಪುಗಳನ್ನು ಕಾಣಬಹುದಾಗಿವೆ. ಅವುಗಳಲ್ಲಿ ಮುಖ್ಯವಾದವುಗಳು ಈ ಕೆಳಗಿನಂತಿವೆ


೧. ಸರಕಾರೇತರ ಸಂಸ್ಥೆಗಳಿಂದ ನಡೆಸಲ್ಪಡುವ ಸ್ವ ಸಹಾಯ ಗುಂಪುಗಳು.

೨. ಸರಕಾರದ ಅಧೀನಕ್ಕೊಳಪಟ್ಟಿರುವ ಸ್ವ ಸಹಾಯ ಗುಂಪುಗಳು.

ಸ್ವ ಸಹಾಯ ಸಂಘಗಳ ಉದ್ದೇಶ, ನಿಯಮಗಳು, ಸದಸ್ಯತ್ವದ ಅರ್ಹತೆ, ಕಾರ್ಯವಿಧಾನಗಳಲ್ಲಿ ಸರಕಾರೇತರ ಸ್ವಸಹಾಯ ಗುಂಪುಗಳಿಗೂ ಸರಕಾರದ ಅಧೀನಕ್ಕೊಳ ಪಡುವ ಸ್ವ ಸಹಾಯ ಗುಂಪುಗಳಿಗೂ ಅಂತಹ ವಿಶೇಷವಾದ ವ್ಯತ್ಯಾಸಗಳೇನೂ ಇರುವುದಿಲ್ಲ.

ಸರಕಾರ ಮತ್ತು ಬ್ಯಾಂಕುಗಳಿಂದ ದೊರೆಯುವ ಪ್ರೋತ್ಸಾಹ ಹಾಗೂ ಅನುದಾನಗಳೆರಡೂ ಸಮಾನವಾಗಿಯೇ ದೊರೆಯುತ್ತದೆ. ಆದರೆ ಸರಕಾರೇತರ ಸ್ವ-ಸಹಾಯ ಸಂಘಗಳಲ್ಲಿ ಅತ್ಯಂತ ಹೆಚ್ಚಿನ ರೀತಿಯ ಪಾಲ್ಗೊಳುವಿಕೆ ಇರುತ್ತದೆ. ಯಾವ ಸಂಸ್ಥೆ ಸ್ವ-ಸಹಾಯ ಸಂಘವನ್ನೂ ನಡೆಸುತ್ತಿರುತ್ತದೋ ಅದು ಅತ್ಯಂತ ಮುತುವರ್ಜಿಯಿಂದ ಕೆಲಸ ಕಾರ್ಯಗಳು ನೋಡಿಕೊಳ್ಳುತ್ತಿರುತ್ತದೆ. ಬದಲಾಗಿ ಸರಕಾರಿ ಪ್ರಯೋಜಿತ ಸ್ವ-ಸಹಾಯ ಸಂಘಗಳಲ್ಲಿ ಅತ್ಯಂತ ಹೆಚ್ಚಿನ ಉತ್ಸಾಹದೊಂದಿಗೆ ಜನರು ಪಾಲ್ಗೊಳುವುದು ಕಂಡುಬರುವುದಿಲ್ಲ.


ಸರಕಾರೇತರ ಸಂಸ್ಥೆಗಳಿಂದ ನಡೆಸಲ್ಪಡುವ ಸ್ವ-ಸಹಾಯ ಗುಂಪಿನ ಮಾದರಿ



ಸರಕಾರೇತರ ಸ್ವ-ಸಹಾಯ ಸಂಘಗಳಲ್ಲಿ ಯೋಜನಾಧಿಕಾರಿ ಅತ್ಯಂತ ಪ್ರಮುಖವಾದ ಜವಾಬ್ದಾರಿಯ ಸ್ಥಾನದಲ್ಲಿರುತ್ತಾನೆ. ಯೋಜನಾಧಿಕಾರಿಯು ಸ್ವ ಸಹಾಯ ಸಂಘದ ಎಲ್ಲಾ ರೀತಿಯ ಕಾರ್ಯ ವಿಧಾನ ಮತ್ತು ನಿರ್ವಹಣೆಯನ್ನು ಯೋಜನಾ ಸಂಯೋಜಕನ ಮೂಲಕ ಜಾರಿಗೊಳಿಸುತ್ತಾನೆ. ಯೋಜನಾ

ಸಂಯೋಜಕನು ಯೋಜನಾ ಮೇಲ್ವಿಚಾರಕನ ಕಾರ್ಯ ವೈಖರಿಯನ್ನು ನಿಯಂತ್ರಿಸುತ್ತಾನೆ. ಯೋಜನಾ ಮೇಲ್ವಿಚಾರಕನು, ಕ್ಷೇತ್ರ ಕಾರ್ಯಕರ್ತನ ಮೂಲಕ ಸಂಘವು ಯಶಸ್ವಿಯಾಗಿ ಕಾರ್ಯಾಚರಿಸುವಂತೆ ಮಾಡುತ್ತಾನೆ. ಕ್ಷೇತ್ರ ಕಾರ್ಯಕರ್ತನು ಸಂಘದ ಪ್ರತಿನಿಧಿಗಳ ಜೊತೆ ನೇರವಾದ ಸಂಪರ್ಕದಲ್ಲಿರುತ್ತಾನೆ. ಸಂಘದ ಪ್ರತಿನಿಧಿಗಳು, ಸಂಘದ ಸದಸ್ಯರೊಡನೆ ಗುಂಪಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯ ಮಾಡುತಿರುತ್ತಾನೆ.

ಸರಕಾರದ ಅಧೀನಕ್ಕೊಳಪಟ್ಟಿರುವ ಸ್ವ-ಸಹಾಯ ಸಂಘಗಳು



ಸರಕಾರದ ಅಧೀನಕ್ಕೊಳಪಟ್ಟಿರುವ ಸ್ವ-ಸಹಾಯ ಸಂಘಗಳ ಮುಖ್ಯ ಉದ್ದೇಶ ಬಡತನ ಮತ್ತು ನಿರುದ್ಯೋಗ ನಿರ್ಮೂಲನೆ. ಸರಕಾರದ ಪ್ರತಿನಿಧಿಯಾಗಿ ಸರಕಾರದ ಯೋಜನೆ ಮತ್ತು ಸವಲತ್ತುಗಳನ್ನು ಯೋಜನಾಧಿಕಾರಿ ತನ್ನ ಕೆಳಗೆ ಕಾರ್ಯನಿರ್ವಹಿಸುವ ಸಮುದಾಯ ಸಂಘಟಕನಿಗೆ ನೀಡುತ್ತಾನೆ. ಸಮುದಾಯ ಸಂಘಟಕನ್ನು ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಸರಕಾರದ ಯೋಜನೆಗಳನ್ನು ತಿಳಿಸುತ್ತಾನ

1. ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಎಚ್.ಆರ್. ಕೃಷ್ಣೆಗೌಡ 147,138
2. ಸ್ವ ಸಹಾಯ ಸಂಘಗಳು ಒಂದು ಪರಿಕಲ್ಪನೆ- ಎನ್.ಟಿ. ಎರ್ರಿ ಸ್ವಾಮಿ 5
3. ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಎಚ್.ಆರ್. ಕೃಷ್ಣ ಗೌಡ 153
4. ಪ್ರಭಾಕರ ಶಿಶಿಲ ಮತ್ತು ಕುಮಾರ ಸ್ವಾಮಿ - ಭಾರತದ ಆರ್ಥಿಕ ಅಭಿವೃದ್ಧಿ- 2005 ಪು. 101
5. ಸುಬ್ಬಯ್ಯ ಸಾಚಿ ದಾಸ್- ಸ್ವ ಸಹಾಯ ಸಂಘ ಮತ್ತು ಕಿರು ಸಾಲ - ಕುರುಕ್ಷೇತ್ರ- 2003, VOL-51, NO-10. PP 25-27
6. ಮಧುರ ಎಂ.ಆರ್ – ಕುರುಕ್ಷೇತ್ರ 2006- PP 23-24.

ಅಧ್ಯಾಯ – ೨

೨.	ಅಧ್ಯಯನ ಮತ್ತು ಸಂಶೋಧನಾ ವಿಧಾನ
೨.೧.	ಅಧ್ಯಯನ ವಿಧಾನ
೨.೧.೧.	ಸಮಸ್ಯೆಯ ವಿಶ್ಲೇಷಣೆ
೨.೧.೨.	ಹಿಂದಿನ ಅಧ್ಯಯನಗಳ ಸಮೀಕ್ಷೆ
೨.೧.೩.	ಅಧ್ಯಯನಕ್ಕೆ ಕಾರಣ ಮತ್ತು ಪ್ರೇರಣೆ
೨.೧.೪.	ಅಧ್ಯಯನದ ಉದ್ದೇಶಗಳು
೨.೨.	ಅಧ್ಯಯನ ವಿನ್ಯಾಸ
೨.೨.೧.	ಅಧ್ಯಯನ ಕ್ಷೇತ್ರ
೨.೨.೨.	ಅಧ್ಯಯನದ ಮಾದರಿಯ ಗಾತ್ರ
೨.೨.೩.	ಕ್ಷೇತ್ರಾಧ್ಯಯನದ ಆಯ್ಕೆಯ ವಿಧಾನ
೨.೨.೪.	ದತ್ತಾಂಶ ವಿಶ್ಲೇಷಣೆ

೨. ಅಧ್ಯಯನ ಮತ್ತು ಸಂಶೋಧನಾ ವಿಧಾನ

೨.೧. ಅಧ್ಯಯನ ವಿಧಾನ

೨.೧.೧.:- ಸಮಸ್ಯೆಯ ವಿಶ್ಲೇಷಣೆ

ಭಾರತವು ಗ್ರಾಮಗಳ ನಾಡಾಗಿದ್ದು ಇದರಲ್ಲಿ ಸುಮಾರು ಆರು ಲಕ್ಷ ಗ್ರಾಮಗಳಿದೆ. ಸುಮಾರು ಶೇಕಡ ಎಪ್ಪತ್ತರಷ್ಟು ಜನರು ಗ್ರಾಮಗಳಲ್ಲಿಯೇ ವಾಸಿಸುತ್ತಿದ್ದಾರೆ.[1] ಗ್ರಾಮಗಳ ಪ್ರಗತಿಯಾಗದೇ ಸಮಗ್ರ ಭಾರತದ ಕಲ್ಯಾಣ ಸಾಧ್ಯವಿಲ್ಲ. ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ಮೇಲಂತೂ ರಾಷ್ಟ್ರ ನಾಯಕರು ಗ್ರಾಮಗಳು ಪ್ರಗತಿ ಹೊಂದದ ಹೊರತು ದೇಶದ ಪ್ರಗತಿ ಸಾಧ್ಯವಿಲ್ಲ ಎಂಬುದನ್ನು ಮನಗಂಡಿದ್ದಾರೆ. ಅವುಗಳ ಸರ್ವಾಂಗೀಣ ಪ್ರಗತಿಯ ಕಡೆ ವಿಶೇಷ ಗಮನ ಕೊಡುತ್ತಿದ್ದಾರೆ. ಆದರೂ ಅಧಿಕಾರಿಗಳ ಅಸಡ್ಡೆ, ಗ್ರಾಮೀಣ ಜನರ ಅಜ್ಞಾನ ಮತ್ತು ರಾಜಕಾರಣಿಗಳ ಸ್ವಾರ್ಥದಿಂದಾಗಿ ಗ್ರಾಮೀಣ ಭಾರತ ನಿರೀಕ್ಷಿತ ಪ್ರಗತಿ ಹೊಂದಲಿಲ್ಲ.

ಇದರಿಂದಾಗಿ ಅನೇಕ ಸರಕಾರೇತರ ಸಂಸ್ಥೆಗಳು ಬಡಜನರ ಒಳಿತಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಮುಖ್ಯವಾಗಿ ಸರ್ಕಾರೇತರ ಸಂಸ್ಥೆಗಳ ಕೊಡುಗೆಯು ಸಮಾಜ ಕಲ್ಯಾಣ, ಅಭಿವೃದ್ಧಿ ಸಾಧನೆ, ಆದಾಯ ಸೃಷ್ಟಿಯ ಉದ್ಯಮಗಳು, ಮಹಿಳಾ ಸಶಕ್ತೀಕರಣ, ಜನರನ್ನು ಜಾಗೃತಿಗೊಳಿಸುವಿಕೆ ಮೊದಲಾದ ಕ್ಷೇತ್ರಗಳಿಗೂ ವ್ಯಾಪಿಸಿದೆ. ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ನಿರ್ಲಕ್ಷಿಸಲ್ಪಟ್ಟಿದ್ದ ಭೌಗೋಳಿಕ ಪ್ರದೇಶಗಳಿಗೆ ಮತ್ತು ಚಟುವಟಿಕೆಗಳಿಗೆ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿವೆ. ಮಹಿಳೆಯರ, ಮಕ್ಕಳ, ಅಸಂಘಟಿತ ವಲಯದ ಕಾರ್ಮಿಕರ, ಗಿರಿಜನರ, ನಿರ್ಗತಿಕರ, ಅಂಗವಿಕಲರೂ ಸೇರಿದಂತೆ ಅನೇಕ ವರ್ಗಗಳ ಜನರ ಬದುಕನ್ನು ಹಸನು ಮಾಡುವ ಕಾರ್ಯದಲ್ಲಿ ಸರಕಾರೇತರ ಸಂಸ್ಥೆಗಳ ಕೊಡುಗೆ ಅಪಾರವಾದುದು.[2] ಈ ನಿಟ್ಟಿನಲ್ಲಿ 1982ರಲ್ಲಿ ಆರಂಭಗೊಂಡ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯು ತನ್ನದೇ ಉದ್ದೇಶಗಳೊಂದಿಗೆ ಸಾರ್ಥಕವಾದ ಸಾಧನೆಗಳನ್ನು ಮಾಡುತ್ತಿದೆ.

ಇಂದು ಇದು ಭಾರತದಲ್ಲೇ ಅತಿದೊಡ್ಡ ಕಿರು ಆರ್ಥಿಕ ವ್ಯವಹಾರ ನಡೆಸುವ ಸ್ವಯಂ ಸೇವಾ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆರಂಭದಲ್ಲಿ ಬೆಳ್ತಂಗಡಿಗೆ ಮಾತ್ರ ಸೀಮಿತವಾಗಿದ ಕಿರು ಆರ್ಥಿಕ ವ್ಯವಹಾರ ಇಂದು ರಾಷ್ಟ್ರಾದ್ಯಂತ ವಿಸ್ತಾರಗೊಳ್ಳುತ್ತಿದೆ. ಪ್ರಸಕ್ತ ಅಧ್ಯಯನವು ಬೆಳ್ತಂಗಡಿ ತಾಲೂಕಿನಲ್ಲಿ ಕಿರು ಹಣಕಾಸಿನ ಸಾಧನೆ ಮತ್ತು ವೈಫಲ್ಯಗಳನ್ನು ಕ್ಷೇತ್ರಾಧ್ಯಯನದ ಮೂಲಕ ಪ್ರಸ್ತುತ ಪಡಿಸುತ್ತದೆ.

೨.೧.೨. ಹಿಂದಿನ ಅಧ್ಯಯನಗಳ ಸಮೀಕ್ಷೆ

ಪ್ರಸಕ್ತ ಅಧ್ಯಯನವನ್ನು ಕೈಗೊಳ್ಳುವ ಮುನ್ನ ಈಗಾಗಲೇ ಮಾಡಲಾದ ಪ್ರಮುಖ ಅಧ್ಯಯನಗಳ ಒಂದು ಸಮೀಕ್ಷೆ ನಡೆಸಲಾಯಿತು. ಅವುಗಳು ಅಧ್ಯಯನದಿಂದ ಈ ಕೆಳಗಿನ ಅಂಶಗಳು ತಿಳಿಯಲ್ಪಡುತ್ತವೆ.

ಡಾ॥ ಎನ್. ಕೆ. ತಿಂಗಳಾಯ ನಡೆಸಿದ ಅಧ್ಯಯನವು 'ಹನಿಹಣಕಾಸು ಸಮಾಜದ ಬಡವರ್ಗದ ಮತ್ತು ಅಶಕ್ತರನ್ನೂ ವ್ಯಾಪಕವಾಗಿ ತಲುಪಿ ಆರ್ಥಿಕವಾಗಿ ಸಫಲಗೊಳ್ಳುವಂತೆ ಮಾಡುತ್ತಿದೆ'[3] ಎಂದು ತಿಳಿಸುತ್ತದೆ. ಆದರೆ ಇದು ಕೇವಲ ಅಂಕಿ-ಅಂಶಗಳ ಆಧಾರದಲ್ಲಿ ನಿಂತಿದೆ. ಮೂಲ ಮಾಹಿತಿಯನ್ನು ಬಳಸದಿರುವುದು ಈ ಅಧ್ಯಯನದ ಮಹತ್ವವನ್ನು ಕಡಿಮೆಗೊಳಿಸಿದೆ. ಡಾ॥ ಜಿ. ವಿ.ಜೋಶಿಯವರು ನಡೆಸಿದ ಅಧ್ಯಯನದ ಪ್ರಕಾರ 'ಕಚ್ಚಾವಸ್ತುಗಳ ಪೂರೈಕೆದಾರರೊಂದಿಗೆ ಮಾರುಕಟ್ಟೆ ಮತ್ತು ಬ್ಯಾಂಕು ಶಾಖೆಯೊಂದಿಕೆ ಮಹಿಳೆಯರ ಸಂವಹನೆ ಅವರನ್ನು ಹೆಚ್ಚು-ಹೆಚ್ಚು ವ್ಯವಹಾರ ಚತುರರನ್ನಾಗಿ ಮಾಡುತ್ತದೆ. ಆದ್ದರಿಂದ ಆದಾಯ ತರುವಂತಹ ಚಟುವಟಿಕೆಗಳಿಗೆ ದಾರಿ ಮಾಡಿಕೊಡುವ ಕಿರು ಹಣಕಾಸು ಮಹಿಳೆಯರ ಸಬಲೀಕರಣಕ್ಕೆ ಕೊಡುಗೆಯನ್ನು ನೀಡುತ್ತದೆ'.[4] ಆದರೆ ಇಲ್ಲಿ ವಾಸ್ತವದಲ್ಲಿ ಮಹಿಳೆಯರು ವ್ಯವಹಾರ ನಡೆಸುವಾಗ ಉಂಟಾಗುವ ಅನಾನುಕೂಲತೆಯನ್ನು ಗುರುತಿಸದಿರುವುದು ಒಂದು ಮಿತಿ ಎನಿಸುತ್ತದೆ.

ಪ್ರೊ॥ ಮಹೇಂದ್ರವರ್ಮನ್ ತಮ್ಮ ಅಧ್ಯಯನದಲ್ಲಿ ಔಪಚಾರಿಕ ಬ್ಯಾಂಕಿಂಗ್ ಅಭ್ಯಾಸದ ಮೇಲೆ ಸ್ವ ಸಹಾಯ ಗುಂಪುಗಳ ಪರಿಣಾಮಗಳನ್ನು ವಿಶ್ಲೇಷಿಸಿದ್ದಾರೆ. ಇಲ್ಲಿ ಇವರು ಮುಖ್ಯವಾಗಿ ಗುರುತಿಸಿರುವ ಅಂಶವೆಂದರೆ ಗ್ರಾಮೀಣ ಪ್ರದೇಶದಲ್ಲಿ ಸ್ವ ಸಹಾಯ ಗುಂಪುಗಳಿಂದಾಗಿ ಜನರು ಉಳಿತಾಯ ಪ್ರವೃತ್ತಿ ಮಾಡುವುದನ್ನು ಅವರ ಅಧ್ಯಯನ ಸಮರ್ಥಿಸುತ್ತದೆ.[5]

ಡಾ॥ ಶಿವ ಚಿತ್ತಪ್ಪ ನಡೆಸಿದ ಅಧ್ಯಯನದ ಪ್ರಕಾರ "ಕಿರು ಹಣಕಾಸಿನ ಯೋಜನೆಯಿಂದಾಗಿ ಬಡವರು ಅದರಲ್ಲೂ ಮಹಿಳೆಯರು ಅನೇಕ ಉತ್ಪಾದನಾ ಚಟುವಟಿಕೆಗಳನ್ನು ಮಾಡತೊಡಗಿದ್ದಾರೆ. ಇದರಿಂದಾಗಿ ಲೇವಾದೇವಿಗಾರರೊಡನೆ ಮಹಿಳೆಯರ ಅವಲಂಬನೆ ಕಡಿಮೆಯಾಗತೊಡಗಿದೆ".[6] ಮಹಿಳೆಯರ ಅಭಿವೃದ್ಧಿಗೆ ನೀಡಿರುವ ಸಲಹೆಗಳು ಸಮಂಜಸವಾಗಿದ್ದರೂ, ಮಹಿಳೆಯರು ಎದುರಿಸುವ ಸವಾಲುಗಳನ್ನು ಗುರುತಿಸದೇ ಇರುವುದು ಈ ಅಧ್ಯಯನದ ದೋಷವಾಗಿದೆ.

ಡಾ॥ ಸಭ್ಯ ಸಾಚಿದಾಸ್‌ರವರು ನಡೆಸಿದ ಅಧ್ಯಯನದ ಪ್ರಕಾರ ಸ್ವ ಸಹಾಯ ಸಂಘಗಳಿಗೆ ಕಿರು ಹಣಕಾಸು ಎಷ್ಟು ಅಗತ್ಯ ಎಂದು ತಿಳಿಸಿಕೊಡುತ್ತದೆ. ಆದರೆ ಈ ಅಧ್ಯಯನಕ್ಕೆ ಸಾಕಷ್ಟು ಮೂಲ ದತ್ತಾಂಶಗಳನ್ನು ಅವರು ಒದಗಿಸಿಲ್ಲ.[7]

ಪ್ರೊ॥ ದಾಸ್ ಗುಪ್ತಾ ಮತ್ತು ಡಾ॥ ರಾಜಾರಾಮ್‌ರವರು ಸ್ವ ಸಹಾಯ ಗುಂಪುಗಳ ಮೇಲೆ ಕಿರುಹಣಕಾಸಿನ ಮಹತ್ವ ಮತ್ತು ಪರಿಣಾಮಗಳನ್ನು ಅಧ್ಯಯನ ಮಾಡಿದ್ದಾರೆ. ಆದರೆ ಇವರು ಹಣಕಾಸಿನ ವಿಷಯದ ಹೊರತಾಗಿ ಸ್ವ ಸಹಾಯ ಸಂಘಗಳಲ್ಲಿ ನಡೆಯುವ ಇತರ ಚಟುವಟಿಕೆಗಳ ಬಗ್ಗೆ ತಿಳಿಸಿಲ್ಲ.[8]

೨.೧.೩. ಅಧ್ಯಯನಕ್ಕೆ ಕಾರಣ ಮತ್ತು ಪ್ರೇರಣೆ

ಭಾರತ ಅಭಿವೃದ್ಧಿ ಹೊಂದುತ್ತಿರುವ ದೇಶ ಎಂಬ ಹಣೆಪಟ್ಟಿ ಹೊಂದಿದ್ದರೂ, ಗ್ರಾಮೀಣ ಪ್ರದೇಶಗಳಲ್ಲಿ ಬಡತನ ತೀವ್ರ ಸ್ವರೂಪ ಪಡೆಸುಕೊಳ್ಳುತ್ತಿದೆ. ಇದಕ್ಕೆ ಮುಖ್ಯ ಕಾರಣ ಅವಕಾಶಗಳ ಕೊರತೆ. ಬಡಜನರು ಯಾವುದೇ ರೀತಿಯಲ್ಲಿ ಅಭಿವೃದ್ಧಿ ಹೊಂದಲು ಪೂರಕ ವಾತಾವರಣವಿಲ್ಲದೇ ಇರುವುದೆ ಆಗಿದೆ. ಆದರೂ ಇತ್ತೀಚಿನ ದಿನಗಳಲ್ಲಿ ಸ್ವ ಸಹಾಯ ಸಂಘಗಳ ಬೆಳವಣಿಗೆಯಿಂದ ಗ್ರಾಮೀಣ ಪ್ರದೇಶದ ಜನರು ಸಾಲ ಸೌಲಭ್ಯ ಪಡೆದು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆ. ಇದರಿಂದಾಗಿ ಇಂದು ಸರಕಾರ, ನಬಾರ್ಡ್, ಸೇರಿದಂತೆ ಹತ್ತು ಹಲವು ಸಂಘ ಸಂಸ್ಥೆಗಳು ಹಳ್ಳಿ-ಹಳ್ಳಿಯಲ್ಲೂ ಸ್ವ ಸಹಾಯ ಸಂಘಗಳನ್ನು ಸ್ಥಾಪಿಸಿ ಅದರ ಮೂಲಕ ಬಡ ಜನರ ಅಭ್ಯುದಯಕ್ಕೆ ಕಾರಣವಾಗುತ್ತಿವೆ. ಇಂದು ಇಡೀ ಜಗತ್ತೇ ಬಡತನ ನಿರ್ಮೂಲನೆಗೆ ಸ್ವ ಸಹಾಯ ಸಂಘಕ್ಕೆ ಮತ್ತು ಅದರ ಮೂಲಕ ಕಿರುಹಣಕಾಸು ಯೋಜನೆಗೆ ವಿಶೇಷ ಪ್ರಾಶಸ್ತ್ಯ ನೀಡುತ್ತಿದೆ. ಇದನ್ನು ಮನಗಂಡು ಕ್ಷೇತ್ರಾಧ್ಯಯನದ ಮೂಲಕ ಕಂಡುಕೊಂಡ ಹಿನ್ನೆಲೆಯಲ್ಲಿ ಕಿರುಹಣಕಾಸು ಯೋಜನೆಯನ್ನು ಬೆಳ್ತಂಗಡಿ ತಾಲೂಕಿನಲ್ಲಿ ಇನ್ನಷ್ಟು ಪರಿಣಾಮಕಾರಿಯನ್ನಾಗಿ ಮಾಡಲು ಸಲಹೆ, ಸೂಚನೆಗಳನ್ನು ನೀಡುವ ಉದ್ದೇಶವು ಅಧ್ಯಯನಕ್ಕೆ ಪ್ರೇರಣೆಯನ್ನು ಒದಗಿಸಿದೆ.

೨.೧.೪. ಅಧ್ಯಯನದ ಉದ್ದೇಶಗಳು

- ಕಿರು ಹಣಕಾಸು ಯೋಜನೆಯ ಮೂಲಕ ಜನರು ಆರ್ಥಿಕವಾಗಿ ಸದೃಡರಾಗುತ್ತಿರುವುದನ್ನು ಗುರುತಿಸುವುದು.
- ಗ್ರಾಮೀಣಾಭಿವೃದ್ಧಿಯಲ್ಲಿ ಕಿರುಹಣಕಾಸಿನ ಮಹತ್ವನ್ನು ಗುರುತಿಸುವುದು.

- ಜನರ ಜೀವನ ಮಟ್ಟದಲ್ಲಾಗಿರುವ ಬದಲಾವಣೆಯನ್ನು ಗುರುತಿಸುವುದು.
- ಸ್ವ ಉದ್ಯೋಗ ನಿರ್ಮಾಣದಲ್ಲಿ ಕಿರುಹಣಕಾಸಿನ ಮಹತ್ವವನ್ನು ಪರಿಶೀಲಿಸುವುದು.
- ಬ್ಯಾಂಕಿನ ಮಾದರಿಯಲ್ಲಿ ಕಿರುಹಣಕಾಸು ಯೋಜನೆ ಕಾರ್ಯನಿರ್ವಹಿಸುತ್ತಿರುವುದನ್ನು ಮತ್ತು ಬಡಜನರು ಹೇಗೆ ಹಣದ ಉಳಿತಾಯ ಮತ್ತು ಸಾಲ ಸೌಲಭ್ಯ ಪಡೆಯುತ್ತಿದ್ದಾರೆ ಎಂಬುದನ್ನು ಗುರುತಿಸುವುದು.
- ಕಿರು ಹಣಕಾಸಿನ ಲೋಪದೋಷಗಳನ್ನು ಗುರುತಿಸುವುದು ಮತ್ತು ಪರಿಹಾರೋಪಾಯಗಳನ್ನು ಸೂಚಿಸುವುದು.

೨.೨. ಅಧ್ಯಯನ ವಿನ್ಯಾಸ

೨.೨.೧. ಅಧ್ಯಯನ ಕ್ಷೇತ್ರ

ಅಧ್ಯಯನ ಕ್ಷೇತ್ರವು ದ.ಕ ಜಿಲ್ಲೆಯ 5 ತಾಲೂಕುಗಳಲ್ಲಿ ಒಂದಾದ ಬೆಳ್ತಂಗಡಿಗೆ ಸೀಮಿತವಾಗಿದೆ. ಅಧ್ಯಯನಕ್ಕೆ ಬೆಳ್ತಂಗಡಿ ತಾಲೂಕಿನ 'ಉಜಿರೆ' ಮತ್ತು 'ಬೆಳಾಲು' ಎಂಬ ಎರಡು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಈ ಎರಡೂ ಗ್ರಾಮಗಳಲ್ಲಿ ಕಿರುಹಣಕಾಸು ಯೋಜನೆಯನ್ನು ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಜಾರಿಗೊಳಿಸಿದೆ. ಈ ಎರಡೂ ಗ್ರಾಮಗಳಲ್ಲಿ ಕಿರುಹಣಕಾಸಿನ ಯೋಜನೆಯ ಯಶಸ್ಸು ಮತ್ತು ವೈಫಲ್ಯದ ಕಾರಣಗಳನ್ನು ಕಂಡು ಹಿಡಿಯುವುದು ಅಧ್ಯಯನದ ಮೂಲ ಉದ್ದೇಶವಾಗಿದೆ. ಅಧ್ಯಯನವು ಮಾದರಿ ಸಮೀಕ್ಷಾ ವಿಧಾನದ ಮೂಲಕ ನಡೆದಿದೆ.

೨.೨.೨. :- ಅಧ್ಯಯನದ ಮಾದರಿಯ ಗಾತ್ರ

ಸಮೀಕ್ಷೆ ನಡೆಸಿದ ಎರಡು ಗ್ರಾಮಗಳಲ್ಲಿ ಒಟ್ಟು 6 ಸ್ವ ಸಹಾಯ ಗುಂಪುಗಳನ್ನು ಮತ್ತು 6 ಪ್ರಗತಿ ಬಂಧು ತಂಡಗಳನ್ನು ಆರಿಸಿಕೊಂಡು ಒಟ್ಟು 75 ಜನರನ್ನು ಸಮೀಕ್ಷೆಗೆ ಒಳಪಡಿಸಲಾಯಿತು. ಇವುಗಳಲ್ಲಿ 40 ಜನ ಪುರುಷರು ಮತ್ತು 35 ಮಹಿಳೆಯರಿದ್ದಾರೆ. ಇವುಗಳನ್ನು ಆಯ್ಕೆ ಮಾಡುವಾಗ ಎರಡೂ ಗ್ರಾಮಗಳಿಗೆ ಸಮಾನ ಪ್ರಾತಿನಿಧ್ಯ ಸಿಗುವ ಹಾಗೆ ನೋಡಿಕೊಳ್ಳಲಾಗಿದೆ.

೨.೨.೩ ಕ್ಷೇತ್ರಾಧ್ಯಯನದ ಆಯ್ಕೆಯ ವಿಧಾನ

ಎರಡು ಗ್ರಾಮಗಳಿಂದ ಒಟ್ಟು 6 ಪ್ರಗತಿ ಬಂಧು ಮತ್ತು 6 ಸ್ವ ಸಹಾಯ ಸಂಘಗಳನ್ನು ಆಯ್ಕೆ ಮಾಡಿ ಸಮೀಕ್ಷೆ ನಡೆಸಲಾಗಿದೆ. ಇವುಗಳಲ್ಲಿ ಒಟ್ಟು 75 ಜನರಿದ್ದು 40 ಪುರುಷರು ಸೇರಿದಂತೆ 35 ಮಹಿಳೆಯರಿದ್ದಾರೆ. ಅಧ್ಯಯನ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ನಿರ್ದಿಷ್ಟ ಪ್ರಶ್ನಾವಳಿಗಳನ್ನು ರಚಿಸಲಾಗಿದೆ. ಅಧ್ಯಯನಕ್ಕೊಳಪಟ್ಟ ಸದಸ್ಯರನ್ನು ಎಲ್ಲಾ ವಿವಿಧ ರೀತಿಯ ಸ್ತರಗಳಿಂದ ಆಯ್ಕೆ ಮಾಡಲಾಗಿದೆ. ಮುಖ್ಯವಾಗಿ ಆರ್ಥಿಕ ಹಿನ್ನೆಲೆ ಹಾಗೂ ಜಾತಿ, ಅದರಲ್ಲೂ ಮೇಲ್ವರ್ಗ, ಕೆಳ ವರ್ಗ, ಹಿಂದುಳಿದವರು, ಪರಿಶಿಷ್ಟ ಜಾತಿ, ಪಂಗಡ ಸೇರಿದಂತೆ ಬಡತನದ ರೇಖೆಯ ಮೇಲೆ ಮತ್ತು ಕೆಳಗೆ ಈ ಎರಡೂ ಸ್ತರದ ಸದಸ್ಯರನ್ನು ಆಯ್ದುಕೊಳ್ಳಲಾಗಿದೆ. ಆರಿಸಿಕೊಂಡ ಸದಸ್ಯರನ್ನು ಸಮುದಾಯದ ಒಟ್ಟು ಪ್ರತಿನಿಧಿಗಳಾಗಿರುವಂತೆ ನೋಡಿಕೊಳ್ಳಲಾಗಿದೆ.

೨.೨.೪:- ದತ್ತಾಂಶ ವಿಶ್ಲೇಷಣೆ

ಎಪ್ಪತ್ತೈದು ಮಂದಿ ಸದಸ್ಯರನ್ನು ಸಮರ್ಪಕವಾದ ಪ್ರಶ್ನೆಗಳನ್ನು ಕೇಳಿ ಅವರಿಂದ ಉತ್ತರವನ್ನು ಸಂಗ್ರಹಿಸಲಾಗಿದೆ. ಸಂಗ್ರಹವಾದ ದತ್ತಾಂಶಗಳನ್ನು ವಿವಿಧ ಕೋಷ್ಟಕಗಳಲ್ಲಿ ನೀಡಲಾಗಿದೆ. ಈ ಕೋಷ್ಟಕಗಳು ಸದಸ್ಯರ ಸಭೆಗಳ ವಿವರ, ಪ್ರಗತಿಬಂಧು ಸಂಘಗಳ ಕೆಲಸ, ಕಿರು ಆರ್ಥಿಕ ವ್ಯವಹಾರದ ರೂಪುರೇಷೆ, ಸಾಲ ಪಡೆಯುವ ರೀತಿ, ಸಾಲ ಮರುಪಾವತಿ, ಸಾಲದ ಬಳಕೆ, ವೃತ್ತಿಯ ವಿತರಣೆ ಮತ್ತು ಇತರ ವಿಷಯಗಳ ಬಗ್ಗೆ ಮಾಹಿತಿ ಒದಗಿಸುತ್ತದೆ. ಕಿರುಹಣಕಾಸಿನ ಯೋಜನೆಯ ಕಾರ್ಯಗಳನ್ನು ಮತ್ತು ಬೆಳವಣಿಗೆಯ ಚಿತ್ರಣವನ್ನು ನಕ್ಷೆಗಳು, ವೃತ್ತಗಳು ಮತ್ತು ಸ್ತಂಭಗಳ ಮೂಲಕ ನೀಡಲಾಗಿದೆ. ಕಿರು ಆರ್ಥಿಕ ವ್ಯವಹಾರದ ರೂಪುರೇಷೆಯನ್ನು ವೈಜ್ಞಾನಿಕವಾಗಿ ಪ್ರಸ್ತುತ ಪಡಿಸಲು ಸಂಖ್ಯಾ ಶಾಸ್ತ್ರವನ್ನು ಬಳಸಿಕೊಳ್ಳಲಾಗಿದೆ.

೧) ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ

- ಕೆ. ಭೈರಪ್ಪ – 27.

೨) ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ

- ಎಚ್.ಆರ್. ಕೃಷ್ಣೆಗೌಡ – 140

೩) ಕಿರು ಹಣಕಾಸು 2006.

- ಎನ್.ಕೆ ತಿಂಗಳಾಯ.

೪) ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣದಲ್ಲಿ ಕಿರು ಹಣಕಾಸಿನ ಪಾತ್ರ

– ಜಿ.ವಿ. ಜೋಶಿ ಪುಟ 120 ಕಿಸಾನ್ ಪಬ್ಲಿಕೇಶನ್ಸ್ – 2007.

೫) ಮಹೇಂದ್ರ ವರ್ಮನ್: ಇ. ಪಿ. ಡಬ್ಲ್ಯು ಏಪ್ರಿಲ್ 23 2005 PP 1705- 1713

೬) ಮಹಿಳೆಯರ ಆರ್ಥಿಕ ಸ್ವಾವಲಂಬನೆಯಲ್ಲಿ ಕಿರು ಹಣಕಾಸಿನ ಪಾತ್ರ - ಶಿವಚಿತ್ತಪ್ಪ, ಪುಟ- ೧೨೭

೭) ಸಬ್ಯ ಸಾಚಿದಾಸ್: ಸ್ವ ಸಹಾಯ ಸಂಘ ಮತ್ತು ಕಿರು ಸಾಲ.

ಕುರುಕ್ಷೇತ್ರ: August 2003 vol 5, no. 10 Pp 25-30

೮) ದಾಸ್‌ಗುಪ್ತಾ ರಾಜಾರಾಮ್: ಗ್ರಾಮೀಣ ಸ್ವ ಸಹಾಯ ಸಂಘಗಳ ಮೇಲೆ ಕಿರುಹಣಕಾಸಿನ ಪ್ರಭಾವ

– Vol 56, no 3 July 2001.

ಅಧ್ಯಾಯ 3

೩. ಗ್ರಾಮೀಣಾಭಿವೃದ್ಧಿ: ಸೈದ್ಧಾಂತಿಕ ನಿಲುವುಗಳು.

೩.೧. ಗ್ರಾಮೀಣಾಭಿವೃದ್ಧಿ: ವಿವಿಧ ಆಯಾಮಗಳು.

೩. ೨. ೧. ಗ್ರಾಮೀಣಾಭಿವೃದ್ಧಿಯ ಉದ್ದೇಶಗಳು.

೩. ೨. ೨. ಗ್ರಾಮೀಣಾಭಿವೃದ್ಧಿಯ ಮಹತ್ವ.

೩. ೩. ಗ್ರಾಮೀಣ ಅರ್ಥವ್ಯವಸ್ಥೆಯ ಲಕ್ಷಣಗಳು.

೩. ೪ ಗ್ರಾಮೀಣಾಭಿವೃದ್ಧಿಯ ವ್ಯಾಪ್ತಿ.

೩. ೫ ಗ್ರಾಮೀಣಾಭಿವೃದ್ಧಿಗೆ ಭಾರತ ಸರಕಾರ ಜಾರಿಗೊಳಿಸಿರುವ ಪ್ರಮುಖ ಯೋಜನೆಗಳು.

೩. ೬ ಗ್ರಾಮೀಣಾಭಿವೃದ್ಧಿಯ ಸಮಸ್ಯೆಗಳು.

೩. ಗ್ರಾಮೀಣಾಭಿವೃದ್ಧಿ: ಸೈದ್ಧಾಂತಿಕ ನಿಲುವುಗಳು

೩.೧. ಗ್ರಾಮೀಣಾಭಿವೃದ್ಧಿ: ವಿವಿಧ ಆಯಾಮಗಳು

ಇಂದು ಭಾರತದಲ್ಲಿ ವಿವಿಧ ರೀತಿಯ ಸಮಸ್ಯೆಗಳು ತುಂಬಿದೆ. ಬಡತನ, ನಿರುದ್ಯೋಗ, ಅಸಮಾನತೆ ಇಂತಹ ಹತ್ತು ಹಲವು ಆರ್ಥಿಕ ಸಾಮಾಜಿಕ ಸಮಸ್ಯೆಗಳು ಗ್ರಾಮೀಣ ಭಾಗದ ಜನರ ಜೀವನವನ್ನು ದುಸ್ತರಗೊಳಿಸಿದೆ. ಹಾಗಾಗಿ "ಅಭಿವೃದ್ಧಿ" ಎಂಬ ಪ್ರಕ್ರಿಯೆಯು ಪ್ರಸ್ತುತವಾಗಿ ಅಸ್ತಿತ್ವದಲ್ಲಿರುವ ವ್ಯವಸ್ಥೆಗಳಲ್ಲಿ ಪರಿಣಾಮಾತ್ಮಕವಾದ ಮತ್ತು ಗುಣಾತ್ಮಕವಾದ ಪರಿವರ್ತನೆ ಅಥವಾ ಬದಲಾವಣೆಯನ್ನುಂಟು ಮಾಡುವ ಚಟುವಟಿಕೆ ಅಥವಾ ಪ್ರಕ್ರಿಯೆಯಾಗಿದೆ.[1]

ವಿಶ್ವಬ್ಯಾಂಕಿನ "ಅಭಿಪ್ರಾಯದಲ್ಲಿ ಗ್ರಾಮೀಣ ಅಭಿವೃದ್ಧಿಯು ಒಂದು ನಿರ್ದಿಷ್ಟ ಗುಂಪಿನ, ಗ್ರಾಮೀಣ ಬಡವರ, ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಸುಧಾರಿಸಲು ವಿನ್ಯಾಸಗೊಳಿಸಲಾಗಿರುವ ಕಾರ್ಯತಂತ್ರವಾಗಿದೆ. ಅದು ಗ್ರಾಮೀಣ ಪ್ರದೇಶಗಳಲ್ಲಿ ಜೀವನ ನಿರ್ವಹಣೆ ಮಾಡಲು ಬಯಸುವ ಗ್ರಾಮೀಣ ಜನಸಂಖ್ಯೆಗೆ ಅಭಿವೃದ್ಧಿಯ ಪ್ರಯೋಜನಗಳನ್ನು ವಿಸ್ತರಿಸುವಿಕೆಯ ಕಾರ್ಯವನ್ನು ಒಳಗೊಳ್ಳುತ್ತದೆ".[2]

ಸಿ.ಜೆ. ಕಾಪ್‌ರವರ ಮಾತುಗಳಲ್ಲಿ ಹೇಳುವುದಾದರೆ "ಗ್ರಾಮೀಣ ಅಭಿವೃದ್ಧಿಯು ಸಾಂಘಿಕ ಪ್ರಯತ್ನದ ಮೂಲಕ ನಗರವಲಯಗಳ ಹೊರಗೆ ಬದುಕಿರುವ ಜನರಿಗೆ ಉತ್ತಮ ಬದುಕನ್ನು ಒದಗಿಸುವ ಮತ್ತು ಸ್ವಂತ ತಿಳುವಳಿಕೆಯನ್ನು ಮೂಡಿಸುವ ಉದ್ದೇಶವನ್ನು ಹೊಂದಿರುವ ಪ್ರಕ್ರಿಯೆಯಾಗಿದೆ.[3]

ಉದಯ್ ಪರೇಕ್‌ರವರು ತಮ್ಮ "ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಇನ್ ಏಷ್ಯಾ" ಎಂಬ ಕೃತಿಯಲ್ಲಿ ವ್ಯಾಖ್ಯಾನಿಸಿರುವಂತೆ "ಗ್ರಾಮೀಣ ಅಭಿವೃದ್ಧಿಯು ಗ್ರಾಮೀಣ ಜನರು ತಮ್ಮ ಆ ಬಗೆಯ ನಿಯಂತ್ರಣದ ಫಲವಾಗಿ ಹೆಚ್ಚು-ಹೆಚ್ಚು ಲಾಭಗಳನ್ನು ಹಂಚಿಕೊಳ್ಳಲಾಗುವಂತೆ ಮಾಡಿಕೊಳ್ಳುವುದನ್ನೂ ಒಳಗೊಂಡಂತೆ ಅದರ ಪರಿಸರವನ್ನು ನಿಯಂತ್ರಿಸಿಕೊಳ್ಳುವ ಸಾಮರ್ಥ್ಯಗಳನ್ನು ಸತತವಾಗಿ ಹೆಚ್ಚಿಸಿಕೊಳ್ಳುವ ಪ್ರಕ್ರಿಯೆಯಾಗಿದೆ".[4]

ಉಮಾ ಲಿಲಿಯವರು ವ್ಯಾಖ್ಯಾನಿಸಿರುವಂತೆ "ಗ್ರಾಮೀಣ ಅಭಿವೃದ್ಧಿಯು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಕಡಿಮೆ ಆದಾಯದ ಜನರ ಜೀವನ ಮಟ್ಟವನ್ನು ಸುಧಾರಿಸುವ ಮತ್ತು ಅವರ ಅಭಿವೃದ್ಧಿಯ ಪ್ರಕ್ರಿಯೆಯ ಸ್ವಯಂ-ಸಂಪೋಷಣೆಗೊಳ್ಳುವಂತೆ ಮಾಡುವುದಾಗಿದೆ".[5]

ಜಿ. ಪಾರ್ಥಸಾರಥಿಯವರು ಅಭಿಪ್ರಾಯ ಪಟ್ಟಿರುವಂತೆ "ಗ್ರಾಮೀಣ ಅಭಿವೃದ್ಧಿಯಲ್ಲಿನ ಸಂದಿಗ್ಧ ಅಂಶವೇ ಬಡವರು ತಮಗೆ ಲಭ್ಯವಾಗಿರುವ ಭೌತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಉತ್ತಮ ರೀತಿಯಲ್ಲಿ ಸದುಪಯೋಗ ಮಾಡಿಕೊಳ್ಳಲು ಅವಕಾಶವಾಗಿರುವುದರ ಮೂಲಕ ತಮ್ಮ ಜೀವನ ಮಟ್ಟಗಳನ್ನು ಸುಧಾರಣೆ ಮಾಡಿಕೊಳ್ಳುವುದೇ ಆಗಿದೆ. ಇದು ಇಲ್ಲವಾದರೆ ಗ್ರಾಮೀಣ ಸಂಪನ್ಮೂಲಗಳ ಬಳಕೆ ಕಾರ್ಯೀಯ ಮಹತ್ವವನ್ನು ಹೊಂದಿರುವುದಿಲ್ಲ. ಗ್ರಾಮೀಣ ಅಭಿವೃದ್ಧಿಯ ಪ್ರಕ್ರಿಯೆಯನ್ನು ಸ್ವಯಂ ಸಂಪೋಷಣೆಗೊಳ್ಳುವಂತೆ ಮಾಡುವಲ್ಲಿ ಬಂಡವಾಳವನ್ನು ಅಧಿಕಗೊಳಿಸುವುದು ಮತ್ತು ಬಡವರ ಲಾಭಕ್ಕಾಗಿ ತಾಂತ್ರಿಕ ಜ್ಞಾನವನ್ನು ಸದ್ಬಳಕೆ ಮಾಡುವುದೇ ಅಲ್ಲದೆ ಜನರು ಪೂರಕ ಸಂಸ್ಥೆಗಳನ್ನು ನಿರ್ಮಿಸುವುದು ಹಾಗೂ ಅವುಗಳಲ್ಲಿ ಕ್ರಿಯಾಶೀಲತೆಯಿಂದ ಕಾರ್ಯನಿರ್ವಹಿಸುವುದರ ಮೂಲಕ ಸಕ್ರಿಯವಾಗಿ ಪಾಲ್ಗೊಳ್ಳುವುದು ಅತ್ಯಗತ್ಯವಾಗಿರುವುದು. [6]

೩.೨.೧. ಗ್ರಾಮೀಣಾಭಿವೃದ್ಧಿಯ ಉದ್ದೇಶಗಳು

ಗ್ರಾಮೀಣ ಅಭಿವೃದ್ಧಿಯು ವ್ಯಾಪಕವಾದ ಒಂದು ವಿಷಯವಾಗಿದ್ದು ಅದರ ಅಧ್ಯಯನವು ವಿವಿಧ ವರ್ಗಗಳ ಜನರಿಗೆ ಅತ್ಯಗತ್ಯವಾದುದು. ಗ್ರಾಮೀಣ ಬದುಕಿನ ಸಮಸ್ಯೆಗಳನ್ನು ಗುರುತಿಸಿ ಪರಿಹರಿಸುವ ಗುರಿಯನ್ನು ಹೊಂದಿರುತ್ತದೆ. ಗ್ರಾಮೀಣ ಅಭಿವೃದ್ಧಿಯು ಕೃಷಿ ಬೆಳವಣಿಗೆ, ಶಿಕ್ಷಣ, ನೀರಾವರಿ, ಆರೋಗ್ಯ ಹೀಗೆ ಸಮಾಜದ ವಿವಿಧ ಆಯಾಮಗಳ ಅಭಿವೃದ್ಧಿಯ ಕಾರ್ಯಕ್ರಮವಾಗಿದೆ. ಸಮಾಜದ ಎಲ್ಲಾ ವರ್ಗದ ಜನರ ಅಭಿವೃದ್ಧಿಯೇ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಉದ್ದೇಶವಾಗಿರುತ್ತದೆ.

ಗ್ರಾಮೀಣಾಭಿವೃದ್ಧಿಯ ಉದ್ದೇಶಗಳು

- ಗ್ರಾಮೀಣ ಸಮಸ್ಯೆಗಳ ಬಗೆಗೆ ಅರಿವಿನ ಸೃಷ್ಠಿ
- ಬಡತನ ನಿವಾರಣೆ
- ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವುದು.
- ನಿರುದ್ಯೋಗ ನಿವಾರಣೆ
- ಶಾಶ್ವತ ಆಸ್ತಿಗಳ ಸೃಷ್ಠಿ
- ಗ್ರಾಮೀಣ ಸಂಪನ್ಮೂಲಗಳ ಸದ್ಬಳಕೆ
- ಸಹಕಾರ ಚಳುವಳಿಯ ಪುನಶ್ಚೇತನ
- ಸಮರ್ಪಿತ ಮತ್ತು ಪ್ರಾಮಾಣಿಕ ಮುಂದಾಳತ್ವದ ಬೆಳವಣಿಗೆ

೩.೨.೨. ಗ್ರಾಮೀಣಾಭಿವೃದ್ಧಿಯ ಮಹತ್ವ

ಭಾರತವು ಹಳ್ಳಿಗಳ ದೇಶವಾಗಿದ್ದು, ಕೃಷಿಯೇ ಪ್ರಧಾನ ಉದ್ಯೋಗವಾಗಿದೆ. ಭಾರತದ ಭವಿಷ್ಯ ದೇಶದ ಸುಮಾರು 6 ಲಕ್ಷ ಹಳ್ಳಿಗಳ ಏಳಿಗೆಯಲ್ಲಿ ಅಡಗಿದೆ.[7] ಗ್ರಾಮೀಣ ಭಾರತವು ಸಾಮಾನ್ಯವಾಗಿ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಕುಡಿಯುವ ನೀರು, ರಸ್ತೆ, ವಿದ್ಯುತ್, ಆರೋಗ್ಯ ಹೀಗೆ ಮೂಲಭೂತ ಸೌಕರ್ಯಗಳು ದುಬಾರಿಯಾಗಿವೆ. ಗಾಂಧೀಜಿಯವರು ಕನಸುಕಂಡಂತೆ ಹಳ್ಳಿಗಳ ಅಭಿವೃದ್ಧಿ ಸಾಧ್ಯವಾಗಿಲ್ಲ. ಹೀಗಾಗಿ ಗ್ರಾಮೀಣ ಪ್ರದೇಶದ ಸ್ಥಿತಿಗತಿಗಳನ್ನು ಸುಧಾರಿಸಲು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬೇಕಾಗಿದೆ.

೩.೩. ಗ್ರಾಮೀಣ ಅರ್ಥವ್ಯವಸ್ಥೆಯ ಲಕ್ಷಣಗಳು

ಗ್ರಾಮೀಣ ಅರ್ಥವ್ಯವಸ್ಥೆಯು ಕೆಲವು ವಿಶಿಷ್ಟವಾದ ಲಕ್ಷಣಗಳನ್ನು ಪಡೆದಿದೆ. ಅದು ನಗರ ಸಂಸ್ಕೃತಿಗಿಂತ ಮತ್ತು ನಗರ ಅರ್ಥವ್ಯವಸ್ಥೆಗಿಂತ ತೀರಾ ಭಿನ್ನವಾದುದಾಗಿದೆ.

➢ **ವ್ಯವಸಾಯದ ಪ್ರಾಬಲ್ಯ**

ಕೃಷಿಯ ಪ್ರಾಬಲ್ಯವು ಗ್ರಾಮೀಣ ಅರ್ಥವ್ಯವಸ್ಥೆಯ ಮೂಲಭೂತ ಲಕ್ಷಣವಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಬಹುಸಂಖ್ಯೆಯ ಜನರು ಪ್ರತ್ಯೇಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿಯನ್ನು ಅವಲಂಬಿಸಿರುವರು. ಭಾರತದ ಗ್ರಾಮೀಣ ಅರ್ಥವ್ಯವಸ್ಥೆಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ ಒಟ್ಟು ಜನಸಂಖ್ಯೆಯ ಸುಮಾರು ಶೇಕಡ 62 ರಷ್ಟು ಜನರು ಕೃಷಿಯನ್ನೇ ಪ್ರತ್ಯೇಕ್ಷವಾಗಿ ಅವಲಂಬಿಸಿ ಸಾಗುವಳಿಯಲ್ಲಿ ತೊಡಗಿರುವುದು ಕಂಡುಬರುತ್ತದೆ.

➢ **ಚೆದುರಿದ ಜನವಸತಿ**

ನಗರ ಪ್ರದೇಶಗಳಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶಗಳು ಚದುರಿದ ಜನವಸತಿಯನ್ನು ಹೊಂದಿರುವುದು ಕಂಡುಬರುತ್ತದೆ. ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಮನೆಗಳು ಒಂದರಿಂದ ಇನ್ನೊಂದು ಬಹಳ ದೂರದಲ್ಲಿ ಇರುತ್ತದೆ ಮತ್ತು ಒಂದು ಹಳ್ಳಿಯು ಇನ್ನೊಂದು ಹಳ್ಳಿಯಿಂದ ದೂರದಲ್ಲಿರುತ್ತದೆ.

➤ **ಸಾಮಾಜಿಕ ಸಂಪ್ರದಾಯುಗಳು**

ಅಭಿವೃದ್ಧಿಗೆ ಪೂರಕವಾಗುವಂತಹ ಸಂಸ್ಕೃತಿಯು ಗ್ರಾಮೀಣ ಸಮಾಜದಲ್ಲಿ ಕಾಣಸಿಗುವುದಿಲ್ಲ. ಪೂರ್ವಾಚಾರ ಪದ್ದತಿಗಳು, ಕುರುಡು ನಂಬಿಕೆಗಳು, ಸಂಪ್ರದಾಯುಗಳು ಮತ್ತು ಮೌಢ್ಯ ಜನತೆಯಲ್ಲಿ ಮನೆ ಮಾಡಿಕೊಂಡಿವೆ.

➤ **ಪ್ರಚ್ಛನ್ನ ನಿರುದ್ಯೋಗ**

ಬಹು ಸಂಖ್ಯೆಯ ಜನರಿಗೆ ಕೃಷಿಯಲ್ಲಿ ಉದ್ಯೋಗಾವಕಾಶಗಳಿಲ್ಲದಿದ್ದರೂ, ಕೃಷಿ ಚಟುವಟಿಕೆಯಲ್ಲಿಯೇ ತೊಡಗಿರುತ್ತಾರೆ. ಅಂದರೆ ಒಬ್ಬ ವ್ಯಕ್ತಿಯು ಮಾಡಬಹುದಾದ ಕೆಲಸದಲ್ಲಿ ಅನೇಕ ಜನರು ತೊಡಗಿರುತ್ತಾರೆ.

➤ **ಅವಿಭಕ್ತ ಕುಟುಂಬ ವ್ಯವಸ್ಥೆ**

ಅವಿಭಕ್ತ ಕುಟುಂಬ ವ್ಯವಸ್ಥೆ ಎಂದರೆ ಅನೇಕ ತಲೆಮಾರುಗಳ ಜನರು ವಿಭಜನೆಗೊಳ್ಳದೇ ಒಂದೇ ಕುಟುಂಬದಲ್ಲಿ ಒಟ್ಟಾಗಿ ವಾಸಿಸುವುದು ಎಂದರ್ಥ. ಇಂದು ನಗರ ಪ್ರದೇಶದಲ್ಲಿ ಈ ವ್ಯವಸ್ಥೆ ಅಷ್ಟಾಗಿ ಪ್ರಾಬಲ್ಯ ಉಳಿಸಿಕೊಂಡಿಲ್ಲ.

➤ **ಬಹುಬೇಗ ನಶಿಸುವ ವಸ್ತುಗಳ ಉತ್ಪಾದನೆ**

ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಉತ್ಪಾದಿಸಲಾಗುವ ವಸ್ತುಗಳೆಂದರೆ ಆಹಾರ ಧಾನ್ಯಗಳು, ಎಣ್ಣೆ ಬೀಜಗಳು, ಹಣ್ಣುಗಳು, ತರಕಾರಿಗಳು, ಹಾಲು ಇತ್ಯಾದಿ. ಸಾಮಾನ್ಯವಾಗಿ ಈ ಪದಾರ್ಥಗಳು ಬಹಳ ಬೇಗ ಕೆಡುವುದರಿಂದ ಸಾಧ್ಯವಾದಷ್ಟು ಶೀಘ್ರದಲ್ಲಿ ವಿಕ್ರಯಿಸುವ ಮತ್ತು ಅನುಭೋಗಿಸುವ ಕ್ರಮವನ್ನು ಕೈಗೊಳ್ಳಬೇಕಾಗಿರುತ್ತದೆ.

೩.೪. ಗ್ರಾಮೀಣಾಭಿವೃದ್ದಿಯ ವ್ಯಾಪ್ತಿ

ಗ್ರಾಮೀಣ ಅಭಿವೃದ್ದಿಗೆ ಸಂದಿಗ್ಧ ಕ್ಷೇತ್ರಗಳು ಮತ್ತು ಅಭಿವೃದ್ಧಿಯ ವಿವಿಧ ಆಯಕಟ್ಟುಗಳು ಇಲ್ಲವೇ ಅಂಶಗಳ ನಡುವಿನ ಅಂತರ ಸಂಬಂಧಗಳನ್ನು ಎಚ್ಚರಿಕೆಯಿಂದ ಗುರುತಿಸಿ ಆ ನಿಟ್ಟಿನಲ್ಲಿ ಅತ್ಯಂತ ಸಮಂಜಸವಾದ ಕೌಶಲ್ಯವನ್ನು ಕಂಡುಕೊಂಡು ಕಾರ್ಯೋನ್ಮುಖರಾಗಬೇಕಾದ ಅವಶ್ಯಕತೆ ಸರಕಾರದ ಮುಂದಿದೆ. ಗ್ರಾಮೀಣಾಭಿವೃದ್ದಿಯು ಈ ಕೆಳಗಿನ 7 ಕ್ಷೇತ್ರಗಳನ್ನು ಒಳಗೊಂಡಿದೆ

I. ಸಾಮಾಜಿಕ ಅರಿವನ್ನು ಅಭಿವೃದ್ಧಿ ಪಡಿಸುವುದು

ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಇರಿಸಬಹುದಾದ ಪ್ರಥಮ ಹೆಜ್ಜೆಎಂದರೆ ಸಾಮಾಜಿಕ ಅರಿವನ್ನು ಅಭಿವೃದ್ಧಿ ಪಡಿಸುವುದೇ ಆಗಿದೆ. ಜನರು ತಾವು ಅಭಿವೃದ್ಧಿ ಹೊಂದಲು ಅಡೆತಡೆಗಳನ್ನುಂಟು ಮಾಡುತ್ತಿರುವ ವಿವಿಧ ಅಂಶಗಳು ಯಾವುವು? ಅವುಗಳನ್ನು ನಿವಾರಣೆ ಮಾಡಿಕೊಳ್ಳಲು ಅನುಸರಿಸಬಹುದಾದ ಮಾರ್ಗೋಪಾಯಗಳಾವುವು? ತಾವು ವಾಸಿಸುತ್ತಿರುವ ಸಮುದಾಯದಲ್ಲಿನ ತಮ್ಮ ಹಕ್ಕುಗಳ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳಾವುವು? ಇವೇ ಮೊದಲಾದವುಗಳ ಬಗ್ಗೆ ಅರಿವನ್ನು ಉಂಟುಮಾಡುವಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಹೆಚ್ಚಿನ ರೀತಿಯಲ್ಲಿ ನೆರವಾಗುತ್ತದೆ.

II. ಅರ್ಪಣಾಭಾವದ ಗ್ರಾಮೀಣ ನಾಯಕತ್ವ

ಗ್ರಾಮೀಣ ಅಭಿವೃದ್ಧಿಯನ್ನು ಕೇವಲ ಬಂಡವಾಳ ನೀಡುವುದು ಮತ್ತು ಸರ್ಕಾರಿ ನೌಕರರು ಪಾತ್ರ ನಿರ್ವಹಿಸುವುದು ಇವಿಷ್ಟರಿಂದಲೇ ಸಾಧಿಸಲು ಸಾಧ್ಯವಿಲ್ಲ. ಅದು ಹೊರಗಡೆಯಿಂದ ಹೇರುವುದಾಗಿರದೇ ಒಳಗಡೆಯಿಂದಲೇ ಒಡಮೂಡಿ ಬಂದ ಪ್ರಕ್ರಿಯೆಯಾಗುವಂತೆ ಎಚ್ಚರಿಕೆ ವಹಿಸಬೇಕಾದುದು ಅಗತ್ಯವಾದುದು. ಅದು ಅರ್ಪಣಾಭಾವದ ಗ್ರಾಮೀಣ ನಾಯಕತ್ವದ ಕ್ರೀಯಾಶೀಲ ಪಾತ್ರ ನಿರ್ವಹಿಸುವಿಕೆಯಿಂದ ಮಾತ್ರ ಸಾಧ್ಯ.

III.ಸಾಮೂಹಿಕವಾಗಿ ತೀರ್ಮಾನ ತೆಗೆದುಕೊಳ್ಳುವುದು ಮತ್ತು ಸಾಮೂಹಿಕವಾಗಿ ಕ್ರಿಯಾಶೀಲರಾಗುವುದು

ಗ್ರಾಮೀಣ ಪ್ರದೇಶಗಳಲ್ಲಿರುವ ಜನರು ಯಾವಾಗ ತಾವು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಒಟ್ಟಾಗಿ ಚರ್ಚಿಸುವುದು, ವಿಚಾರ ವಿನಿಮಯ ಮಾಡಿಕೊಳ್ಳುವುದು, ಅರಿವನ್ನುಂಟುಮಾಡಿಕೊಳ್ಳುವುದರಲ್ಲಿ, ತೊಡಗುವರೋ ಆಗ ಅಭಿವೃದ್ಧಿ ಹೊಂದುವ ನಿಟ್ಟಿನಲ್ಲಿ ಒಂದು ಆಂದೋಲನ ಹುಟ್ಟಿಕೊಳ್ಳುವುದು.

IV. ಗುಡಿ ಮತ್ತು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿ

ಗ್ರಾಮೀಣ ಪ್ರದೇಶಗಳಲ್ಲಿನ ನಿರುದ್ಯೋಗಿಗಳು ಮತ್ತು ಅರೆನಿರುದ್ಯೋಗಿಗಳು ವಿವಿಧ ಬಗೆಯ ಗುಡಿ ಕೈಗಾರಿಕೆಗಳು ಮತ್ತು ಗ್ರಾಮ ಕೈಗಾರಿಕೆಗಳನ್ನು ಕೈಗೆತ್ತಿಕೊಂಡು ಉದ್ಯಮಶೀಲ ಗುಣವನ್ನು

ಬೆಳೆಸಿಕೊಳ್ಳಲು ಪ್ರೋತ್ಸಾಹಿಸುವುದು. ಕಚ್ಚಾ ಪದಾರ್ಥಗಳನ್ನು ಸ್ಥಳೀಯವಾಗಿ ದೊರೆಯುವಿಕೆಯ ಆಧಾರದ ಮೇಲೆ ಪೂರೈಸುವುದು, ಬಂಡವಾಳ ಹೂಡಲು ಧನಸಹಾಯ ಮಾಡುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ, ಉದ್ಯೋಗ ಸೃಷ್ಟಿಸುವುದು ಅಂತ್ಯತ ಅವಶ್ಯಕವಾಗಿದೆ.

V. ಪೂರಕ ಉದ್ಯೋಗಗಳನ್ನು ಮತ್ತು ಆದಾಯಗಳನ್ನು ಒದಗಿಸುವುದು:-

ಮಧ್ಯಮ ವರ್ಗದ ರೈತರು, ಸಣ್ಣ ರೈತರು, ಅತಿಸಣ್ಣ ರೈತರು, ಭೂರಹಿತ ಕೃಷಿ ಕಾರ್ಮಿಕರು ಮತ್ತು ಇತರ ಗ್ರಾಮೀಣ ಬಡವರು ಕೇವಲ ಕೃಷಿ ಕಾರ್ಯಗಳಿಗೆ ಜೋತುಬೀಳದೆ ಹೈನುಗಾರಿಕೆ, ಜೇನುಸಾಕಾಣಿಕೆ, ಮೀನು ಸಾಕಾಣಿಕೆ, ಕುರಿ, ಕೋಳಿ, ಹಂದಿ ಸಾಕಾಣಿಕೆ ಮೊದಲಾದ ಸಹಾಯಕರವಾದ ಪೂರಕ ಉದ್ಯೋಗಗಳನ್ನು ಅನುಸರಿಸುತ್ತಾ ಆದಾಯವನ್ನು ಹೆಚ್ಚಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸಬೇಕಾದುದು ತುರ್ತು ಅಗತ್ಯವಾಗಿದೆ ಉದಾಹರಣೆಗೆ ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಈ ಕೆಳಕಂಡ ಕಾರ್ಯಕ್ರಮಗಳು ಅಗತ್ಯವಾಗಿರುವುವು.

೧. ಸೂಕ್ತ ಪ್ರಮಾಣದ ಮತ್ತು ಉತ್ತಮ ಗುಣಮಟ್ಟದ ಮೇವನ್ನು ಒದಗಿಸುವುದು.

೨. ಹಾಲು ಮತ್ತು ಹಾಲಿನ ಇತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡುವ ಮಾರುಕಟ್ಟೆಯ ಸೌಲಭ್ಯ.

೩. ಮೂಲೆ, ಮೂಲೆಗಳಲ್ಲಿರುವ ಗ್ರಾಮಗಳನ್ನು ಒಳಗೊಂಡಂತೆ ಗ್ರಾಮೀಣ ಪ್ರದೇಶಗಳಲ್ಲಿ ಪಶುಗಳ ಆಸ್ಪತ್ರೆ ಸ್ಥಾಪಿಸುವುದು.

VI. ವಿಜ್ಞಾನದ ಬಳಕೆ:-

ಗ್ರಾಮೀಣ ಅಭಿವೃದ್ಧಿಗಾಗಿ ವಿಜ್ಞಾನದ ಬಳಕೆಯಾಗಬೇಕಾದುದು ಮತ್ತು ವೈಜ್ಞಾನಿಕ ಜ್ಞಾನವನ್ನು ಗ್ರಾಮೀಣ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಬೇಕಾದುದು ಅತ್ಯಗತ್ಯವಾಗಿದೆ. ವಿಜ್ಞಾನ ಮತ್ತು ವೈಜ್ಞಾನಿಕ ತಿಳುವಳಿಕೆಯಿಂದ ಮಾತ್ರ ಅನಕ್ಷರಸ್ಥ, ಅಮಾಯಕ, ಮುಗ್ಧ ಗ್ರಾಮೀಣ ಜನರು ತಮ್ಮ ಮೌಢ್ಯವನ್ನು ಬದಿಗೊತ್ತಿ ವಾಸ್ತಾವಿಕ ಅರಿವನ್ನು ಪಡೆದುಕೊಳ್ಳಬಲ್ಲರು. ತಮ್ಮ ಪರಂಪರಾಗತ ಮೂಢನಂಬಿಕೆಗಳನ್ನು ಕಂದಾಚಾರಗಳನ್ನು ದೂರವಿಡಬಲ್ಲರು. ವನ್ಯಜೀವಿಗಳ ಸಂರಕ್ಷಣೆ, ಅರಣ್ಯಸಂರಕ್ಷಣೆ, ಸಸ್ಯ ಸಂಪತ್ತನ್ನು ಸಂವರ್ಧಿಸುವುದು, ಪರಿಸರ ಸಮತೋಲನವನ್ನು ಕಾಪಾಡಿಕೊಂಡು ಬರುವುದು ಇವೇ ಮೊದಲಾದವುಗಳ ಬಗ್ಗೆ ಅರಿವನ್ನುಂಟುಮಾಡಿಕೊಳ್ಳಬಲ್ಲರು.

VII. ಕೃಷಿ ಮತ್ತು ಇತರ ಅಭಿವೃದ್ಧಿ:-

ಗ್ರಾಮೀಣ ಅಭಿವೃದ್ಧಿಯು ಕೇವಲ ಕೃಷಿಯ ಅಭಿವೃದ್ಧಿಗೆ ಸೀಮಿತವಾಗಿಲ್ಲ ಎಂಬುದು ನಿಜವಾದರೂ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವ ನಿಟ್ಟಿನಲ್ಲಿ ಕೃಷಿ ಮತ್ತು ಹೊಂದಿಕೊಂಡಂತಹ ಅನೇಕ ಇತರ ಕ್ಷೇತ್ರಗಳ ಅಭಿವೃದ್ಧಿಯು ಮಹತ್ವಪೂರ್ಣವಾದುದಾಗಿದೆ. ಭಾರತ ದೇಶದಲ್ಲಿ ಈ ದಿಶೆಯಲ್ಲಿ ಆಗಬೇಕಾದುದು ಬಹಳ ಇದೆ. ಆದುದರಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ.

೧. ಭೂ ಸುಧಾರಣೆಗಳು, ಅದರಲ್ಲಿಯೂ ಗೇಣಿದಾರರ ಸ್ಥಿತಿಗಳ ಸುಧಾರಣೆಗಳನ್ನು ಕೈಗೊಳ್ಳುವುದು.

೨. ಭೂ ಅಭಿವೃದ್ಧಿ ಯೋಜನೆಗಳನ್ನು ಚುರುಕುಗೊಳಿಸುವುದು.

೩. ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಒದಗಿಸುವುದು.

೪. ಸೂಕ್ತ ರೀತಿಯ ನೀರು ಪೂರೈಕೆ ಏರ್ಪಾಡಿನೊಡನೆ ನೀರಾವರಿ ಅನುಕೂಲವನ್ನು ಖಾತರಿ ಪಡಿಸುವುದು.

೫. ನ್ಯಾಯಯುತ ಬೆಲೆ ನೀಡುವ ದಕ್ಷ ಮಾರುಕಟ್ಟೆ ವ್ಯವಸ್ಥೆ.

೬. ವಿಭಿನ್ನ ಅಭಿವೃದ್ಧಿ ಯೋಜನೆಗಳ ನಡುವೆ ಸೂಕ್ತ ರೀತಿಯ ಸಮನ್ವಯವನ್ನು ಸಾಧಿಸುವುದರ ಮೂಲಕ ಪರಿಣಾಮಕಾರಿ ಆಡಳಿತ ನಡೆಸುವುದು.

೭. ಆಧುನಿಕ ಕೃಷಿ ಸಾಧನ ಸಲಕರಣೆಗಳು ಆದಷ್ಟೂ ಕಡಿಮೆ ಬೆಲೆಗೆ ದೊರೆಯುವಂತೆ ಮಾಡುವುದು.

೩.೫. ಗ್ರಾಮೀಣಾಭಿವೃದ್ಧಿಗೆ ಭಾರತ ಸರಕಾರ ಜಾರಿಗೊಳಿಸಿರುವ ಪ್ರಮುಖ ಯೋಜನೆಗಳು

ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಣೆಗಳನ್ನು ತರುವ ದಿಸೆಯಲ್ಲಿ ಸರಕಾರದ ಪ್ರಯತ್ನಗಳು ಸಂಘಟಿತವಾದ ಅಭಿವೃದ್ಧಿ ಇಲಾಖೆಗಳ ಮೂಲಕ ನಡೆದವು.[9] ಇಂತಹ ಇಲಾಖೆಗಳು ಪ್ರತ್ಯೇಕವಾಗಿ, ತಮ್ಮದೇ ಆದ ಬೇರೆ-ಬೇರೆ ಕಾರ್ಯಕ್ರಮಗಳನ್ನು ಅನುಸರಿಸಿ ಕಾರ್ಯನಿರ್ವಹಿಸುತ್ತಿದ್ದವು. ಪಂಚವಾರ್ಷಿಕ ಯೋಜನೆಗಳ ಪ್ರಾರಂಭದಿಂದಲೂ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದರೂ, ಐದನೆಯ ಪಂಚವಾರ್ಷಿಕ ಯೋಜನೆಯಿಂದೀಚೆಗೆ ಅವುಗಳನ್ನು ಹೆಚ್ಚು ತೀವ್ರವಾಗಿ ಆಚರಣೆಗೆ ತರಲಾಗಿದೆ ಇಂದು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ತೀವ್ರತೆ, ವ್ಯಾಪಕತೆ ಮತ್ತು ಪ್ರಾಮುಖ್ಯವನ್ನು ಗಮನಿಸಿ ಅವುಗಳನ್ನು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು

ಅಂತಲೇ ಹೆಸರಿಸಲಾಗಿದೆ. ಗ್ರಾಮೀಣ ಅಭಿವೃದ್ಧಿ ಸಾಧನೆಗೆ ಹಲವು ದಿಕ್ಕುಗಳಿಂದ ಹಲವಾರು ಕಾರ್ಯಕ್ರಮಗಳ ಅನುಷ್ಠಾನದ ಅವಶ್ಯಕತೆಯನ್ನು ಈ ಪರಿಕಲ್ಪನೆಯು ಒತ್ತಿ ಹೇಳುತ್ತದೆ.

ಪ್ರಮುಖ ಗ್ರಾಮೀಣಾಭಿವೃದ್ಧಿ ಯೋಜನೆಗಳು[10]

ಸ್ವರ್ಣ ಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆ (SGSY)

ಸ್ವರ್ಣ ಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆಯು ಒಂದು ಸ್ವ ಉದ್ಯೋಗ ಯೋಜನೆಯಾಗಿದೆ. ಹಿಂದೆ ಜಾರಿಯಲ್ಲಿದ್ದ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಸ್ವ ಉದ್ಯೋಗಕ್ಕಾಗಿ ಗ್ರಾಮೀಣ ಯುವಜನರ ತರಬೇತಿ ಯೋಜನೆ, ಗ್ರಾಮೀಣ ಭಾಗದ ಮಹಿಳೆ ಮತ್ತು ಶಿಶು ಅಭಿವೃದ್ಧಿ ಯೋಜನೆ ದಶಲಕ್ಷ ಬಾವಿ ಯೋಜನೆಗಳನ್ನು 1999ರ ಏಪ್ರಿಲ್‌ನಲ್ಲಿ ಒಂದುಗೂಡಿಸಿ ಸ್ವರ್ಣ ಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆ ಅಥವಾ ಎಸ್.ಜಿ.ಎಸ್.ವೈ ಎಂಬ ಯೋಜನೆಯನ್ನು ಈ ಕೆಳಗಿನ ಉದ್ದೇಶಗಳೊಂದಿಗೆ ಜಾರಿಗೊಳಿಸಲಾಗಿದೆ.

ಉದ್ದೇಶಗಳು

೧. ಬಡತನ ನಿರ್ಮೂಲನೆಗೆ ಏಕ ರೀತಿಯ ಸಾಮಿಪ್ಯ ಮಾರ್ಗವನ್ನು ಅನುಸರಿಸುವುದು

೨. ಸಾಂಘಿಕ ಸಾಲ ನೀಡಿಕೆಯ ಪ್ರಯೋಜನಗಳನ್ನು ಬಳಸಿಕೊಳ್ಳುವುದು

೩. ಹಲವಾರು ಬಗೆಯ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರಿಂದ ಉಂಟಾಗುವ ಸಮಸ್ಯೆಗಳನ್ನು ನಿವಾರಿಸುವುದು.

ಎಸ್. ಜಿ. ಎಸ್. ವೈ ಯೋಜನೆಯು ಜಿಲ್ಲಾ ಗ್ರಾಮೀಣ ಪ್ರತಿನಿಧಿಗಳು, ಬ್ಯಾಂಕುಗಳು, ಸಂಬಂಧಪಟ್ಟ ಇಲಾಖೆಗಳು, ಪಂಚಾಯತ್ ರಾಜ್ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಇತರೆ ಅರೆ ಸರ್ಕಾರಿ, ಸಂಘಟನೆಗಳನ್ನು ಸಮನ್ವಯ ಗೊಳಿಸುತ್ತದೆ. ಅದು ಬ್ಯಾಂಕ್ ಸಾಲ ಮತ್ತು ಸರ್ಕಾರಿ ಸಹಾಯ ಧನವನ್ನು ನೀಡುವುದರ ಮೂಲಕ ತಿಂಗಳಿಗೆ ಕನಿಷ್ಠ ರೂ2000 ಆದಾಯ ತರುವ ಆದಾಯ ಉತ್ಪತ್ತಿ ಮಾಡುವ ಆಸ್ತಿ ಪಾಸ್ತಿಗಳ ನಿರ್ಮಾಣ ಮಾಡಿ ನೆರವು ನೀಡಲ್ಪಟ್ಟ ಕುಟುಂಬವನ್ನು ಬಡತನ ರೇಖೆಗಿಂತ ಮೇಲೆತ್ತುವ ಗುರಿ ಹೊಂದಿರುತ್ತದೆ.

ಜವಾಹರ್ ಗ್ರಾಮ ಸಮೃದ್ಧಿಯೋಜನೆ (JGSY)

ಜವಾಹರ್ ಗ್ರಾಮ ಸಮೃದ್ಧಿ ಯೋಜನೆಯು ಒಂದು ವೇತನ ಉದ್ಯೋಗ ಕಾರ್ಯಕ್ರಮವಾಗಿದೆ. ಇದನ್ನು ಜವಾಹರ್ ರೋಜ್‌ಗಾರ್ ಯೋಜನೆ ಅಥವಾ ಜೆ.ಆರ್.ವೈ. ಯೋಜನೆಯ ನೂತನ ಹೆಸರಾಗಿದ್ದು ಸಂಪೂರ್ಣ ಹೊಸ ರೂಪವನ್ನು ಪಡೆದಿರುವುದು. ಈ ಯೋಜನೆಯ ಉದ್ದೇಶಗಳು ಈ ಕೆಳಕಂಡಂತಿರುವುದು.

ಉದ್ದೇಶಗಳು

೧. ಗ್ರಾಮೀಣ ಬಡಜನರಿಗೆ ಸುರಕ್ಷಿತ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಸಲುವಾಗಿ ಗ್ರಾಮೀಣ ಬೇಡಿಕೆ ಆಧಾರಿತ ಮೂಲ ಸೌಲಭ್ಯಗಳನ್ನು ನಿರ್ಮಿಸುವುದು ಮತ್ತು ಗ್ರಾಮ ಮಟ್ಟದಲ್ಲಿ ದೀರ್ಘಕಾಲಿಕ ಆಸ್ತಿ ಪಾಸ್ತಿಗಳನ್ನು ನಿರ್ಮಿಸುವುದು.

೨. ಗ್ರಾಮೀಣ ಭಾಗದ ನಿರುದ್ಯೋಗಿ ಬಡಜನರಿಗೆ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

ಈ ಯೋಜನೆಯಡಿ ವೇತನ ಆಧಾರಿತ ಉದ್ಯೋಗಗಳನ್ನು ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿರುವ ಕುಟುಂಬಗಳಿಗೆ ನೀಡಲಾಗುತ್ತದೆ. ಈ ಯೋಜನೆಯಲ್ಲಿ ಸಂಪನ್ಮೂಲಗಳ ವಲಯಾಧಾರಿತ ಹಂಚಿಕೆ ಇಲ್ಲವಾದರೂ ಸಹ, ವಾರ್ಷಿಕ ಹಂಚಿಕೆಯಲ್ಲಿ ಶೇ.22.5 ರಷ್ಟನ್ನು ಪರಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರೆಗೆ ಹಾಗೂ ಶೇ. 3ರ ರಷ್ಟನ್ನು ಅಂಗವಿಕಲರಿಗೆ ವಿತರಣೆ ಮಾಡಬೇಕೆಂಬ ಷರತ್ತು ವಿಧಿಸಲಾಗಿರುವುದು. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯಾ ಸರಕಾರಗಳು 4:1 ರ ಅನುಪಾತದಲ್ಲಿ ಹಣಕಾಸನ್ನು ಒದಗಿಸುತ್ತದೆ.

ವಿಶ್ವ ಯೋಜನೆ

ಗ್ರಾಮೀಣ ಪ್ರದೇಶದಲ್ಲಿ ಕಚ್ಚಾ ಮಾಲು ಆಧಾರಿತ, ಕುಶಲತೆ ಆಧಾರಿತ ಹಾಗೂ ಮಾನವ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡು ನಿರುದ್ಯೋಗ ನಿವಾರಣೆಯ "ವಿಶ್ವಯೋಜನೆ"ಯನ್ನು 1991 ರಲ್ಲಿ ಹಮ್ಮಿಕೊಳ್ಳಲಾಯಿತು.

1. ಕುಶಲತೆ ಪರಿಣತಿಗಾಗಿ ಸೂಕ್ತ ತರಬೇತಿ ನೀಡುವುದು.
2. ತರಬೇತಿ ನಂತರ ಘಟಕಗಳನ್ನು ಉತ್ಪಾದನೆಗೆ ತೊಡಗಿಸುವುದು.
3. ಸಿದ್ದ ವಸ್ತುಗಳ ಮಾರಾಟದ ವ್ಯವಸ್ಥೆಯನ್ನು ಡಿ. ಎಸ್. ಎಂ. ಎಸ್ ಹಾಗೂ ಸಂಘಟಿತ ವಲಯದ ಸಂಸ್ಥೆ ಮತ್ತು ಮಂಡಳಿಗಳಿಗೆ ಒದಗಿಸುವುದು.

4. ಗ್ರಾಮೀಣ ಕುಶಲಕರ್ಮಿಗಳು ಹಾಗೂ ಉದ್ಯಮಶೀಲರನ್ನು ಸಕ್ರೀಯವಾಗಿ ಈ ಯೋಜನೆಯಲ್ಲಿ ಅಳವಡಿಸಿ ಉದ್ಯೋಗ ಒದಗಿಸುವುದು.

ಸ್ವಚ್ಛ ಗ್ರಾಮ ಯೋಜನೆ

ಸ್ವಚ್ಛ ಗ್ರಾಮ ಯೋಜನೆ ಅಥವಾ ನಿರ್ಮಲ ಗ್ರಾಮ ಯೋಜನೆಯು ಕರ್ನಾಟಕ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಒಂದು ಪ್ರಮುಖ ಪ್ರಗತಿಪರ ಯೋಜನೆಯಾಗಿದೆ. ರಾಜ್ಯವ್ಯಾಪಿ ಗ್ರಾಮೀಣ ಸ್ವಚ್ಛತೆಯ ಈ ಕಾರ್ಯಕ್ರಮವನ್ನು ನಿರ್ಮಲ ಕರ್ನಾಟಕ ಕಾರ್ಯಕ್ರಮದ ಹೆಸರಿನಲ್ಲಿ 1995 ನೇ ಇಸವಿಯ ಅಕ್ಟೋಬರ್ ದಿನಾಂಕದಂದು ಪ್ರಾರಂಭಿಸಲಾಗಿದೆ.

ಉದ್ದೇಶಗಳು

೧. ಗ್ರಾಮದ ಒಳರಸ್ತೆ ಮತ್ತು ಬೀದಿಗಳ ಮೇಲ್ಮೈಯನ್ನು ಉತ್ತಮ ಪಡಿಸುವುದು.

೨. ಕೊಳೆ ಮತ್ತು ಮಳೆ ನೀರಿನ ವಿಲೇವಾರಿಗಾಗಿ ಚರಂಡಿಗಳನ್ನು ನಿರ್ಮಿಸುವುದು.

೩. ಗ್ರಾಮದ ಎಲ್ಲಾ ಮನೆಗಳಿಗೆ ಹೊಗೆರಹಿತ ಒಲೆಗಳನ್ನು ಒದಗಿಸುವುದು.

೪. ಗ್ರಾಮದ ಎಲ್ಲಾ ಜನತೆಗಾಗಿ ಕೌಟುಂಬಿಕ ಶೌಚಾಲಯಗಳ, ಸಾಮೂಹಿಕ ಶೌಚಾಲಯಗಳ ಮತ್ತು ಶಾಲಾ ಶೌಚಾಲಯಗಳ ನಿರ್ಮಾಣ ಮಾಡುವುದು.

೫. ಸಾಮಾಜಿಕ ಮಿಶ್ರ ಗೊಬ್ಬರದ ಅಂಗಳ ಅಥವಾ ಕಮ್ಯೂನಿಟಿ ಕಾಂಪೋಸ್ಟ್ ಯಾರ್ಡ್ ಅನ್ನು ಒದಗಿಸಿ, ಗ್ರಾಮದ ವಾಸ ಸ್ಥಳಗಳಿಂದ ತಿಪ್ಪೆಗುಂಡಿಗಳನ್ನು ತೆಗೆದು ಹಾಕುವುದು.

ಸ್ವಸ್ತಿ ಗ್ರಾಮ ಯೋಜನೆ

ಸ್ವಸ್ತಿ ಗ್ರಾಮ ಯೋಜನೆಯು ಕರ್ನಾಟಕ ರಾಜ್ಯ ಸರಕಾರವು ರೂಪಿಸಿ ಜಾರಿಗೆ ತಂದಿರುವ ಒಂದು ವಿಶಿಷ್ಟ ಯೋಜನೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದ ಗ್ರಾಮಗಳ ಸರ್ವತೋಮುಖ ಅಭಿವೃದ್ದಿಯನ್ನು ಸಾಧಿಸುವ ದಿಸೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಸ್ವಸ್ತಿ ಗ್ರಾಮ ಯೋಜನೆಯನ್ನು 1997 ನೇ ಇಸವಿ ಆಗಸ್ಟ್ ಹದಿನೈದನೇ ದಿನಾಂಕದಂದು ಜಾರಿಗೆ ತಂದು ಪ್ರಪ್ರಥಮವಾಗಿ ರಾಜ್ಯದ ಬಳ್ಳಾರಿ ಜಿಲ್ಲೆ ಹಗರಿಬೊಮ್ಮನ ಹಳ್ಳಿ ತಾಲೂಕಿನ ಚಿಂತ್ರ ಹಳ್ಳಿ ಎಂಬ ಗ್ರಾಮದಲ್ಲಿ ವಿದ್ಯುಕ್ತವಾಗಿ ಉದ್ಘಾಟಿಸಲಾಯಿತು.

ಉದ್ದೇಶಗಳು

೧. ನೈರ್ಮಲ್ಯವನ್ನು ಸಾಧಿಸುವುದು.

೨. ಭೂ ಸಾರ ಸಂರಕ್ಷಣೆ ಮಾಡುವುದು ಭೂ ಜಲ ಅರ್ಥಾತ್ ಅಂತರ್ಜಾಲವನ್ನು ಹೆಚ್ಚಿಸುವುದು.

೩. ಕುಡಿಯುವ ನೀರನ್ನು ಏರ್ಪಡು ಮಾಡುವುದು.

೪. ವಸತಿ ಏರ್ಪಾಡು ಮಾಡುವುದು.

೫. ಮರಗಿಡಗಳು ಅರ್ಥಾತ್ ಸಸ್ಯ ಸಂಪತ್ತನ್ನು ಸಂವರ್ಧಿಸುವುದು.

೬. ರಸ್ತೆಗಳ ನಿರ್ಮಾಣ, ಶಾಲೆ, ವಾಚನಾಲಯ, ಯುವಜನರಿಗೆ ಸ್ವಯಂ ಉದ್ಯೋಗ ಮುಂತಾದವುಗಳನ್ನು ವ್ಯವಸ್ಥೆ ಮಾಡುವುದು.

ಇಂದಿರಾ ಆವಾಸ ಯೋಜನೆ

ಭಾರತ ಸರಕಾರವು ಇಂದಿರಾ ಆವಾಸ ಯೋಜನೆಯನ್ನು 1985 – 86ರಲ್ಲಿ ಜಾರಿಗೆ ತಂದಿತು. ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ರೇಖೆಗಿಂತ ಕೆಳಗೆ ಜೀವಿಸುತ್ತಿರುವ ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಮತ್ತು ವಿಮುಕ್ತಿಗೊಂಡ ಜೀತದಾಳುಗಳಿಗೆ ಯಾವುದೇ ವೆಚ್ಚವಿಲ್ಲದೇ ಮನೆಗಳನ್ನು ಒದಗಿಸುವುದು ಈ ಯೋಜನೆಯ ಧ್ಯೇಯವಾಗಿತ್ತು. 1993-94ರಿಂದ ಈ ಯೋಜನೆಯನ್ನು ಪರಿಶಿಷ್ಟ ಜಾತಿಯೇತರ ಮತ್ತು ಪರಿಶಿಷ್ಟ ಪಂಗಡೇತರ ವರ್ಗಗಳ ಜನರಿಗೆ ವಿಸ್ತರಿಸಲಾಗಿದೆ. ಅಂತೆಯೇ ಕಾರ್ಯತತ್ಪರರಾಗಿರುವಾಗಲೇ ಮಡಿದ ಸೈನಿಕರ ಮತ್ತು ಅರೆ ಸೈನಿಕರ ಕುಟುಂಬಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ.

ಅಂತ್ಯೋದಯ ಅನ್ನ ಯೋಜನೆ:–

ಬಡತನದ ರೇಖೆಯ ಕೆಳಗಿರುವ ಅತ್ಯಂತ ಬಡ 1 ಕೋಟಿ ಜನರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ವಿಶೇಷ ಸವಲತ್ತು ನೀಡುವುದನ್ನು ಅಂತ್ಯೋದಯ ಅನ್ನ ಯೋಜನೆಯೆಂದು ಕರೆಯಲಾಗುತ್ತದೆ. ಇದನ್ನು 2000 ಡಿಸೆಂಬರ್‌ನಲ್ಲಿ ಕಾರ್ಯರೂಪಕ್ಕೆ ತರಲಾಗಿದೆ. ಈ ಯೋಜನೆಯ ಫಲಾನುಭವಿಗಳಿಗೆ 25 ಕೆ.ಜಿ ಧಾನ್ಯವನ್ನು ಬಹಳ ಕಡಿಮೆ ದರದಲ್ಲಿ ವಿತರಿಸಲಾಗುತ್ತದೆ. ಅಕ್ಕಿಯನ್ನು ಕಿಲೋ ಒಂದಕ್ಕೆ ರೂ 3ರ ದರದಲ್ಲಿ ಮತ್ತು ಗೋಧಿಯನ್ನು ಕಿಲೋ ಒಂದಕ್ಕೆ 2ರ ದರದಲ್ಲಿ ನೀಡಲಾಗುತ್ತಿದೆ.

ಆಶ್ರಯ ವಸತಿ ಯೋಜನೆ:-

ಗ್ರಾಮೀಣ ಬಡವರ್ಗದ ವಸತಿ ರಹಿತರಿಗೆ ಸ್ವಂತ ಮನೆಗಳನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಕರ್ನಾಟಕ ರಾಜ್ಯ ಸರ್ಕಾರವು 1993-94ನೇ ಸಾಲಿನಲ್ಲಿ ಜಾರಿಗೆ ತಂದಿತು. ಇದೇ ತರಹದ ಯೋಜನೆಯನ್ನು ವಿವಿಧ ರಾಜ್ಯ ಸರಕಾರಗಳೂ ಸಹ ಅನುಷ್ಠಾನಕ್ಕೆ ತಂದಿವೆ.

ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತಿದೆ. ಎಲ್ಲಾ ಫಲಾನುಭವಿಗಳು ಮಹಿಳೆಯರೇ ಆಗಿರಬೇಕೆಂಬ ಕಡ್ಡಾಯ ನಿಯಮವಿದೆ. ಆದರೆ ಅಂಗವಿಕಲರು, ಮಾಜಿ ಸೈನಿಕರು, ವಿಧುರರು ಮತ್ತು ಹಿರಿಯ ನಾಗರಿಕರಿಗೆ ಈ ನಿಯಮವು ಅನ್ವಯವಾಗುವುದಿಲ್ಲ.

ಕ್ಷೇತ್ರಾಭಿವೃದ್ಧಿ ಯೋಜನೆಗಳು:-

1973ರಲ್ಲಿ ಆರಂಭಗೊಂಡ ಬರಪೀಡಿತ ಪ್ರದೇಶ ಕಾರ್ಯಕ್ರಮ, 1977ರಲ್ಲಿ ಆರಂಭಗೊಂಡ ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ ಮತ್ತು 1989 ರಲ್ಲಿ ಆರಂಭಗೊಂಡ ಸಮಗ್ರ ವ್ಯರ್ಥಭೂಮಿ ಅಭಿವೃದ್ಧಿ ಕಾರ್ಯಕ್ರಮಗಳು ಪ್ರಮುಖವಾದ ಕ್ಷೇತ್ರಾಭಿವೃದಿ ಯೋಜನೆಗಳಾಗಿವೆ.

ಈ ಯೋಜನೆಗಳಲ್ಲಿ ಹೆಕ್ಟೇರಿಗೆ ರೂ 6000ದಂತೆ ವ್ಯಯ ಮಾಡಲು ನಿರ್ಧರಿಸಲಾಗಿದೆ. ಮೊದಲೆರಡು ಯೋಜನೆಗಳಲ್ಲಿ ಕೇಂದ್ರವು ಹೆಕ್ಟೇರಿಗೆ ರೂ 6500 ಮತ್ತು ರಾಜ್ಯಗಳು ರೂ 4500ರಂತೆ ನೀಡಬೇಕಾಗಿದೆ. ಜೊತೆಗೆ ಮೂರನೆಯ ಯೋಜನೆಗೆ ಕೇಂದ್ರ ಸರಕಾರವು ಹೆಕ್ಟೇರಿಗೆ ರೂ5,500 ಮತ್ತು ರಾಜ್ಯವು 500 ರೂಪಾಯಿಯ ಹಣಕಾಸಿನ ನೆರವನ್ನು ನೀಡುತ್ತವೆ.

ಅಂಬೇಡ್ಕರ್ ವಸತಿ ಯೋಜನೆ:-

ಪರಿಶಿಷ್ಟ ಜಾತಿಗಳ ಗ್ರಾಮೀಣ ಬಡವರ್ಗಗಳ ವಸತಿ ರಹಿತರಿಗೆ ಸ್ವಂತ ಮನೆಗಳನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಕರ್ನಾಟಕ ಸರಕಾರವು 1993-94ನೇ ಸಾಲಿನಲ್ಲಿ ಜಾರಿಗೆ ತಂದಿತು.

ಅಂಬೇಡ್ಕರ್ ವಸತಿ ಯೋಜನೆಯಲ್ಲಿ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡಲಾಗುತ್ತದೆ. ಎಲ್ಲಾ ಫಲಾನುಭವಿಗಳು ಮಹಿಳೆಯರೇ ಆಗಿರಬೇಕೆಂಬ ಕಡ್ಡಾಯ ನಿಯಮವಿದೆ. ಅಂಬೇಡ್ಕರ್ ವಸತಿ ಯೋಜನೆಯಡಿ ಮನೆಗಳನ್ನು ಫಲಾನುಭವಿಗಳೇ ಸ್ವತಃ ನಿರ್ಮಿಸಿಕೊಳ್ಳಲು ಪ್ರಥಮ

ಆದ್ಯತೆಯನ್ನು ನೀಡಬೇಕಾಗಿರುತ್ತದೆ. ಮನೆಗಳ ವಿಸ್ತೀರ್ಣ ಕನಿಷ್ಠ 200 ಚದರಡಿ ಇರುವಂತೆ ಮತ್ತು ಗರಿಷ್ಠ 400 ಚದರಡಿ ಮೀರದಂತೆ ನೋಡಿಕೊಳ್ಳಬೇಕಾಗುತ್ತದೆ.

೩. ೬. ಗ್ರಾಮೀಣಾಭಿವೃದ್ಧಿಯ ಸಮಸ್ಯೆಗಳು:-

ನಮ್ಮ ದೇಶದ ಬಹುಪಾಲು ಜನರು ಗ್ರಾಮೀಣ ಪ್ರದೇಶದಲ್ಲಿಯೇ ನೆಲೆಸಿರುವುದರಿಂದ, ಗ್ರಾಮೀಣಾಭಿವೃದ್ಧಿಯು ಹೆಚ್ಚಿನ ಮಹತ್ವವನ್ನು ಪಡೆದಿದೆ. ಆದರೆ ಯಾವುದೇ ಗ್ರಾಮೀಣಾಭಿವೃದ್ಧಿ ಯೋಜನೆಗಳು ನಿರೀಕ್ಷಿತ ಮಟ್ಟದ ಯಶಸ್ಸನ್ನು ಪಡೆಯುತ್ತಿಲ್ಲ. ಇದಕ್ಕೆ ಮುಖ್ಯವಾಗಿ ಈ ಕೆಳಗಿನ ಅಂಶಗಳನ್ನು ಗುರುತಿಸಬಹುದು.

ಅನಕ್ಷರತೆ:-

ಗ್ರಾಮೀಣ ಪ್ರದೇಶದ ಜನರು ಸಾಮಾನ್ಯವಾಗಿ ಅಶಿಕ್ಷಿತರಾಗಿರುತ್ತಾರೆ. ಈ ಅಶಿಕ್ಷಿತ ಜನರು ಸರಕಾರದ ಕಾರ್ಯಕ್ರಮಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ತಮಗೆ ಬರಬೇಕಾಗಿರುವ ಸೌಕರ್ಯಗಳ ಬಗ್ಗೆ ಅರ್ಥ ಮಾಡಿಕೊಳ್ಳದೆ ನಿರ್ಲಿಪ್ತರಾಗಿರುತ್ತಾರೆ ಇದು ಗ್ರಾಮೀಣಾಭಿವೃದ್ಧಿಗೆ ತೊಡಕಾಗಿ ಪರಿಣಮಿಸಿದೆ.

ಗ್ರಾಮೀಣ ಜನರ ಅಸಹಕಾರ ಮತ್ತು ಅಸಡ್ಡೆ:-

ಗ್ರಾಮೀಣ ಜನರ ಅಜ್ಞಾನದಿಂದಾಗಿ ಬಹಳಷ್ಟು ಗ್ರಾಮೀಣಾಭಿವೃದ್ಧಿ ಯೋಜನೆಗಳು ಸರಿಯಾಗಿ ಅನುಷ್ಠಾನಕ್ಕೆ ಬರುತಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವ ಮೂಡನಂಬಿಕೆಗಳು, ಅಂಧಶ್ರದ್ಧೆ ಮತ್ತು ಜಾತೀಯತೆ ಇದಕ್ಕೆ ಮುಖ್ಯ ಕಾರಣಗಳಾಗಿವೆ.

ಸರಕಾರಿ ಅಧಿಕಾರಿಗಳ ನಿರ್ಲಕ್ಷ:-

ಭ್ರಷ್ಟ ಮತ್ತು ಅಸಮರ್ಥ ಅಧಿಕಾರಿಗಳು ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಳ್ಳುವಲ್ಲಿ ತೋರುವ ಅಸಡ್ಡೆಯಿಂದ, ಗ್ರಾಮದ ಜನರು ಅವಕಾಶ ವಂಚಿತರಾಗುತ್ತಿದ್ದಾರೆ. ರಾಜಕಾರಣಿಗಳು ಮತ್ತು ಅಧಿಕಾರಿಗಳು ಜನರ ಅಭಿವೃದ್ಧಿಯ ಬದಲು ತಮ್ಮ ಅಭಿವೃದ್ಧಿಗೇ ಹೆಚ್ಚಿನ ಮಹತ್ವ ನೀಡುತ್ತಿರುವುದು ಆತಂಕಕಾರಿಯಾಗಿದೆ.

ರಾಜಕೀಯ ಮತ್ತು ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆ:-

ಭಾರತದ ರಾಜಕೀಯ ವ್ಯವಸ್ಥೆ ಜಾತಿ ಮತ್ತು ಕೋಮು ಆಧಾರಿತವಾಗಿದೆ. ಜಾತಿ ಸಂಘಟನೆ ಮತ್ತು ಕೋಮು ಸಂಘಟನೆಗಳು ಭಾವನಾತ್ಮಕ ವಿಷಯಗಳಿಗೆ ಆದ್ಯತೆ ನೀಡಿ ಬಡಜನರು ಆರ್ಥಿಕ ಕಾರಣಗಳಿಗೆ ಒಗ್ಗೂಡಿ ಚಳುವಳಿ ನಡೆಸದಂತೆ ಮಾಡುವಲ್ಲಿ ಸಫಲವಾಗಿದೆ ಜೊತೆಗೆ ಫಲಾನುಭವಿಗಳ ಆಯ್ಕೆಯಲ್ಲಿಯೂ ರಾಜಕೀಯ ನಡೆಯುತ್ತದೆ. ಯೋಜನೆಯ ಬಗ್ಗೆ ಜನರಿಗೆ ಮಾಹಿತಿ ನೀಡದೆ, ಇರುವುದರಿಂದ ಅವು ಅರ್ಹರನ್ನು ತಲುಪುತ್ತಿಲ್ಲ. ರಾಜಕಾರಣಿಗಳು ತಮ್ಮ ಸ್ವಾರ್ಥವನ್ನೇ ಗಮನದಲ್ಲಿಟ್ಟುಕೊಂಡು ವ್ಯವಹರಿಸುತ್ತಿರುವುದರಿಂದ, ಬಡಜನರು ಯೋಜನೆಗಳ ಫಲವನ್ನು ಅನುಭವಿಸುತ್ತಿಲ್ಲ. ಹೀಗಾಗಿ ರಾಜಕಾರಣಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ನೆನೆಗುದಿಗೆ ಬಿದ್ದಿವೆ.

೧. ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ

- ಕೆ. ಭೈರಪ್ಪ, ಪುಟ – ೨೧೬.

೨. ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಪುಟ ೮೪

ಆರ್. ಕೃಷ್ಣಯ್ಯ ಗೌಡ ಪುಟ ೮೪

೩. ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ

ಕೆ. ಭೈರಪ್ಪ, ೨೧೭ – ೨೧೮.

೪. ಎನ್.ಟಿ ಎರ್ರಿಸ್ವಾಮಿ

೫. ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ

ಕೆ. ಭೈರಪ್ಪ, ೨೧೭ – ೨೨೨

೬. ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಪುಟ – ೨೧೯

೭. ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ಧಿ

ಕೆ. ಭೈರಪ್ಪ, ೯೧೬ –೯೩೮.

ಅದ್ಯಾಯ – 4

ಸಮೀಕ್ಷೆಗೊಳಪಟ್ಟ ಬೆಳ್ತಂಗಡಿ ತಾಲೂಕಿನ ಪರಿಚಯ ಮತ್ತು ಕಿರು ಹಣಕಾಸು

ೞ. ೧. ಭೌಗೋಳಿಕ ಬೆಳ್ತಂಗಡಿ

ೞ. ೨. ಬೆಳ್ತಂಗಡಿಯ ಆರ್ಥಿಕತೆ

ೞ. ೩. ಜನ ಸಾಂದ್ರತೆ ಮತ್ತು ಲಿಂಗಾನುಪಾತ

ೞ. ೞ. ಸಾಕ್ಷರತಾ ಪ್ರಮಾಣ

ೞ. ೫. ಬೆಳ್ತಂಗಡಿಯ ಭೂಮಿಯ ಬಳಕೆ

ೞ. ೬. ವೃತ್ತಿಯ ವಿತರಣೆ

ೞ. ೭. ಕಿರು ಹಣಕಾಸಿನ ಹಿನ್ನೆಲೆ

ೞ. ೮. ಯೋಜನೆಯ ಮೂಲಕ ಸಾಲ ಪಡೆಯುವ ವಿಧಾನ

೪. ೧. ಭೌಗೋಳಿಕ, ಬೆಳ್ತಂಗಡಿ

ಬೆಳ್ತಂಗಡಿಯು ಕರ್ನಾಟಕ ರಾಜ್ಯದ ದ. ಕ ಜಿಲ್ಲೆಯ ಐದು ತಾಲೂಕುಗಳಲ್ಲಿ ಒಂದಾಗಿದೆ. ವಿಸ್ತೀರ್ಣದಲ್ಲಿ ಜಿಲ್ಲೆಯಲ್ಲಿಯೇ ಅತ್ಯಂತ ದೊಡ್ಡ ತಾಲೂಕಾಗಿದೆ. ನೇತ್ರಾವತಿಯು ತಾಲೂಕಿನ ಮುಖ್ಯ ನದಿಯಾಗಿದೆ. ಜೊತೆಗೆ ಅಡಿಕೆ, ತೆಂಗು, ರಬ್ಬರ್ ಇಲ್ಲಿಯ ಮುಖ್ಯ ಬೆಳೆಯಾಗಿದೆ. ಪ್ರಸಿದ್ದ ಪುಣ್ಯ ಕ್ಷೇತ್ರಗಳಲ್ಲೊಂದಾದ ಧರ್ಮಸ್ಥಳ ಬೆಳ್ತಂಗಡಿ ತಾಲೂಕಿನಲ್ಲಿದೆ.



೪. ೨. ಬೆಳ್ತಂಗಡಿಯ ಆರ್ಥಿಕತೆ

ದ. ಕ ಜಿಲ್ಲೆಯಲ್ಲಿ ಬೆಳ್ತಂಗಡಿ ತಾಲೂಕಿನ ಒಟ್ಟು ಸ್ಥಾನಮಾನದ ಅವಲೋಕನದೊಂದಿಗೆ ಆರ್ಥಿಕತೆಯ ಅಧ್ಯಯನ ಆರಂಭಗೊಳ್ಳುತ್ತದೆ ಮುಂದಿನ ಕೋಷ್ಟಕ ತುಲನಾತ್ಮಕ ಅಧ್ಯಯನ ಮಾಡುತ್ತದೆ.

ಕೋಷ್ಟಕ ೪.೧: ದ.ಕ ಜಿಲ್ಲೆಯಲ್ಲಿ ಬೆಳ್ತಂಗಡಿ

ಕ್ರಮ ಸಂಖ್ಯೆ	ವಿವರಗಳು	ಭಾರತ	ಕರ್ನಾಟಕ	ದಕ್ಷಿಣ ಕನ್ನಡ	ಬೆಳ್ತಂಗಡಿ
೧	ಒಟ್ಟು ವಿಸ್ತೀರ್ಣ (ಚ.ಕಿ.ಮೀ)	30650127	191791	4560	1375
೨	ಜನಸಂಖ್ಯೆ : ಒಟ್ಟು ಗಂಡಸರು ಹೆಂಗಸರು	1027015247 531277078 495738169	52733958 26856343 25877615	1897730 938434 959296	246494 121288 125206
೩	ಗ್ರಾಮೀಣ ಪ್ರದೇಶ ಒಟ್ಟು ಗಂಡಸರು ಹೆಂಗಸರು	741660293 381141184 360519109	34814100 17618593 17195507	1168428 574657 563771	239189 117641 121548
೪	ನಗರ ಪ್ರದೇಶ ಒಟ್ಟು ಗಂಡಸರು ಹೆಂಗಸರು	285354954 150135864 135219050	1799858 9237750 8682108	729302 363777 365525	7305 3647 3658
೫	ದಶಕದ ಬೆಳವಣಿಗೆ ಒಟ್ಟಾರೆ (೧೯೯೧ ರಿಂದ ೨೦೦೧) ಶೇಕಡಾ	180627359 21.34	775675 17.25	241565 14.58	-
೬	ಜನಸಾಂದ್ರತೆ	324	275	416	179
೭	ಲಿಂಗಾನುಪಾತ (೧೦೦೦ ಪ್ರತಿ ಪುರುಷರಿಗೆ ಮಹಿಳೆಯರ ಸಂಖ್ಯೆ)	933	964	1022	1032
೮	ಸಾಕ್ಷರತೆ ಪ್ರಮಾಣ ಒಟ್ಟು ಶೇಕಡಾ	566714995 65.38	30774988 67.04	1391738 79.7	234371 77.5
	ಗಂಡಸರು ಒಟ್ಟು ಶೇಕಡಾ	33996904 75.85	17817382 76.29	593890 87	135431 85

	ಹೆಂಗಸರು ಒಟ್ಟು ಶೇಕಡಾ	22677459 47 54.15	12957306 57.45	654776 72.7	98940 71
೬	ತಾಲೂಕುಗಳ ಸಂಖ್ಯೆ	3298	176	5	-

೪. ೩.ಜನ ಸಾಂದ್ರತೆ ಮತ್ತು ಲಿಂಗಾನುಪಾತ

ದ. ಕ ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಬೆಳ್ತಂಗಡಿ ತಾಲೂಕಿನ ಪಾಲು 20.14 ರಷ್ಟಿದೆ. ವಿಸ್ತೀರ್ಣದಲ್ಲಿ ಜಿಲ್ಲೆಯಲ್ಲೆ ಅತ್ಯಂತ ದೊಡ್ಡ ತಾಲೂಕಾಗಿದೆ ಮತ್ತು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ 14.16ರಷ್ಟು ಬೆಳ್ತಂಗಡಿಯದ್ದಾಗಿದೆ. ತಾಲೂಕಿನ ಜನಸಾಂದ್ರತೆ ಪ್ರತಿ ಚದರ ಕಿ. ಮಿಗೆ 179 ರಷ್ಟಿದೆ.

ದ. ಕ ಜಿಲ್ಲೆಯ ಲಿಂಗಾನುಪಾತವು ಪ್ರತಿ 1000 ಗಂಡಸರಿಗೆ 1022 ಆಗಿರುತ್ತದೆ. ಬೆಳ್ತಂಗಡಿ ತಾಲೂಕಿನಲ್ಲಿ ಇದು 1000:1032 ಇದೆ. ಲಿಂಗಾನುಪಾತದ ಪ್ರಕಾರ ಇಡೀ ಜಿಲ್ಲೆಯಲ್ಲಿಯೇ ಅತ್ಯಧಿಕ ಮಹಿಳೆಯರಿರುವುದು ಬೆಳ್ತಂಗಡಿ ತಾಲೂಕಿನಲ್ಲಿ ಎಂಬುದು ನಿಜವಾಗಿಯೂ ಶ್ಲಾಘನೆಗೆ ಒಳಪಡುತ್ತದೆ.[1]

೪. ೪. ೨. ವಿತರಣೆ ಮತ್ತು ಸಾಕ್ಷರತೆ:-

ಬೆಳ್ತಂಗಡಿ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಶೇ. 88ರಷ್ಟು ಗ್ರಾಮವಾಸಿಗಳಾದರೆ ಕೇವಲ 12 ರಷ್ಟು ಮಾತ್ರ ನಗರವಾಸಿಗಳಾಗಿದ್ದಾರೆ.

ಬೆಳ್ತಂಗಡಿ ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ (4.36) ಮತ್ತು ಪರಿಶಿಷ್ಟ ಪಂಗಡಗಳ (5.14) ಒಟ್ಟು ಪ್ರಮಾಣ ಶೇ. 9.46ರಷ್ಟು. ಇದು ಇಡೀ ಜಿಲ್ಲೆಯ ಪ್ರಮಾಣಕ್ಕಿಂತ (10.00%) ಕಡಿಮೆಯಾಗಿರುತ್ತದೆ. ತಾಲೂಕಿನ ಸಾಕ್ಷರತೆಯ ಪ್ರಮಾಣ ಶೇ 73.6ರಷ್ಟಿದ್ದು ಇದು ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ 79.7ಕ್ಕಿಂತ ಕಡಿಮೆ ಇದೆ. ಸಾಮಾನ್ಯವಾಗಿ ಎಲ್ಲಾ ಕಡೆ ಕಂಡು ಬರುವಂತೆ ಬೆಳ್ತಂಗಡಿ ತಾಲೂಕಿನಯೂ ಮಹಿಳಾ ಸಾಕ್ಷರತಾ ಪ್ರಮಾಣವು (ಶೆ 77.4) ಪುರುಷ ಸಾಕ್ಷರತಾ ಪ್ರಮಾಣಕ್ಕಿಂತ (ಶೆ 81.8) ಎಷ್ಟೋ ಕಡಿಮೆ ಇದೆ. ಇಡೀ ಜಿಲ್ಲೆಯಲ್ಲಿಯೇ ಪುರುಷರಿಗಿಂತ ಮಹಿಳೆಯರ ಒಟ್ಟು ಸಂಖ್ಯೆ ಹೆಚ್ಚಿದ್ದರೂ ಮಹಿಳಾ ಸಾಕ್ಷಾರತಾ ಪ್ರಮಾಣ ಕಡಿಮೆ ಇರುವುದು ಆತಂಕಕಾರಿ ವಿಷಯವಾಗಿದೆ. ಒಂದು ಮನೆ ಸುಖ, ಸಂತೋಷ, ನೆಮ್ಮದಿಯಿಂದ ಇರಬೇಕಾದರೆ ಆ ಮನೆಯ ಮಹಿಳೆ

ಸುಶಿಕ್ಷಿತಳಾಗಿರಬೇಕೆಂಬುದು ಹಿರಿಯರು ಹೇಳುವ ಮಾತು. ಆದ್ದರಿಂದ ಬೆಳ್ತಂಗಡಿ ತಾಲೂಕಿನ ಸ್ತ್ರೀ ಶಕ್ತಿ ಯೋಜನೆಗಳು ಮಹಿಳಾ ಸಾಕ್ಷಾರತೆಯ ಬಗ್ಗೆ ಕೆಲಸ ಮಾಡಲು ವಿಪುಲಾವಕಾಶಗಳಿವೆಯೆನ್ನುವುದನ್ನು ಈ ಅಂಕಿ ಅಂಶಗಳು ತಿಳಿಯಪಡಿಸುತ್ತವೆ.

೪. ೫.ಬೆಳ್ತಂಗಡಿಯ ಭೂಮಿಯ ಬಳಕೆ


ಬೆಳ್ತಂಗಡಿ ತಾಲೂಕಿನ ಒಟ್ಟು ವಿಸ್ತೀರ್ಣ 137510 ಹೆಕ್ಟೇರುಗಳು. ದ. ಕ ಜಿಲ್ಲೆಯ ಒಟ್ಟು ವಿಸ್ತೀಣದಲ್ಲಿ (477149ಹೆಕ್ಟೇರು) ಬೆಳ್ತಂಗಡಿಯದ್ದು ಸಿಂಹಪಾಲು ಅಂದರೆ 28.81 ಶೇಕಡ. ತಾಲೂಕಿನ ಭೂಮಿಯ ಬಳಕೆ ಚಿತ್ರಣವನ್ನು ಕೋಷ್ಟಕ 4. 2. ರಲ್ಲಿ ತೋರಿಸುತ್ತದೆ.

ಕೋಷ್ಟಕ ೪. ೨. ಬೆಳ್ತಂಗಡಿಯ ಭೂಮಿಯ ಬಳಕೆ.

ವಿವರಗಳು	ಬಳಕೆಯಭೂಮಿ(ಹೆಕ್ಟೇರುಗಳಲ್ಲಿ)	ಕೋನ	ಶೇಕಡಾ
ಬೀಳುಭೂಮಿ	1262	3.30	09.17
ಅರಣ್ಯಭೂಮಿ	49837	130.47	36.24
ವ್ಯವಸಾಯೇತರ ಭೂಮಿ	23485	61.48	17.07
ಬಂಜರು ಭೂಮಿ	6198	16.22	04.07
ಸಾಗುವಳಿಯಾಗದಿರುವ ಭೂಮಿ	18180	47.59	13.22
ವ್ಯವಸಾಯ ಭೂಮಿ	38548	100.91	28.03
ಒಟ್ಟು	137510	360^0	100

ಆಧಾರ:– ದ. ಕ ಜಿಲ್ಲಾ ಅಂಕಿ – ಅಂಶಗಳ ನೋಟ ೨೦೦೬.

ಬೆಳ್ತಂಗಡಿಯ ಭೂಮಿಯ ಬಳಕೆಯನ್ನು ಚಿತ್ರ . ೪.೧ ಸ್ಪಷ್ಟವಾಗಿ ತಿಳಿಸುತ್ತದೆ.



ಬೆಳ್ತಂಗಡಿಯ ಭೂಮಿಯ ಬಳಕೆಯ ಪಕ್ಷಿನೋಟದಿಂದ ಕೆಲವು ಪ್ರಮುಖ ತೀರ್ಮಾನಗಳಿಗೆ ಬರಬಹುದು. ಬೆಳ್ತಂಗಡಿ ತಾಲೂಕಿನ ಒಟ್ಟು ಭೂ ಪ್ರದೇಶದಲ್ಲಿ ಶೇ 4.07ರಷ್ಟು ಬಂಜರು ಮತ್ತು ಶೇ 9.17 ರಷ್ಟು ಬೀಳು ಭೂಮಿಯೆಂದು ಸರಕಾರದ ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಈ ಬಂಜರು ಭೂಮಿಯನ್ನು ಮತ್ತು ಬೀಳುಭೂಮಿಯನ್ನು ಸಮರ್ಪಕವಾಗಿ ಬಳಸಲು ಮಾರ್ಗೋಪಾಯಗಳನ್ನು ಕಂಡುಹಿಡಿದು ಅದನ್ನು ಭೂ ರಹಿತ ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ವಿತರಿಸಬಹುದು. ಆದರೆ ಸರಕಾರಗಳಿಗೆ ಜನಪರ ಕಾಳಜಿ ಇಲ್ಲದಿರುವುದರಿಂದ ಇದೊಂದು ದೊಡ್ಡ ಸವಾಲಿನ ವಿಷಯವಾಗಿದೆ.

ಬೆಳ್ತಂಗಡಿ ತಾಲೂಕಿನ ಒಟ್ಟು ಭೂ ಪ್ರದೇಶದಲ್ಲಿ ಅರಣ್ಯ ಭೂಮಿಯ ಪಾಲು ಶೇ 36.24ರಷ್ಟಿದೆ. ಯಾವುದೇ ಭೂಪ್ರದೇಶದ ಮೂರನೇ ಒಂದರಷ್ಟು ಭೂಮಿ ಅರಣ್ಯಮಯವಾಗಿದ್ದರೆ ಆ ಪರಿಸರ ಸಂರಕ್ಷಣೆಯಾಗುತ್ತದೆಂಬುದು ಪರಿಸರ ವಿಜ್ಞಾನಿಗಳು ಸಂಶೋಧನೆಯ ಮೂಲಕ ಕಂಡುಕೊಂಡ ಸತ್ಯ.[2] ಬೆಳ್ತಂಗಡಿ ತಾಲೂಕಿನಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಅರಣ್ಯ ಪ್ರದೇಶವಿದ್ದು ಪರಿಸರ ಸಮತೋಲನದಲ್ಲಿ ಮಹತ್ತರವಾದ ಪಾತ್ರ ನಿರ್ವಹಿಸುತ್ತಿದೆ.

ಬೆಳ್ತಂಗಡಿ ತಾಲೂಕಿನ ಕೃಷಿ ಭೂಮಿಯ ಪ್ರಮಾಣ ತೀರಾ ಕಡಿಮೆಯಿದ್ದು (28.03%) ಇದನ್ನೂ ಹೆಚ್ಚಿಸಬೇಕಾದ ಅನಿವಾರ್ಯತೆ ಇದೆ. ಸಾಗುವಳಿಯಾಗದಿರುವ ಭೂಮಿಯ ಪ್ರಮಾಣ ಶೇ 13.22ರಷ್ಟು. ಇದರಲ್ಲಿ 46.69 ಹೆಕ್ಟೇರು ಭೂಮಿಯನ್ನು ಕೃಷಿಗೆ ಬಳಸಬಹುದೆಂದು ಸರಕಾರದ ವರದಿ ತಿಳಿಸುತ್ತದೆ. ಇದು ಒಟ್ಟು ಭೂಮಿಯ ಶೇ 3.39ರಷ್ಟಿದೆ, ಎನ್ನುವುದನ್ನು ಗಮನಾರ್ಹವಾದ ಅಂಶವಾಗಿದೆ. ಸಾಗುವಳಿಗೆ ಅರ್ಹವಾದರೂ ಸಾಗುವಳಿಯಾಗದಿರುವ ಭೂಮಿಯನ್ನು ಬಡತನದ ರೇಖೆಯ ಕೆಳಗಿರುವ ಸ್ವ ಸಹಾಯ ಸಂಘಗಳ ಸದಸ್ಯರಿಗೆ ಹಂಚಲು ಸಾಧ್ಯವಾದರೆ ಅದು ಬಡತನ ಮತ್ತು ನಿರುದ್ಯೋಗ ನಿವಾರಣೆಯಲ್ಲೊಂದು ಮೈಲಿಗಲ್ಲಾಗುತ್ತದೆ.

ಬೆಳ್ತಂಗಡಿ ತಾಲೂಕಿನ ಭೂ ಬಳಕೆಯ ವಿಧಾನವನ್ನು ಬದಲಾಯಿಸುವ ಅಗತ್ಯವಿದೆ. ಸರಕಾರವು ಸರಕಾರೇತರ ಸಂಸ್ಥೆಗಳ ಮತ್ತು ಸ್ವ ಸಹಾಯ ಸಂಘಗಳ ನೆರವನ್ನು ಪಡೆದುಕೊಂಡು ಭೂ ಬಳಕೆಯ ವಿಧಾನವನ್ನು ಬದಲಾಯಿಸಿ ಇದನ್ನೊಂದು ಸಮೃದ್ಧ ತಾಲೂಕನ್ನಾಗಿ ಪರಿವರ್ತಿಸಬೇಕಾಗಿದೆ.

೪. ೨. ೪. ವೃತ್ತಿಯ ವಿತರಣೆ:-


ಬೆಳ್ತಂಗಡಿ ತಾಲೂಕಿನ ಒಟ್ಟು ಜನಸಂಖ್ಯೆ 2001ರ ಜನಗಣತಿಯ ಪ್ರಕಾರ 246494 ಮತ್ತು ಜಿಲ್ಲೆಯ ಒಟ್ಟು ಜನಸಂಖ್ಯೆ (1897730) ಯಲ್ಲಿ ಬೆಳ್ತಂಗಡಿಯ ಜನರ ಪ್ರಮಾಣ ಶೇ 12.98ರಷ್ಟಿದೆ. ತಾಲೂಕಿನ ವೃತ್ತಿಯ ವಿತರಣೆಯ ಚಿತ್ರಣವನ್ನು ಕೋಷ್ಟಕ 4. 3 ತೋರಿಸುತ್ತದೆ.


ಕೋಷ್ಟಕ ೪. ೩ ಬೆಳ್ತಂಗಡಿಯ ವೃತ್ತಿಯ ವಿತರಣೆಯ

ವೃತ್ತಿಗಳು	ಗಂಡು	ಹೆಣ್ಣು	ಒಟ್ಟು	ಶೇಕಡಾ	ಕೋನ
ಕೃಷಿ ಸಾಗುವಳಿ	10472	3448	13920	10.88	39^0
ಕೃಷಿ ಕಾರ್ಮಿಕರು	8489	3526	12015	9.39	33^0
ಗೃಹ ಕೈಗಾರಿಕೆ	2583	39399	41982	32.81	118^0
ಇತರ	49177	10845	60022	46.91	168^0
ಒಟ್ಟು	70721	57218	127939	100	360^0
ಮುಖ್ಯ ಕೆಲಸಗಾರರು			110594	44.86	161^0
ಅರೆಕೆಲಸಗಾರರು			17345	7.03	25^0
ಕೆಲಸಗಾರರಲ್ಲದವರು			118555	48.09	173^0
ಒಟ್ಟು ಜನಸಂಖ್ಯೆ			246494	100	360^0

ಆಧಾರ:- ದ. ಕ ಜಿಲ್ಲಾ ಅಂಕಿ ಅಂಶಗಳು 2006.

ಬೆಳ್ತಂಗಡಿಯ ವೃತ್ತಿಯ ವಿತರಣೆಯನ್ನು ಚಿತ್ರ 4. 2 ಮತ್ತು 4. 3 ತಿಳಿಯಪಡಿಸುತ್ತದೆ.





೨) ಡಾ। ಶಿಶಿಲ...... ಆರ್ಥಿಕ ಭಾರತ 2006. ಪುಟ 35

ಅಧ್ಯಾಯ – ೫

ಕಿರುಹಣಕಾಸಿನ ಹಿನ್ನೆಲೆ, ಕಾರ್ಯ ವಿಶ್ಲೇಷಣೆ ಮತ್ತು ಕ್ಷೇತ್ರಾಧ್ಯಯನ

೫.೧ಸಮೀಕ್ಷಾ ಪ್ರದೇಶದಲ್ಲಿ ಕಾರ್ಯಾನ್ಮುಖವಾಗಿರುವ SKDRDP ಯ ಹಿನ್ನೆಲೆ.

೫.೨ SKDRDP ಯ ವಿವಿಧ ಕಾರ್ಯಕ್ರಮಗಳು

೫.೩ ಸಂದರ್ಶಿಸಿದ ಕ್ಷೇತ್ರ ಮತ್ತು ತಂಡಗಳ ವಿವರ

೫.೩.೧ ಜಾತಿವಾರು ವಿಂಗಡಣೆ

೫.೩.೨ ಸದಸ್ಯರ ವಯೋಮಾನ

೫.೩.೩ ಸದಸ್ಯರ ಶಿಕ್ಷಣ ಮಟ್ಟ

೫.೩.೪ ಸದಸ್ಯರ ಭೂ ಸಂಪನ್ಮೂಲದ ವಿವರ

೫.೩.೫ ಮೂಲಭೂತ ಸೌಕರ್ಯಗಳು

೫. ೪ ಗುಂಪುಗಳಿಗೆ ಸೇರಲುಕಾರಣ ಮತ್ತು ಕಾರಣರಾದವರು

೫. ೫ ತಂಡದಲ್ಲಿ ಜವಾಬ್ದಾರಿ ಹಂಚಿಕೆ

೫. ೬ ಸ್ವ ಸಹಾಯ ಸಂಘದಲ್ಲಿ ಇಟ್ಟುಕೊಳ್ಳಬೇಕಾದ ದಾಖಲಾತಿ ಪುಸ್ತಕಗಳು

೫. ೭. ಕಿರು ಹಣಕಾಸಿನ ಮೂಲಕ ಆದಾಯ ತರುವ ಚಟುವಟಿಕೆಗಳು

೫. ೮. ಕಿರು ಆರ್ಥಿಕ ಯೋಜನೆಯಲ್ಲಿ ಉಳಿತಾಯ ಸಾಲ ಮತ್ತು ಮರುಪಾವತಿ

೫. ೯. ಪ್ರಸ್ತುತ ಸಂಶೋಧನೆಯ ಕಾಣಿಕೆಗಳು

೫.೧ ಕಿರು ಹಣಕಾಸಿನ ಹಿನ್ನೆಲೆ :-

ಭಾರತದಲ್ಲಿ ಕಳೆದ ಮೂವತ್ತೈದು ವರ್ಷಗಳಿಂದೀಚೆಗೆ ಬ್ಯಾಂಕೋದ್ಯಮ ಜಾಲವು ಗಮನಾರ್ಹವಾಗಿ ಮತ್ತು ಶೀಘ್ರಗತಿಯಲ್ಲಿ ವಿಸ್ತರಿಸಿದ್ದರೂ ಸಹ ಬಡಜನರು ಸಾಲಕ್ಕಾಗಿ ಹಣದ ಲೇವಾದೇವಿಗಾರರು, ಸಾಹುಕಾರರು, ಹಣದ ದಲ್ಲಾಳಿಗಳು, ವರ್ತಕರು ಮೊದಲಾದವರನ್ನೊಳಗೊಂಡ ಸಾಂಸ್ಥಿಕೇತರ ಮೂಲಗಳನ್ನು ಹೆಚ್ಚಾಗಿ ಅವಲಂಬಿಸಬೇಕಾದ ದುಸ್ಥಿತಿ ಇತ್ತು. ಇದರಿಂದಾಗಿ ಬಡವರ್ಗಗಳ ಜನರು, ಅದರಲ್ಲಿಯೂ ಗ್ರಾಮೀಣ ಬಡವರ್ಗದ ಜನರು, ಸುಲಭ ಸಾಲ ಸೌಲಭ್ಯಗಳಿಂದ ವಂಚಿತರಾಗಬೇಕಾದ ಸ್ಥಿತಿ ಮುಂದುವರೆದಿತ್ತು. 1989 ರ ಅಖಿಲ ಭಾರತೀಯ ಸಾಲ ಮತ್ತು ಹೂಡಿಕೆ ಸಮೀಕ್ಷೆಯ ಪ್ರಕಾರ ಗ್ರಾಮೀಣ ಕುಟುಂಬಗಳು ತಮ್ಮ ಒಟ್ಟು ಸಾಲದ ಕೋರಿಕೆಗಳಲ್ಲಿ ಶೇಕಡ 38 ರಷ್ಟಕ್ಕೆ ಸಾಂಸ್ಥಿಕೇತರ ಮೂಲಗಳನ್ನೇ ಅವಲಂಬಿಸಿದ್ದವು. ಬ್ಯಾಂಕುಗಳು ಬಡವರ್ಗಗಳ ಜನರಿಗೆ ಹಣಕಾಸಿನ ನೆರವನ್ನು ನೀಡಲು ಬಯಸಿದರು ಸಹ ಅತ್ಯಲ್ಪ ಮೊತ್ತದ ಸಾಲವನ್ನು ಈ ವರ್ಗದ ಅಸಂಖ್ಯಾತ ಜನರಿಗೆ ಸಾಲ ಸೌಲಭ್ಯಗಳನ್ನು ಒದಗಿಸುವಿಕೆಯು ದುಬಾರಿಯಾದ ವ್ಯವಹಾರ ವೆಚ್ಚವನ್ನು ಒಳಗೊಳ್ಳುತ್ತಿತ್ತು. ಅಷ್ಟೇ ಅಲ್ಲದೆ ಈ ವರ್ಗಗಳ ಜನರ ಉಳಿತಾಯಗಳನ್ನು ಠೇವಣಿಗಳ ರೂಪದಲ್ಲಿ ಇಟ್ಟುಕೊಳ್ಳಬೇಕಾದರು ಬ್ಯಾಂಕುಗಳಿಗೆ ಹೆಚ್ಚಿನ ವೆಚ್ಚ ತಗಲುತ್ತಿತ್ತು. ಮೂಲೆಗುಂಪಾದ ಮತ್ತು ಗುಡ್ಡ ಗಾಡಿನ ಹಳ್ಳಿಗಳಲ್ಲಿ ಚೆದುರಿಹೋಗಿರುವ ಅಸಂಖ್ಯಾತ ಜನರಿಂದ ಅವರಲ್ಲಿರುವ ಅಲ್ಪ ಮೊಬಲಗಿನ ಉಳಿತಾಯಗಳನ್ನು ಸಕಾಲದಲ್ಲಿ ಸಂಗ್ರಹಿಸುವುದು ದುಸ್ಸಾಧ್ಯದ ಕಾರ್ಯವೂ ಆಗಿತ್ತು. ಬ್ಯಾಂಕುಗಳು ಸಿರಿವಂತರಾದ ಮತ್ತು ಮೇಲ್ವರ್ಗದ ಜನರಿಗಾಗಿ ಮಾತ್ರ ಅಸ್ತಿತ್ವದಲ್ಲಿರುವ ಸಂಸ್ಥೆಗಳು ಎಂದು ಬಡವರ್ಗಗಳ ಜನರು ಭಾವಿಸತೊಡಗಿದ್ದರು. ಬ್ಯಾಂಕುಗಳಿಗೆ ಮತ್ತು ತಮಗೆ ಇದ್ದ ಪರಸ್ಪರ ಅನುಕೂಲತೆ ಮತ್ತು ಅಸೌಕರ್ಯವನ್ನು ಗಮನಿಸಿದ ಬಡವರ್ಗಗಳ ಜನರು ಬ್ಯಾಂಕಿನ ಸೇವೆಗಳಿಗೆ ತಮಗೆ ಪ್ರವೇಶವೇ ಇರಲಾರದು ಎಂಬ ನಿರ್ಧಾರಕ್ಕೆ ಬರತೊಡಗಿದ್ದರು.

ಇಂತಹ ಸಂದರ್ಭದಲ್ಲಿ ಅಂದರೆ 1970 ದಶಕದ ಕೊನೆಯ ಭಾಗದಲ್ಲಿ ಭಾರತದ ಗುಜರಾತ್ ರಾಜ್ಯದಲ್ಲಿ ಹೂವು ಮತ್ತು ತರಕಾರಿಗಳನ್ನು ಮಾರುವ ಅತೀ ಸಣ್ಣ ವ್ಯಾಪಾರದಾರರು ತಮ್ಮ ಅನುಕೂಲಕ್ಕಾಗಿ ಸ್ವ ಸಹಾಯ ಗುಂಪುಗಳನ್ನು ರಚಿಸಿಕೊಳ್ಳತೊಡಗಿದರು.

ಆರ್ಥಿಕವಾಗಿ ತೀರಾ ದುರ್ಬಲರಾದ ಈ ಜನರು ತಮ್ಮ ಬದುಕಿಗಾಗಿ ಹೂವು ಮತ್ತು ತರಕಾರಿಗಳ ವ್ಯಾಪಾರವನ್ನು ಅವಲಂಬಿಸಿದ್ದರು. ಮಾರಾಟಕ್ಕಾಗಿ ಈ ವಸ್ತುಗಳನ್ನು ಅವರು ಬೆಳಗ್ಗೆ 90 ರೂಪಾಯಿಗಳನ್ನು ಸಾಲವಾಗಿ ಪಡೆದು ಅದೇ ದಿನ ಸಂಜೆಯ ವೇಳೆಗೆ 10 ರೂಪಾಯಿಗಳ ಬಡ್ಡಿಯನ್ನು ಸೇರಿಸಿ 100 ರೂಪಾಯಿಗಳನ್ನು ಮರು ಪಾವತಿಸ ಬೇಕಾದಂತಹ ದಾರುಣ ಪರಿಸ್ಥಿತಿ ಇತ್ತು. ಇಂತಹ

ದುಸ್ಥಿತಿಯಲ್ಲಿದ್ದ ಜನರ ಶೋಷಣೆಯನ್ನು ತಪ್ಪಿಸಲು ಸ್ವ ಸಹಾಯ ಗುಂಪುಗಳು ಅಪೂರ್ವ ವೇದಿಕೆಯಾಗಿ ಪರಿಣಮಿಸಿದವು.

1971 ರ ಭಾರತ ಪಾಕಿಸ್ತಾನದ ಯುದ್ದದ ಸಮಯದಲ್ಲಿ ಬಾಂಗ್ಲಾದೇಶದ ನಿರಾಶ್ರಿತರು ತಮ್ಮ ಆರ್ಥಿಕ ಉನ್ನತಿಗಾಗಿ ಸ್ವ ಸಹಾಯ ಗುಂಪುಗಳನ್ನು ರಚಿಸಿಕೊಳ್ಳತೊಡಗಿದರು. ಮನೆ ಮಠಗಳಿಲ್ಲದಂತಹ, ವಸತಿ ಹೀನತೆಯ ಸ್ಥಿತಿ, ಉದ್ಯೋಗ ಮತ್ತು ಆದಾಯವಿಲ್ಲದೆ ಬದುಕು ಮುಂದೆಕಾಣದಾದ ಮತ್ತೊಂದು ಸ್ಥಿತಿ ಇವೆರಡರಿಂದ ಕಂಗಾಲಾದ ಆ ಜನರು ತಮ್ಮ ಅಸ್ತಿತ್ವಕ್ಕಾಗಿ ಏನಾದರೊಂದು ದಾರಿಯನ್ನು ಹುಡುಕಲೇ ಬೇಕಾಯಿತು. ಆ ಸಮಯದಲ್ಲಿ ಅವರಿಗೆ ಆಸರೆಯಾಗಿ ದೊರೆತದ್ದು ಸ್ವ ಸಹಾಯದ ಕಲ್ಪನೆ. ಕೆಲವಾರು ನಿರಾಶ್ರಿತ ಜನರು ಒಗ್ಗಟ್ಟಾಗಿ ಕೆಲವು ಸಣ್ಣ ಪುಟ್ಟ ಕೆಲಸಗಳನ್ನು ಗಿಟ್ಟಿಸಿಕೊಳ್ಳುವುದು, ದೊರೆತ ಆದಾಯದಲ್ಲಿ ಒಂದೆರಡು ರೂಪಾಯಿಗಳನ್ನು ಉಳಿತಾಯ ಮಾಡಿ ಅದನ್ನು ಗುಂಪು ಸೇರಿ ಶೇಖರಿಸುವ ಮತ್ತು ಸಂಗ್ರಹವಾದ ಉಳಿತಾಯದ ಹಣವನ್ನು ತಮ್ಮ ತಮ್ಮೊಳಗೇ ಸಾಲ ನೀಡುವ ಕ್ರಮಗಳನ್ನು ವಿಕಾಸಗೊಳಿಸಿದರು. ಗುಂಪಿನಲ್ಲಿ ಉಳಿತಾಯವನ್ನು ಶೇಖರಿಸುವ ಪರಿಕಲ್ಪನೆಯು ಸದಸ್ಯರೆಲ್ಲರು ಆಗಿಂದಾಗ್ಗೆ ಸಭೆ ಸೇರುವ, ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವ ಮತ್ತು ವ್ಯವಹಾರದ ಲೆಕ್ಕಪತ್ರಗಳನ್ನಿಡುವ ಕ್ರಮವನ್ನು ಅನುಸರಿಸಲಾಯಿತು.

1980 ರ ದಶಕದ ಮಧ್ಯೆ ಭಾಗದಲ್ಲಿ ಕೆಲವು ಅಧ್ಯಯನಗಳನ್ನು ನಡೆಸಿತು. ಬಡ ಕುಟುಂಬಗಳ ಅತೀ ಪ್ರಮುಖ ಹಾಗೂ ತುರ್ತಾದ ಬ್ಯಾಂಕೋದ್ಯಮ ಅವಶ್ಯಕತೆಗಳು ಆದ್ಯತೆಯ ಕ್ರಮದಲ್ಲಿ ಈ ಕೆಳಗಿನಂತಿವೆ ಎಂಬ ಸರಳ ವಿಷಯವನ್ನು ಈ ಅಧ್ಯಯನಗಳು ಸ್ಪಷ್ಟಪಡಿಸಿದವು.

೧. ಆಗಿಂದಾಗ್ಗೆ ಲಭಿಸುವ ತಮ್ಮ ಸಣ್ಣ ಪ್ರಮಾಣದ ಹೆಚ್ಚುವರಿ ಹಣವನ್ನು ಉಳಿತಾಯದ ರೂಪದಲ್ಲಿ ಸುರಕ್ಷಿತವಾಗಿಡಲು ಅವಕಾಶಗಳು.

೨. ತುರ್ತು ಅಗತ್ಯತೆಗಳನ್ನು ಈಡೇರಿಸಿಕೊಳ್ಳಲು ಅನುಭೋಗಿ ಸಾಲಗಳಿಗೆ ಪ್ರವೇಶಾಧಿಕಾರ.

೩. ಅತೀ ಸಣ್ಣ ಉದ್ಯಮಗಳು ಸೇರಿದಂತೆ ಹಣಕಾಸಿನ ಸೇವೆಗಳಿಗೆ ಅಡೆ-ತಡೆ ರಹಿತವಾದ ಪ್ರವೇಶಾಧಿಕಾರ.

ಜನರ ಬೇಡಿಕೆಗಳು ಮೇಲಿನಂತಿದ್ದರೆ, ಪೂರೈಕೆಯ ಭಾಗವು ಮಿತಿಗಳಿಂದ ಬಳಲುತ್ತಿತ್ತು. ನಿಗದಿ ಪಡಿಸಲಾದ ಬಡ್ಡಿಯ ದರಗಳು, ಅಧಿಕ ದರದ ವ್ಯವಹಾರ ವೆಚ್ಚಗಳು ಮತ್ತು ಉಳಿತಾಯಗಳ ಕ್ರೋಢಿಕರಣಕ್ಕೆ ತಗಲುವ ಉನ್ನತ ಪ್ರಮಾಣದ ವೆಚ್ಚ ಮೊದಲಾದವುಗಳಿಂದಾಗಿ ಬಡವರ್ಗಗಳ ಜನರ ಸಾಲದ ಅವಶ್ಯಕತೆಗಳನ್ನು ಈಡೇರಿಸುವುದು ಮತ್ತು ಅವರಿಗೆ ಹಣಕಾಸಿನ ಸೇವೆಗಳನ್ನು ಒದಗಿಸುವುದು ಅಸಾಧ್ಯವಾಯಿತು.

ವಿಶೇಷ ಕಾರ್ಯಕ್ರಮಗಳ ಆಶ್ರಯದಲ್ಲಿ ಈ ವರ್ಗಗಳ ಜನರಿಗೆ ಸಾಲ ಸೌಲಭ್ಯಗಳನ್ನು ಒದಗಿಸಿರುವ ಸಂದರ್ಭಗಳಲ್ಲಿಯೂ ಸಹ ಹಣವನ್ನು ಉಳಿತಾಯ ಮಾಡಲು ಸಮರ್ಪಕ ವ್ಯವಸ್ಥೆಯ ಕೊರತೆ ಹಾಗೂ ಸಂಕಷ್ಟದ ಸಮಯದಲ್ಲಿ ಬಳಸಿಕೊಳ್ಳಲು ಹಣದ ಅಲಭ್ಯತೆಯ ಕಾರಣಗಳಿಂದಾದ ಮರು ಪಾವತಿಯ ಪ್ರವೃತ್ತಿಯು ದುರ್ಬಲಗೊಂಡಿತು. ಇದರಿಂದಾಗಿ ಬಡತನ ನಿವಾರಣೆಯ ಕಾರ್ಯಕ್ರಮಗಳು ನಿರೀಕ್ಷಿತ ಯಶಸ್ಸನ್ನು ನೀಡಲಿಲ್ಲ.

ಆದ್ದರಿಂದ ಬಡತನ ನಿವಾರಣೆಯ ದಿಸೆಯಲ್ಲಿ ಬ್ಯಾಂಕಿನ ಸೌಲಭ್ಯಗಳ ಯೋಜನೆಗಳಿಗೆ ಏನಾದರೊಂದು ಹೊಸತನ್ನು ವಿಕಾಸಗೊಳಿಸುವ ಸವಾಲು ಎದುರಾಯಿತು. ನಬಾರ್ಡ್ ಈ ದಿಸೆಯಲ್ಲಿ ಹೊಸ ಪರ್ವವೊಂದಕ್ಕೆ ನಾಂದಿ ಹಾಡಿತು. ತಾನು ನಡೆಸಿದ ಅಧ್ಯಯನಗಳಿಂದ ಮತ್ತು ತನ್ನ ಕ್ರಿಯಾ ಸಂಶೋಧನೆಗಳಿಂದ ಪ್ರಭಾವಗೊಂಡ ನಬಾರ್ಡ್ "ಸ್ವ ಸಹಾಯ ಗುಂಪು-ಬ್ಯಾಂಕ್ ಜೋಡಣೆಯ ಮಾರ್ಗವನ್ನು ಅಭಿವೃದ್ಧಿ ಪಡಿಸಿತು. ಭಾರತದಲ್ಲಿ ಬ್ಯಾಂಕುಗಳು ಬಡವರ್ಗಗಳ ಜನರಿಗೆ ಹೆಚ್ಚಿನ ರೀತಿಯಲ್ಲಿ ತಲುಪಲು ಈ ಮಾರ್ಗವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಲಾಯಿತು. ಮತ್ತು ಇದನ್ನೊಂದು ಕಾರ್ಯ ತಂತ್ರವನ್ನಾಗಿ ವಿಕಾಸಗೊಳಿಸಲಾಯಿತು. ಈ ಕಾರ್ಯತಂತ್ರವು ಬಡಜನರು ಸ್ವ ಸಹಾಯ ಗುಂಪುಗಳನ್ನು ರಚಿಸುವ ತಮ್ಮ ಉಳಿತಾಯಗಳನ್ನು ಒಂದೆಡೆ ಸಂಗ್ರಹಿಸುವಂತೆ ಅವರನ್ನು ಪ್ರೋತ್ಸಾಹಿಸುವ ಈ ಉಳಿತಾಯಗಳ ಹಣದಿಂದ ಅಲ್ಪ ಬಡ್ಡಿದರದ ಸಾಲಗಳನ್ನು ಸದಸ್ಯರಿಗೆ ನೀಡುವ ಮತ್ತು ಆ ಮೂಲಕ ಹಣಕಾಸಿನ ಶಿಸ್ತಿನ ಸೂಕ್ತ ವಿಷಯಗಳನ್ನು ಸದಸ್ಯರಿಗೆ ಕಲಿಸುವ ಪ್ರಕ್ರಿಯೆಯನ್ನು ಈ ಕಾರ್ಯತಂತ್ರವು ಒಳಗೊಂಡಿದ್ದಿತು.

ತರುವಾಯ ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕಿನ ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ಜೆಳಿಸಲಾಯಿತು. ಈ ರೀತಿಯ ವ್ಯವಸ್ಥೆಯಿಂದಾಗಿ ಸ್ವ ಸಹಾಯ ಗುಂಪುಗಳ ಸದಸ್ಯರಾದ ಬಡಜನರಿಗೆ ಸಾಲವು ಮಾತ್ರವಲ್ಲದೆ ಹಣಕಾಸಿನ ಸೇವೆಗಳನ್ನು ಒದಗಿಸುವಂತಹ ಸಮಗ್ರ ಏರ್ಪಾಡು ಅಸ್ತಿತ್ವಕ್ಕೆ ಬಂದಿತು.

ಕಿರು ಹಣಕಾಸಿನ ಅರ್ಥ

ಕಿರು ಹಣಕಾಸು ಎಂದರೆ ಸಣ್ಣ ಪ್ರಮಾಣದ ಅಥವಾ ಚಿಕ್ಕ ಮೊಬಲಗಿನ ಸಾಲವನ್ನು ಸ್ವ ಸಹಾಯ ಸಂಘಗಳ ಆರ್ಥಿಕ ಚಟುವಟಿಕೆಗಳಿಗೆ ನೀಡುವುದು ಎಂದರ್ಥ.

ಕಿರು ಹಣಕಾಸನ್ನು ಪೂರೈಕೆ ಮಾಡುವಾಗ ಸಾಲವನ್ನು ಪಡೆಯುವ ಪ್ರತಿಯೊಂದು ಘಟಕವನ್ನು ಒಂದು ಸೂಕ್ಷ್ಮ ಘಟಕವನ್ನಾಗಿ ಪರಿಗಣಿಸಲಾಗುತ್ತದೆ. ಅಂದರೆ ಇಡಿಯ ದೇಶದ ಅರ್ಥವ್ಯವಸ್ಥೆಯನ್ನು ಸಮಗ್ರವಾಗಿ ಪರಿಭಾವಿಸದೆ, ಪ್ರತಿಯೊಂದು ಸೂಕ್ಷ್ಮ ಘಟಕವೂ ದೇಶದ

ಅಭಿವೃದ್ಧಿಯಲ್ಲಿ ನಿರ್ಣಾಯಕವಾದ ಪಾತ್ರವನ್ನು ನಿರ್ವಹಿಸುತ್ತದೆ ಎಂದು ಪರಿಗಣಿಸಿ ಅದರ ಪರಿಪೂರ್ಣ ಅಭಿವೃದ್ಧಿಗೆ ಹಣಕಾಸನ್ನು ಪೂರೈಕೆ ಮಾಡುವುದು.

ಭಾರತದಲ್ಲಿ ಕಿರು ಹಣಕಾಸು ಯೋಜನೆ

ಭಾರತದಲ್ಲಿ ಇಂದು ಸ್ವ ಸಹಾಯ ಗುಂಪುಗಳಿಗೆ ಮತ್ತು ಚಿಕ್ಕ ಆರ್ಥಿಕ ಚಟುವಟಿಕೆಗಳಿಗೆ ಒದಗಿಸಲಾಗುತ್ತಿರುವ ಹಣಕಾಸಿನ ಸೌಲಭ್ಯವನ್ನು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಕಿರು ಹಣಕಾಸಿನ ಕಾರ್ಯಕ್ರಮ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ 1992 ರಲ್ಲಿ ನಬಾರ್ಡ್ ಆರಂಭಿಸಿದ ಸ್ವ ಸಹಾಯ ಗುಂಪು ಬ್ಯಾಂಕ್ ಜೋಡಣೆಯ ಕಾರ್ಯಕ್ರಮದ ಅಡಿಯಲ್ಲಿ ದೇಶದಾದ್ಯಂತ ಸುಮಾರು 8 ಲಕ್ಷ 81 ಸಾವಿರ ಸ್ವ ಸಹಾಯ ಗುಂಪುಗಳ 14 ದಶಲಕ್ಷ ಮಹಿಳೆಯರು ಸಾಲ ಸೌಲಭ್ಯಗಳನ್ನು ಪಡೆದಿದ್ದಾರೆ. ವಿವಿಧ ಬ್ಯಾಂಕುಗಳು ಒದಗಿಸಿರುವ ಹಣಕಾಸಿನಿಂದ ಈ ಗುಂಪುಗಳು ಡಿಸೆಂಬರ್ 2007ರ ವೇಳೆಗೆ 2,800 ಕೋಟಿ ರೂಪಾಯಿಗಳ ಆಸ್ತಿಗಳನ್ನು ಸೃಷ್ಟಿಸಿವೆ. 2010ನೇ ಇಸವಿಯ ವೇಳೆಗೆ ಈ ಗುಂಪುಗಳ ಸಂಖ್ಯೆ ಸುಮಾರು 24 ಲಕ್ಷಕ್ಕೆ ಮತ್ತು ಅವುಗಳಿಗೆ ಪೂರೈಕೆ ಮಾಡಲಾಗುವ ಸಾಲದ ಮೊತ್ತವು ಸುಮಾರು 25,000 ಕೋಟಿ ರೂಪಾಯಿಗಳಿಗೆ ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ.

ಕಿರುಹಣಕಾಸಿನ ಬೇಡಿಕೆ ಮತ್ತು ಪೂರೈಕೆ

ಕಿರು ಹಣಕಾಸಿನ ಪೂರೈಕೆಯು ಬೇಡಿಕೆಗಿಂತ ಬಹಳ ಕಡಿಮೆ ಇದೆ ಎಂದು ತಿಳಿದುಬಂದಿದೆ. ಭಾರತದಲ್ಲಿ ಬಡ ಕುಟುಂಬಗಳ ವಾರ್ಷಿಕ ಸರಾಸರಿ ಸಾಲ ಬಳಕೆಯು ಸುಮಾರು 9,000 ರೂಪಾಯಿಗಳಿವೆ ಎಂದು ಕಿರು ಹಣಕಾಸಿನ ಸಂಬಂಧವನ್ನಿಟ್ಟುಕೊಂಡಿರುವ ಬ್ಯಾಂಕೋದ್ಯಮ ಮೂಲಗಳು ಹೇಳುತ್ತವೆ. ಭಾರತದಲ್ಲಿ 50 ದಶಲಕ್ಷ ಬಡ ಕುಂಟುಂಬಗಳಿವೆ. ಈ ಮಾನದಂಡದಲ್ಲಿ ನೋಡಿದಾಗ ಕಿರು ಹಣಕಾಸಿನ ವಾರ್ಷಿಕ ಬೇಡಿಕೆ ಸುಮಾರು 45,000 ಕೋಟಿ ರೂಪಾಯಿಗಳಿವೆ. ಆದರೆ ಈಗ ಪೂರೈಕೆಯು ಅದರ ಬೇಡಿಕೆಯ ಶೇಕಡ 20 ರಷ್ಟು ಮಾತ್ರ ಇದೆ.

ನಬಾರ್ಡ್‌ನ ಬೆಂಬಲ

ಕಿರು ಹಣಕಾಸಿನ ಸ್ವ ಸಹಾಯ ಗುಂಪುಗಳ ಯೋಜನೆಯ ಅನುಷ್ಠಾನದಲ್ಲಿ ನಬಾರ್ಡ್ ನಿರ್ಲಕ್ಷ್ಯವನ್ನು ತೋರಿದರೆ ಈ ಯೋಜನೆ ನೆಲಕಚ್ಚಿತೆಂದೇ ಹೇಳಬೇಕಾಗುತ್ತದೆ. ಅಷ್ಟರ ಮಟ್ಟಿಗೆ ನಬಾರ್ಡ್‌ನ ಸಹಕಾರ, ಬೆಂಬಲ, ಪ್ರೋತ್ಸಾಹ, ತೊಡಗಿಸಿಕೊಳ್ಳುವಿಕೆ, ಮಾರ್ಗದರ್ಶನ ಮತ್ತು ನಿರ್ದೇಶನ ಈ ಯೋಜನೆಯಲ್ಲಿ ಅಂತರ್ಗತವಾಗಿದೆ. ನಬಾರ್ಡ್‌ನ ನಿರಂತರ ಮಾರ್ಗದರ್ಶನ ಮತ್ತು ಬೆಂಬಲದ ಕೆಲವು ಪ್ರಮುಖ ಅಂಶಗಳು ಕೆಳಗಿನಂತಿವೆ.

೧) ಕಿರು ಹಣಕಾಸಿನ ಸ್ವ ಸಹಾಯ ಗುಂಪುಗಳು ಯೋಜನೆಯು ಒಂದು ನವ ಪ್ರವರ್ತನೆಯಾಗಿರುವುದರಿಂದ ಅಂದರೆ ಹೊಸರೀತಿಯ ಯೋಜನೆಯಾಗಿರುವುದರಿಂದ ನಬಾರ್ಡ್ ಶೇಕಡ 100 ರಷ್ಟೂ ಪುನರ್ಧನ ಸೌಲಭ್ಯವನ್ನು ಒದಗಿಸುತ್ತಿದೆ. ಅಂದರೆ ಸ್ವ ಸಹಾಯ ಗುಂಪುಗಳಿಗೆ ಸಾಲವನ್ನು ಪೂರೈಕೆ ಮಾಡುವ ಬ್ಯಾಂಕುಗಳಿಗೆ ನೇರವಾಗಿ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅವು ನೀಡಿದ ಸಾಲದ ಪೂರ್ಣ ಮೊತ್ತವನ್ನು ಸಾಲದ ರೂಪದಲ್ಲಿ ಒದಗಿಸುತ್ತದೆ.

೨) ಬ್ಯಾಂಕಿನಿಂದ ಸ್ವ ಸಹಾಯ ಗುಂಪಿಗೆ ಸಾಲ ಜೋಡಣೆ ಮಾಡುವ ಯೋಜನೆಯ ಅನುಷ್ಠಾನವನ್ನು ಬಲಗೊಳಿಸುವ ಉದ್ದೇಶದಿಂದ ಬ್ಯಾಂಕುಗಳ ಅಧಿಕಾರಿಗಳಿಗೆ, ವ್ಯವಸ್ಥಾಪಕರಿಗೆ ಮತ್ತು ಕ್ಷೇತ್ರ ಸಿಬ್ಬಂದಿಗೆ ನಬಾರ್ಡ್ ತರಬೇತಿ ಕಾರ್ಯಕ್ರಮಗಳನ್ನು ಮತ್ತು ಜಾಗೃತಿ ಶಿಬಿರಗಳನ್ನು ಏರ್ಪಡಿಸುತ್ತಿದೆ.

೩) ಈ ಯೋಜನೆಯ ಯಶಸ್ವಿಯುತ ಅನುಷ್ಠಾನದ ದಿಸೆಯಲ್ಲಿ ನಬಾರ್ಡ್ ಸ್ವ ಸಹಾಯ ಗುಂಪುಗಳ ಸದಸ್ಯರನ್ನು ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಮತ್ತು ಬ್ಯಾಂಕಿನ ಸಿಬ್ಬಂದಿಯನ್ನು ಒಂದೆಡೆ ಸೇರಿಸಿ ಕಾರ್ಯಾಗಾರಗಳನ್ನು ಏರ್ಪಡಿಸುವ ಕೆಲಸವನ್ನು ಮಾಡುತ್ತಿದೆ.

೪) ವಾರ್ಷಿಕ ಕ್ರಿಯಾ ಯೋಜನೆಗಳ ತಯಾರಿಕೆ, ಗುಂಪುಗಳ ಮೌಲ್ಯೀಕರಣ, ಸಾಲ ಜೋಡಣೆ ಮೊದಲಾದ ವಿಷಯಗಳಲ್ಲಿ ನಬಾರ್ಡ್ ಸಂಬಂಧಪಟ್ಟ ಬ್ಯಾಂಕುಗಳಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಿದೆ.

೫) ಸ್ವ ಸಹಾಯ ಗುಂಪುಗಳಿಗೆ ಸಂಬಂಧಿಸಿದಂತೆ ಹೊಸ ರೀತಿಯ ಯೋಜನೆಗಳಿಗೆ ನವಪ್ರವರ್ತನೆಗಳಿಗೆ ಮತ್ತು ಆರಂಭ ಶೀಲತೆಗಳಿಗೆ ನಬಾರ್ಡ್ ಚುರುಕಾಗಿ ಸ್ಪಂದಿಸುತ್ತಿದೆ.

ಸಾಲವನ್ನು ನೀಡಲು ಅಗತ್ಯವಿರುವ ಮೊತ್ತವನ್ನು 2 ರೀತಿಯಲ್ಲಿ ಪಡೆಯಲಾಗುತ್ತದೆ.

೧. ಆಂತರಿಕ ಸಾಲ:- ಆಂತರಿಕ ಸಾಲ ಎಂದರೆ ಸ್ವ ಸಹಾಯ ಸಂಘದ ಗುಂಪಿನಲ್ಲಿ ಸದಸ್ಯರಾಗಿರುವ ಪ್ರತಿಯೊಬ್ಬ ಸದಸ್ಯನು ಪ್ರತೀವಾರ ಕನಿಷ್ಠ 10/- ರೂಪಾಯಿಯಂತೆ ಉಳಿತಾಯ ಮಾಡಿ ಗುಂಪಿನ ಮುಖಾಂತರ ಬ್ಯಾಂಕಿನಲ್ಲಿ ಜಮಾ ಮಾಡುತ್ತಾರೆ. ಗುಂಪಿನ ಪ್ರತಿಯೊಬ್ಬ ಸದಸ್ಯನು ಕಡ್ಡಾಯವಾಗಿ 6 ತಿಂಗಳ ಕಾಲ ಪ್ರತಿವಾರ 10 ರೂಪಾಯಿಯಂತೆ ಜಮಾ ಮಾಡಿದ ನಂತರ ತಂಡದ ಯಾವುದೇ ಒಬ್ಬ ವ್ಯಕ್ತಿಗೆ ಹಣದ ಅವಶ್ಯಕತೆ ಬಂದಾಗ ಅಗತ್ಯವಿರುವ ಮೊತ್ತವನ್ನು ಸದಸ್ಯರ ಗುಂಪಿನ ಉಳಿತಾಯದಿಂದಲೇ ಪಡೆದು ನೀಡಲಾಗುತ್ತಿದೆ. ಇದನ್ನು ಆಂತರಿಕ ಸಾಲ ಎನ್ನಲಾಗುತ್ತದೆ.

೨. ಬ್ಯಾಂಕ್ ಸಾಲ:- ಈಗಾಗಲೇ ಆಂತರಿಕ ವ್ಯವಹಾರ ಮಾಡಿದ್ದು ಸಂಘದ ಸದಸ್ಯರ ಪೈಕಿ ಕನಿಷ್ಟ 50/- ಸದಸ್ಯರು ಆಂತರಿಕ ಸಾಲ ವ್ಯವಹಾರದಲ್ಲಿ ಹಣ ಪಡೆಸುಕೊಂಡು ಅದನ್ನು ಸಮರ್ಪಕವಾಗಿ ಮರುಪಾವತಿಸುತ್ತಾ 6 ತಿಂಗಳು ಕಳೆದಿದ್ದರೆ ತಂಡದ ಸದಸ್ಯರ ಬ್ಯಾಂಕಿನ ಉಳಿತಾಯದ 10 ರಿಂದ 40 ಪಟ್ಟು ಸಾಲವನ್ನು ಬ್ಯಾಂಕು ವಿವಿಧ `ನಿಧಿ`ಗಳ ಹೆಸರಲ್ಲಿ ತಂಡದ ಸದಸ್ಯರಿಗೆ ಸಾಲ ನೀಡುತ್ತದೆ.

I. **ಸುತ್ತು ನಿಧಿ:-** ಈ ಕಾರ್ಯಕ್ರಮದಲ್ಲಿ ಗುಂಪು ಪಡೆಯಬಯಸುವ ಸುತ್ತು ಗುಂಪಿನ ಮರುಪಾವತಿ ಸಾಮರ್ಥ್ಯ ಮತ್ತು "ಗುಂಪಿನ ಉಳಿತಾಯ" ದ ಮೇಲೆ ಹೊಂದಿಕೊಂಡಿರುತ್ತದೆ. ಹೊಸದಾಗಿ ಪ್ರಾರಂಭಿಸಲ್ಪಟ್ಟ ಗುಂಪುಗಳು ಗುಂಪು ಪ್ರಾರಂಭಿಸಿದ ಮೂರು ತಿಂಗಳ ಸುತ್ತು ನಿಧಿ ಪಡೆಯಬಹುದಾಗಿದೆ. ಗುಂಪು ಪ್ರಾರಂಭವಾದ ನಂತರ ಇದುವರೆಗೂ ಆಂತರಿಕ ಮಾಡದ ಗುಂಪುಗಳಿಗೆ ಸುತ್ತು ನಿಧಿಯ ಉಳಿತಾಯದ ನಾಲ್ಕರಷ್ಟು ಅಥವಾ ಮರುಪಾವತಿ ಸಾಮರ್ಥ್ಯದಷ್ಟು ಇವುಗಳಲ್ಲಿ ಯಾವುದು ಕಮ್ಮಿಯೇ ಅಷ್ಟು ಸಾಲ ನೀಡಲಾಗುವುದು ಜೊತೆಗೆ ಆಂತಂರಿಕ ಸಾಲ ವ್ಯವಹಾರದಲ್ಲಿ ಹಣ ಪಡೆದು ಅದನ್ನು ಸಮರ್ಪಕವಾಗಿ 6 ತಿಂಗಳು ಕಳೆದಿದ್ದರೆ ಅಂತಹ ಗುಂಪುಗಳಿಗೆ ಗುಂಪಿನ ಮರುಪಾವತಿ ಸಾಮರ್ಥ್ಯ ಇದರಲ್ಲಿ ಯಾವುದು ಕಡಿಮೆಯೋ ಅಷ್ಟು ಗರಿಷ್ಟ ಸಾಲ ದೊರೆಯುತ್ತದೆ.

ಸುತ್ತ ನಿಧಿಯನ್ನು ಈ ಕೆಳಗಿನ ಉದ್ದೇಶಗಳಿಗೆ ನೀಡಲಾಗುತ್ತದೆ

ಸ್ವ ಸಹಾಯ ಸಂಘದಲ್ಲಿ, ಸದಸ್ಯರಾಗಿರುವವರು ಇತರೆಡೆಯಲ್ಲಿ ಅಧಿಕ ಬಡ್ಡಿಯ ಸಾಲ ಪಡೆದಿದ್ದರೆ ಅದರ ಮರುಪಾವತಿಗಾಗಿ ಮಕ್ಕಳ ವಿದ್ಯಾಭ್ಯಾಸ, ಮದುವೆ, ಚಿನ್ನ ಖರೀದಿ, ಗೃಹೋಪಯೋಗಿ ವಸ್ತುಗಳ ಖರೀದಿ, ಉದಾಹರಣೆಗೆ ಕಪಾಟು, ಫ್ರಿಡ್ಜ್, ಊಟದ ಮೇಜು ಇತ್ಯಾದಿ ವಾಹನ ಖರೀದಿಗೆ,

ಮನೋರಂಜನಾ ವಸ್ತುಗಳಾದ ಟಿ.ವಿ, ರೇಡಿಯೋ ಖರೀದಿಗೆ ದೂರವಾಗಿ ಅಳವಡಿಕೆಗೆ ಕುಟುಂಬ ಸಹಿತ ಪ್ರವಾಸ ಹೋಗುವುದಕ್ಕೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಾರಂಭಗಳ ಆಚರಣೆಗೆ ಆಸ್ಪತ್ರೆ ಚರ್ಚಿಗೆ ಹೀಗೆ ಹತ್ತು ಹಲವು ಕಾರಣಗಳಿಗೆ ಸುತ್ತ ನಿಧಿಯ ಸಾಲವನ್ನು ಪಡೆಯಬಹುದಾಗಿದೆ.

II. **ಉತ್ಪಾದಕ ನಿಧಿ:-** ಉತ್ಪಾದಕ ನಿಧಿಯನ್ನು ಗುಂಪಿನಲ್ಲಿ ಈಗಾಗಲೇ ಆಂತರಿಕ ವ್ಯವಹಾರ ಯಶಸ್ವಿಯಾಗಿ ನಡೆಸಿದ ಗುಂಪುಗಳಿಗೆ ಮಾತ್ರ ನೀಡಲಾಗುವುದು. ಉತ್ಪಾದಕ ನಿಧಿಗಳಿಗೆ ಕೇವಲ ಉಳಿತಾಯದ ಆಧಾರದಲ್ಲಿ ಗುಂಪು ಉಳಿತಾಯದ 20 ರಷ್ಟು ಗರಿಷ್ಠ ನಿಧಿಯಾಗಿ ಸಾಲ ಪಡೆಯಬಹುದು.

ಈ ಕೆಳಗಿನ ಉದ್ದೇಶಗಳಿಗೆ ಉತ್ಪಾದಕ ನಿಧಿಯನ್ನು ನೀಡಲಾಗುತ್ತದೆ.

ಕೃಷಿಯೇತರ ಚಟುವಟಿಕೆಗಳಾದ ಹೈನುಗಾರಿಕೆ, ಎರೆ-ಸಾವಯವ ಗೊಬ್ಬರ ತಯಾರಿಕೆ ಮತ್ತು ಮಾರಾಟ, ಕೋಳಿ ಸಾಕಣೆ, ರೇಷ್ಮೆ ಕೃಷಿ, ಜೇನು ಕೃಷಿ, ಪುಷ್ಪ ಕೃಷಿ ಮತ್ತಿತರ ಉದ್ಯಮಗಳನ್ನು ಪ್ರಾರಂಭಿಸಲು ಬೇಕಾದ ಸೊತ್ತುಗಳನ್ನು ಖರೀದಿಸಲು ಮತ್ತು ನಿರ್ಮಿಸಲು, ಕೃಷಿ ಸಂಬಂಧಿ ಚಟುವಟಿಕೆಗಳಾದ ಗೊಬ್ಬರ, ಬೀಜ ಖರೀದಿ, ತೋಟ ನಿರ್ವಹಣೆ, ಸುಧಾರಿತ ಕ್ರಮಗಳಿಗೆ ಆದಾಯ ವೃದ್ಧಿಸುವ ಚಟುವಟಿಕೆಗಳಾದ ವ್ಯಾಪಾರ, ಉದ್ದಿಮೆ, ಸೇವಾ ಘಟಕಗಳನ್ನು ಪ್ರಾರಂಭಿಸಲು ಅಗತ್ಯವಿರುವ ಸೊತ್ತುಗಳನ್ನು ನಿರ್ಮಿಸಲು ಮತ್ತು ಖರೀದಿಸಲು ಮತ್ತು ಸಮಾಜ ಹಿತಕ್ಕೆ ಧಕ್ಕೆ ಬಾರದ ಇನ್ನಾವುದೇ ವ್ಯವಹಾರ ಕೈಗೊಳ್ಳಲು ಗುಂಪಿನಿಂದ ಸದಸ್ಯರು ಉತ್ಪಾದಕ ನಿಧಿಯನ್ನು ಪಡೆಯಬಹುದಾಗಿದೆ.

III.**ಮೂಲಸೌಕರ್ಯ ನಿಧಿ**

ಮೂಲಸೌಕರ್ಯ ನಿಧಿಯನ್ನು ಗುಂಪಿನಲ್ಲಿ ಈಗಾಗಲೇ ಆಂತರಿಕ ವ್ಯವಹಾರ ಯಶಸ್ವಿಯಾಗಿ ನಡೆಸಿದ ಗುಂಪುಗಳಿಗೆ ಮಾತ್ರ ನೀಡಲಾಗುವುದು. ಮೂಲಸೌಕರ್ಯ ಉದ್ದೇಶಗಳಿಗೆ ಉಳಿತಾಯದ 30 ರಷ್ಟು ಅಥವಾ ಲಭ್ಯವಿರುವ ಮರುಪಾವತಿ ಸಾಮರ್ಥ್ಯದಿಂದ ಈಗಾಗಲೇ ಬಾಕಿ ಇರುವ ಸುತ್ತ ನಿಧಿಯನ್ನು ಕಳೆದರೆ ಇದರಲ್ಲಿ ಯಾವುದು ಕಡಿಮೆಯೋ ಅಷ್ಟೆ ಗರಿಷ್ಠ ನಿಧಿಯಾಗಿ ಪಡೆಯಬಹುದಾಗಿದೆ.

ಉದಾ:- ಒಂದು ತಂಡದ ಮರುಪಾವತಿ ಸಾಮರ್ಥ್ಯ 2 ಲಕ್ಷ ರೂಪಾಯಿ ಎಂದಿರಲಿ. ಇಲ್ಲಿ 20 ಜನ ಸದಸ್ಯರಿದ್ದು ಪ್ರತಿಯೊಬ್ಬನ ತಲಾ ಉಳಿತಾಯ 15,000 ರೂಪಾಯಿ ಆಗಿದ್ದರೆ ಒಟ್ಟು 3 ಲಕ್ಷ ಆಗುತ್ತದೆ. ಆದರೆ ಮರುಪಾವತಿ ಸಾಮರ್ಥ್ಯ ಗರಿಷ್ಠ ಗುಂಪಿಗೆ 2 ಲಕ್ಷ ಆಗಿರುವುದರಿಂದ ಕೇವಲ 2 ಲಕ್ಷ ಮಾತ್ರ ಸಾಲ

ಚಿಗಿನ್ನಪ್ಪ ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ. ಹಂಪಿ.

ಪಡೆಯುಬಹುದು ಮತ್ತು ಈ ಗುಂಪು ಈಗಾಗಲೇ ಸುತ್ತ ನಿಧಿಯಾಗಿ 50,000 ಪಡೆದಿದ್ದರೆ ಆ ಮೊತ್ತವನ್ನು 2 ಲಕ್ಷದಿಂದ ಕಳೆದು ಉಳಿದ ಮೊತ್ತವನ್ನು ಅಂದರೆ 1,5000 ಮಾತ್ರ ಮೂಲ ಸೌಕರ್ಯ ನಿಧಿಯಾಗಿ ಪಡೆಯಬಹುದಾಗಿದೆ.

ಮೂಲ ಸೌಕರ್ಯ ನಿಧಿಯನ್ನು ಈ ಉದ್ದೇಶಗಳಿಗೆ ಪಡೆಯಬಹುದಾಗಿದೆ.

ಕುಟುಂಬಗಳ ಮೂಲಭೂತ ಸೌಕರ್ಯಗಳನ್ನು ವೃದ್ಧಿಸಲು ಮೂಲಸೌಕರ್ಯನಿಧಿಯನ್ನು ನೀಡಲಾಗುತ್ತದೆ.

ಗೃಹ ನಿರ್ಮಾಣ ಮತ್ತು ದುರಸ್ತಿ:- ಶೌಚಾಲಯ ನಿರ್ಮಾಣ, ಬೇಲಿ ಹಾಕಲು, ನೆಲ ಸಮತಟ್ಟು ಮಾಡಲು, ತೋಟ, ಗದ್ದೆ, ಮೂಲಿಕಾವನ, ಹೂವಿನವನ ನಿರ್ಮಿಸಲು, ಬಾವಿ, ಕೆರೆ ನಿರ್ಮಿಸಲು, ನೀರಾವರಿ ಉಪಕರಣ, ಪೈಪು ಲೈನುಗಳ ಖರೀದಿ ಮತ್ತು ಅಳವಡಿಕೆಗೆ, ಕೃಷಿ ಯಂತ್ರೋಪಕರಣ ಖರೀದಿಸಲು ಮತ್ತು ಅಳವಡಿಸಲು, ವಿದ್ಯುತ್, ನಲ್ಲಿ ಅಳವಡಿಸಲು, ಗೋಬ್ಬರ್ ಗ್ಯಾಸ್ ಅಳವಡಿಸಲು, ಸೌರ ಘಟಕ ಅಳವಡಿಸಲು, ಉನ್ನತ ಶಿಕ್ಷಣ, ಕೃಷಿ ಭೂಮಿ ಖರೀದಿಸಲು, ಹಟ್ಟಿ ನಿರ್ಮಿಸಲು ಮತ್ತು ಮನೆಯ ಮೂಲಭೂತ ಸೌಲಭ್ಯವನ್ನು ವೃದ್ಧಿಸುವ ಇನ್ಯಾವುದೇ ವಸ್ತುವನ್ನು ಖರೀದಿಸಲು ಅಥವಾ ಅಳವಡಿಸಲು ಮೂಲ ಸೌಕರ್ಯ ನಿಧಿಯನ್ನು ಪಡೆಯ ಬಹುದಾಗಿದೆ.

048556

IV. ಗುಂಪು ವ್ಯವಹಾರ ನಿಧಿ:- ಗುಂಪು ವ್ಯವಹಾರ ನಿಧಿಯನ್ನು ಗುಂಪಿನಲ್ಲಿ ಈಗಾಗಲೇ ಆಂತರಿಕ ವ್ಯವಹಾರ ಯಶಸ್ವಿಯಾಗಿ ನಡೆಸಿದ ಗುಂಪುಗಳಿಗೆ ಮಾತ್ರ ನೀಡಲಾಗುವುದು. ಗುಂಪು ವ್ಯವಹಾರ ಕೈಗೊಳ್ಳಲು ಆರ್ಥಿಕವಾಗಿ ಲಾಭದಾಯಕವಾಗಿರುವ ಮತ್ತು ಈ ಆದಾಯದಿಂದ ನಿಧಿ ಮರುಪಾಪತಿ ಮಾಡಲು ಸಾಧ್ಯವಿರುವ ಯಾವುದೇ ವ್ಯವಹಾರಕ್ಕೆ ಉಳಿತಾಯದ 30 ರಷ್ಟನ್ನು ಗರಿಷ್ಠ ನಿಧಿಯಾಗಿ ಪಡೆಯಬಹುದು. ಈ ನಿಧಿಯ ನಿರ್ಧಾರಕ್ಕೆ ಗುಂಪಿನ ಉಳಿತಾಯವನ್ನು ಮಾತ್ರ ಪರಿಗಣಿಸಲಾಗುವುದು.

ಗುಂಪಿನ ಸರ್ವ ಸದಸ್ಯರು ಸೇರಿಕೊಂಡು ಪ್ರಾರಂಭಿಸಲಿರುವ ಯಾವುದೇ ಸಾಬೂನು, ಸೋಪ್‌ಪೌಡರ್, ಫೀನೈಲ್, ಕ್ಲೀನಿಂಗ್ ಪೌಡರ್, ಮೂಂಬತ್ತಿಗಳು, ಊದುಬತ್ತಿಗಳು, ಬೇಕರಿ ತಿಂಡಿಗಳು, ಸಿಹಿ ತಿನಿಸುಗಳು, ಉಪ್ಪಿನಕಾಯಿ, ಸಿದ್ದ ಉಡುಪುಗಳು, ರೆಕ್ಸಿನ್ ಘಟಕ ಹೀಗೆ ಯಾವುದೇ ಉದ್ಯಮ, ವ್ಯವಹಾರ ಕೈಗೊಳ್ಳಲು ಈ ಯೋಜನೆಯಿಂದ ನೀಡಲಾಗುವುದು.

V. ಸ್ವ ಗೃಹ ನಿಧಿ:- ತಂಡದ ಸದಸ್ಯರ ಕಡಿಮೆ ವೆಚ್ಚದ ಮನೆ ನಿರ್ಮಾಣಕ್ಕಾಗಿ, ಮನೆ ರಿಪೇರಿ ಅಥವಾ ಮನೆ ವಿಸ್ತರಣೆಗೆ ಈ ನಿಧಿಯ ಮೂಲಕ ಸಾಲ ನೀಡಲಾಗುವುದು. ಇಲ್ಲಿ ಸದಸ್ಯರೊಬ್ಬರಿಗೆ ಗರಿಷ್ಠ ರೂ ಒಂದು ಲಕ್ಷ ಅಥವಾ ವೈಯುಕ್ತಿಕ ಮರುಪಾವತಿ ಸಾಮರ್ಥ್ಯ ಯಾವುದು ಕಡಿಮೆಯೋ ಅಷ್ಟು ಸಾಲ ನೀಡಲಾಗುವುದು.

ತಂಡದ ಮರುಪಾವತಿ ಸಾಮರ್ಥ್ಯ ಲೆಕ್ಕಚಾರ

ಗುಂಪಿನ ಮರುಪಾವತಿ ಸಾಮರ್ಥ್ಯವನ್ನು ಗುಂಪಿನಲ್ಲಿರುವ ಎಲ್ಲಾ ಸದಸ್ಯರ ವಾರ್ಷಿಕ ವರಮಾನದ ಅನುಪಾತದಲ್ಲಿ ನಿರ್ಧಿರಿಸಲಾಗುವುದು. ಇಲ್ಲಿ 2 ಅಂಶಗಳನ್ನು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಲಾಗುವುದು.

೧. ಗುಂಪಿನಲ್ಲಿರುವ ಸದಸ್ಯರ ಸಂಖ್ಯೆ

೨. ಗುಂಪಿನಲ್ಲಿರುವ ಪ್ರತಿಯೊಬ್ಬ ಸದಸ್ಯ ಅಥವಾ ಸದಸ್ಯರ ವಾರ್ಷಿಕ ವರಮಾನ.

೩. ಗುಂಪಿನಲ್ಲಿರುವ ಪ್ರತಿಯೊಬ್ಬ ಸದಸ್ಯ ಅಥವಾ ಸದಸ್ಯರ ವಾರ್ಷಿಕ ವರಮಾನ.

ಮರುಪಾವತಿ ಸಾಮರ್ಥ್ಯವನ್ನು ಸಾಮಾನ್ಯವಾಗಿ ವರ್ಷಕ್ಕೊಮ್ಮೆ ಲೆಕ್ಕ ಹಾಕಲಾಗುವುದು. ಅನಿವಾರ್ಯ ಸಂದರ್ಭಗಳಲ್ಲಿ, ಮರು ಪಾವತಿ ಸಾಮರ್ಥ್ಯವನ್ನು ಮರು ಲೆಕ್ಕಾಚಾರ ಹಾಕಬೇಕಾಗಿ ಬಂದಲ್ಲಿ ಸಂಬಂಧಿಸಿದ ಕಾರ್ಯಕರ್ತರೇ ಅದನ್ನು ಮಾಡಬೇಕಾಗುತ್ತದೆ.

ಉದಾಹರಣೆ :- 1

1. ಗುಂಪಿನ ವಾರ್ಷಿಕ ವರಮಾನ(ಅ) - ರೂ:- 2,40,000/-

2. ಈಗಾಗಲೇ ಪಡೆದಿರುವ ವಿವಿಧ ಸಾಲಗಳಿವೆ,

   -ಮಾಡಬೇಕಾಗಿರುವ ವಾರ್ಷಿಕ ಮರುಪಾವತಿ (ಈ) ರೂ:- 40,000/-

3. ಗುಂಪಿನ ಉತ್ಪಾದನಾ ಸಾಮರ್ಥ್ಯ

   (ಅ-ಈ) = ಉ (ಉ) – ರೂ:-2, 00,000/-

4. ಗುಂಪಿನ ಆದಾಯ ಸಾಮರ್ಥ್ಯ (ಊ) – 2, 00,000*2.5=5, 00,000ರೂ

5. ಗುಂಪು ಪ್ರಾರಂಭವಾಗಿ ಸಂಘ

   ವರ್ಷಗಳು – 4

6 ಗುಂಪು ಮರುಪಾವತಿ ಸಾಮರ್ಥ್ಯ

-ಊ*1 – 5, 0000*1=5, 00,000

7. ಗುಂಪಿನ ಉಳಿತಾಯ – 10,000/-

8. ಗುಂಪಿನ ಸುತ್ತು ನಿಧಿ ಪಡೆಯುವ

- ಸಾಮರ್ಥ್ಯ – 10,000*10=1, 00,000

9. ಗುಂಪಿನ ಮೂಲ ಸೌಕರ್ಯ ನಿಧಿ

- ಅರ್ಹತೆ – 10,000*20=2, 00,000

10. ಗುಂಪಿನ ಒಟ್ಟು ನಿಧಿ ಸಾಮರ್ಥ್ಯ – 10,000*40 = 4, 00,000

ಉದಾಹರಣೆ: – 2

1. ಗುಂಪಿನ ಉತ್ಪಾದನಾ ಸಾಮರ್ಥ್ಯ (ಉ) – 1,00,000
2. ಆದಾಯ ಸಾಮರ್ಥ್ಯ (ಊ) – 1,00,000*2.5=2.50,000
3. ಗುಂಪು ಪ್ರಾರಂಭವಾಗಿ 2 ವರ್ಷಲಳಾಗಿದ್ದರೆ,

   ಗುಂಪಿನ ಮರುಪಾವತಿ ಸಾಮರ್ಥ್ಯ – 2, 50,000*0.5=1, 25,000
4. ಗುಂಪು ಮಾಡಿರುವ ಉಳಿತಾಯ – 20,000/-
5. ಗುಂಪಿಗೆ ಅರ್ಹವಿರುವ ಸುತ್ತುನಿಧಿ – 1,25,000/-
6. ಗುಂಪಿಗೆ ಅರ್ಹವಿರುವ ಉತ್ಪಾದಕನಿಧಿ – 3,75,000/-
7. ಗುಂಪಿಗೆ ಅರ್ಹವಿರುವ ಗುಂಪು ವ್ಯವಹಾರ ನಿಧಿ – 3,75,000/-
8. ಗುಂಪಿಗೆ ಅರ್ಹವಿರುವ ಮೂಲ ಸೌಕರ್ಯ ನಿಧಿ – 1,25,000/-
9. ಗುಂಪಿನ ಒಟ್ಟು ಸಾಲದ ಅರ್ಹತೆ (ಗರಿಷ್ಠ) – 5,00,000/-

ವೈಯುಕ್ತಿಕವಾಗಿ ಸದಸ್ಯರಿಗೆ ಸಿಗುವ ಗರಿಷ್ಠ ನಿಧಿ

ಸುತ್ತು ನಿಧಿ: – ರೂ 25, 000 ಅಥವಾ ಆ ವ್ಯಕ್ತಿಯ ಮರುಪಾವತಿ ಸಾಮರ್ಥ್ಯ ಅಥವಾ ಆ ವ್ಯಕ್ತಿ ಉಳಿತಾಯ ಮಾಡಿದ 10 ಪಾಲು

ಉತ್ಪಾದಕ ನಿಧಿ: – ವ್ಯಕ್ತಿಯ ಉಳಿತಾಯದ 30 ಪಾಲು ಅಥವಾ ರೂ 30,000/- ಯಾವುದು ಕಮ್ಮಿಯೋ ಅಷ್ಟು.

ಮೂಲ ಸೌಕರ್ಯ ನಿಧಿ: – ವ್ಯಕ್ತಿಯ ಉಳಿತಾಯದ 20 ಪಾಲು ಅಥವಾ ವ್ಯಕ್ತಿಯ ಮರುಪಾವತಿ ಸಾಮರ್ಥ್ಯ ಅಥವಾ ರೂ 1, 00,000 ಯಾವುದು ಕಮ್ಮಿಯೋ ಅಷ್ಟು ಜೊತೆಗೆ ಪ್ರಗತಿ ನಿಧಿ ಪಡೆದುಕೊಳ್ಳುವ ಗರಿಷ್ಠ ಮೊತ್ತ ರೂ 1. 00,000 ಅಥವಾ ಉಳಿತಾಯದ 40 ಪಾಲು, ಇವುಗಳಲ್ಲಿ ಯಾವುದು ಕಮ್ಮಿಯೋ ಅಷ್ಟನ್ನು ಒಬ್ಬ ಸದಸ್ಯ ಪಡೆದುಕೊಳ್ಳಬಹುದಾಗಿದೆ.

ಬಡ್ಡಿದರ: – ಸಾಮಾನ್ಯವಾಗಿ ಒಂದು ವರ್ಷದಿಂದ ಮೂರು ವರ್ಷದವರೆಗಿನ ಪ್ರಗತಿ ನಿಧಿಯ ಎಲ್ಲಾ ಸಾಲಗಳಿಗೂ

ಏಕರೀತಿಯ ಶೇಕಡಾ 15% (ದಿನ ಕಡಿತ ದರ) ಬಡ್ಡಿ ವಿಧಿಸಾಲುಗುವುದು ಮತ್ತು ಮೂರು ವರ್ಷಕ್ಕಿಂತಲೂ ಮೇಲ್ಪಟ್ಟ ಸಾಲಗಳಿಗೂ 15% (ದಿನ ಕಡಿತ ದರ) ಬಡ್ಡಿಯನ್ನು ವಿಧಿಸಾಲುಗುವುದು ಇದೇ ರೀತಿಯಲ್ಲಿ ಗುಂಪಿನಿಂದ ಸದಸ್ಯರಿಗೆ ಒಂದು ವರ್ಷದಿಂದ ಮೂರು ವರ್ಷದ ಸಾಲಗಳಿಗೆ ಶೇಕಡಾ 9% (ವಾರ್ಷಿಕ ಕಡಿತ ದರ) ಹಾಗೂ ನಾಲ್ಕರಿಂದ ಮೇಲ್ಪಟ್ಟ ಸಾಲಗಳಿಗೂ ಶೇಕಡಾ 9% (ವಾರ್ಷಿಕ ಕಡಿತ ದರ) ಬಡ್ಡಿ ವಿದಿಸಲಾಗುತ್ತದೆ.

ಸೇವಾ ಶುಲ್ಕ :– ಸ್ವ ಸಹಾಯ ಸಂಘಗಳಲ್ಲಿ ವಿತರಿಸಲಾಗುವ ಎಲ್ಲಾ ರೀತಿಯ ಕಿರು ಹಣಕಾಸಿನ ನಿಧಿಗಳಿಗೆ ಶೇಕಡಾ ಒಂದು ಸೇವಾ ಶುಲ್ಕ ವಿಧಿಸಲಾಗುತ್ತದೆ. ಉದಾಹರಣೆಗೆ ತಂಡವು 10,000/– ಸುತ್ತು ನಿಧಿ ಪಡೆದರೆ ರೂ 100/- ಸೇವಾ ಶುಲ್ಕ ನೀಡಬೇಕಾಗುತ್ತದೆ. ಇದನ್ನು ಕಡ್ಡಾಯವಾಗಿ ಮೊದಲ ಕಂತಿನಲ್ಲಿಯೇ ಪಾವತಿಸಬೇಕು. ಅಂದರೆ ರೂ 10,000/- ಕ್ಕೆ ಸಮಾನ ಕಂತು ರೂ 150/– ಆಗಿದ್ದಲ್ಲಿ ಪ್ರಥಮವಾಗಿ ತಂಡವು ರೂ 150+100=250 ನೀಡಬೇಕಾಗುತ್ತದೆ. ಸೇವಾ ಶುಲ್ಕವು ತಂಡದಿಂದ ಸದಸ್ಯರಿಗೆ ನೀಡುವ ಸಾಲಗಳಿಗೂ ಅನ್ವಯಿಸುತ್ತದೆ. ಇದರ ಪಾವತಿಯನ್ನು ಕೂಡಾ ಪ್ರಥಮ ಕಂತಿನಂತೆಯೇ ಮಾಡಬೇಕಾಗುತ್ತದೆ.

ಮರುಪಾವತಿ ಅವಧಿ:- ಕಿರು ಹಣಕಾಸಿನ ವಿವಿಧ ರೀತಿಯ ನಿಧಿಗಳನ್ನು ಸಾಲವಾಗಿ ಪಡೆದ ಗುಂಪುಗಳು ಈ ಕೆಳಗಿನ ಅವಧಿಗಳಲ್ಲಿ ಸ್ವ ಸಹಾಯ ಸಂಘಗಳಿಗೆ ಕಟ್ಟಬೇಕಾಗುತ್ತದೆ. ಪಡೆದ ಸಾಲ, ಸುತ್ತು ನಿಧಿಯಾಗಿದ್ದರೆ ಗರಿಷ್ಠ 3 ವರ್ಷಗಳಲ್ಲಿ ಗುಂಪು ವ್ಯವಹಾರ ನಿಧಿ ಮತ್ತು ಉತ್ಪಾದಕ ನಿಧಿಯಾಗಿದ್ದರೆ ಗರಿಷ್ಠ 4 ವರ್ಷಗಳಲ್ಲಿ ಮೂಲ ಸೌಕರ್ಯ ನಿಧಿಯಾಗಿದ್ದರೆ ಗರಿಷ್ಠ 5 ವರ್ಷಗಳಲ್ಲಿ ಮತ್ತು ಸ್ವ ಗೃಹ ನಿಧಿಯಾಗಿದ್ದರೆ ಗರಿಷ್ಠ 10 ವರ್ಷಗಳಲ್ಲಿ ಹಿಂದಿರುಗಿಸಬೇಕಾಗುತ್ತದೆ. ಗರಿಷ್ಠ ಈ ಅವಧಿಯನ್ನು ತೆಗೆದುಕೊಂಡು ಸದಸ್ಯರು ಗುಂಪಿಗೆ ಸಾಲ ಮರುಪಾವತಿ ಮಾಡಬಹುದಾದರು ತಮ್ಮ ಅನುಕೂಲಕ್ಕೆ ತಕ್ಕಂತೆ ನಿಧಿಯನ್ನು ಮೊದಲೇ ಪಾವತಿಸಲೂಬಹುದು. ಇದೇ ರೀತಿ ಗುಂಪಿನವರು ಪ್ರಗತಿ ನಿಧಿಯ ಮರುಪಾವತಿಯನ್ನು ಅವಧಿಗಿಂತ ಮೊದಲೇ ಮಾಡಬಹುದು. ಗುಂಪಿನಿಂದ ಸ್ವ ಸಹಾಯ ಸಂಘಗಳಿಗೆ ಬಡ್ಡಿ ಸಹಿತ ಸಮಾನ ಕಂತುಗಳಲ್ಲಿ ಮಾಸಿಕ ಕಂತಿನಲ್ಲಿ ಪಾವತಿ ಮಾಡಬೇಕಾಗುತ್ತದೆ. ಇದಕ್ಕಾಗಿ ಸ್ಥಾಯಿ ಪತ್ರವೊಂದನ್ನು ತಮ್ಮ ಉಳಿತಾಯ ಖಾತೆಯನ್ನೊಳ್ಳ ಬ್ಯಾಂಕಿಗೆ ನೀಡಬೇಕಾಗುತ್ತದೆ. ಬ್ಯಾಂಕಿನಿಂದ ಕಳುಹಿಸಲ್ಪಟ್ಟ ಹಣವು ಯೋಜನೆಯ ಸಂಬಂಧಿಸಿದ ಖಾತೆಗೆ ಬಡ್ಡಿ ಮತ್ತು ಅಸಲು ಪ್ರತ್ಯೇಕಗೊಂಡು ಜಮೆಯಾಗುತ್ತದೆ. ಇದರಂತೆ ಗುಂಪಿನವರು ತಮ್ಮ ಸಾಮಾನ್ಯ ಖಾತೆಗಳಲ್ಲಿ ಇದನ್ನು ದಾಖಲು ಮಾಡಿಕೊಳ್ಳಬೇಕಾಗುತ್ತದೆ.

ಮರು ಪಾವತಿ ಕ್ರಮಗಳು :-

ಪ್ರಗತಿ ನಿಧಿಯ ವಿವಿಧ ಸಾಲಗಳನ್ನು ಮಾಸಿಕ ಕಂತಿನಲ್ಲಿ ಗುಂಪಿನಿಂದ ಯೋಜನೆ ಮರುಪಾವತಿ ಮಾಡಬೇಕಾಗುತ್ತದೆ. ಆದರೆ ಗುಂಪಿನ ಸದಸ್ಯರಿಂದ ಗುಂಪಿಗೆ ವಾರದ ಕಂತಿನಲ್ಲಿಯೇ ಮರುಪಾವತಿ ಯಾಗಬೇಕಾಗುತ್ತದೆ. ಇವರಿಗೆ ವಾರ್ಷಿಕ ಬಡ್ಡಿಯನ್ನು ನಿಗಧಿಗೊಳಿಸಿದ ನಂತರ ವರ್ಷದ ಪ್ರಾರಂಭದ ಕಂತುಗಳನ್ನು ಬಡ್ಡಿಗೆ ವರ್ಗ ಮಾಡಲಾಗುತ್ತದೆ. ಉದಾಹರಣೆಗೆ ಒಬ್ಬ ಸದಸ್ಯ ರೂ 10,000/- ಸುತ್ತು ನಿಧಿ ಪಡೆದಿದ್ದರೆ, ಅದನ್ನು 5 ವರ್ಷಗಳಲ್ಲಿ 259 ವಾರದ ಕಂತುಗಳಲ್ಲಿ ಕಟ್ಟ ಬಯಸಿದರೆ ಮೊದಲನೇ ವರ್ಷದಲ್ಲಿ

ಈ 1, 0200 ಬಡ್ಡಿ + 100 ಸೇವಾಶುಲ್ಕ +=2000 ಅಸಲು ಕಟ್ಟಬೇಕು.

2 ನೇ ವರ್ಷ ರೂ 960 ಬಡ್ಡಿ + 2000 ಅಸಲು,

3 ನೇ ವರ್ಷ ರೂ 720 ಬಡ್ಡಿ + 2000 ಅಸಲು,

4 ನೇ ವರ್ಷ ರೂ 480 ಬಡ್ಡಿ +2000 ಅಸಲು,

5 ನೇ ವರ್ಷ ರೂ 240 ಬಡ್ಡಿ +2000 ಅಸಲು, ಕಟ್ಟಬೇಕು.

ಹೀಗೆ ಒಟ್ಟು ಬಡ್ಡಿ 3,600+ಸೇವಾಶುಲ್ಕ 100+ಅಸಲು 10,000

ಒಟ್ಟು =13,700/- ಕಟ್ಟಬೇಕಾಗುತ್ತದೆ. ಈ ಹಣವನ್ನು ಪ್ರತಿವಾರ ರೂ 53 ರಂತೆ 259 ವಾರ (5 ವರ್ಷ)ದಲ್ಲಿ ಮರು ಪಾವತಿ ಮಾಡಬೇಕಾಗುತ್ತದೆ.

ಭದ್ರತೆ:- ಸುತ್ತು ನಿಧಿಗೆ ಗುಂಪಿನ ನಿರ್ಣಯದ ಹೊರತಾಗಿ ಬೇರೆ ಭದ್ರತೆ ಬೇಕಾಗುವುದಿಲ್ಲ. ಆದರೂ ಸುತ್ತು ನಿಧಿಯಿಂದ ಖರೀದಿಸುವ ಎಲ್ಲಾ ಸುತ್ತುಗಳನ್ನು ಸಾಲಕ್ಕೆ ಭದ್ರತೆಯಾಗಿ ಇಟ್ಟುಕೊಳ್ಳಗಾಗುತ್ತದೆ.

ಉತ್ಪಾದಕ ನಿಧಿ ಮತ್ತು ಮೂಲ ಸೌಕರ್ಯ ನಿಧಿಯಿಂದ ಗುಂಪಿನ ಸದಸ್ಯರು ಖರೀದಿಸುವ ಸೊತ್ತುಗಳು ಗುಂಪಿಗೂ ಮತ್ತು ಗುಂಪಿನಿಂದ ಯೋಜನೆಗೂ ಭದ್ರತೆಯಾಗಿರುತ್ತದೆ. ಉದಾಹರಣೆಗೆ: ಗುಂಪಿನ ಸದಸ್ಯನೊರ್ವ ಪಂಪು ಖರೀದಿ ಮಾಡಿದಲ್ಲಿ ಅದು ಗುಂಪಿಗೆ ಮತ್ತು ತನ್ಮೂಲಕ ಯೋಜನೆಯ ಪ್ರಗತಿ ನಿಧಿ ಕಾರ್ಯಕ್ರಮಕ್ಕೆ ಭದ್ರತೆಯಾಗಿರುತ್ತದೆ. ಇದಲ್ಲದೇ ಯಾವುದೇ ಗುಂಪಿನ ಸದಸ್ಯನೊರ್ವ ರೂ50, 000/- ಕ್ಕಿಂತ ಹೆಚ್ಚಿನ ವೈಯಕ್ತಿಕ ನಿಧಿ ಪಡೆಯುವುದಾದಲ್ಲಿ ಆಗ ಈ ಮೊತ್ತಕ್ಕೆ ಸಮನಾಗಿ ಸ್ಥಿರಾಸ್ತಿಯನ್ನಾಗಲೀ, ಚರಾಸ್ತಿಯನ್ನಾಗಲೀ ಅಥವಾ ಮಂಜೂರು ಮಾಡುವ ಒಕ್ಕೂಟಕ್ಕೆ ಸಮಾಧಾನವಾಗುವ ಇತರೆ ಯಾವುದೇ ಭದ್ರತೆಯನ್ನು ನೀಡಬೇಕಾಗುತ್ತದೆ.

ಕಂತು ಬಾಕಿ ಮತ್ತು ದಂಡನಾ ಶುಲ್ಕ :-

ಗುಂಪಿನ ಸದಸ್ಯರಿಂದ ನಿಧಿಯನ್ನು ವಾರಕ್ಕೊಮ್ಮೆಯಂತೆ ಮತ್ತು ಗುಂಪಿನಿಂದ ಪ್ರಗತಿನಿಧಿಗೆ ತಿಂಗಳಿಗೊಮ್ಮೆ ಕಂತುಗಳಲ್ಲಿ ನಿಧಿಯುನ್ನು ವಾಪಸ್ ಪಡೆಯಲಾಗುವುದು. ಗುಂಪಿನಿಂದ 3 ತಿಂಗಳು ಮರುಪಾವತಿ ಬಾರದಿದ್ದಲ್ಲಿ ಮತ್ತು ಸದಸ್ಯರಿಂದ 6 ವಾರಗಳಲ್ಲಿಯೂ ಮರುಪಾವತಿ ಬಾರದಿದ್ದಲ್ಲಿ ಮರುಪಾವತಿಕ್ರಮ ಕೈಗೊಳ್ಳಲಾಗುತ್ತದೆ. ಮರುಪಾವತಿಯಾಗದ ಕಂತುಗಳ ಮೇಲೆ, ಮತ್ತು ಸದಸ್ಯರ ಮೇಲೆ ಗುಂಪಿನವರು ವಾರವೊಂದಕ್ಕೆ ಒಂದುನೂರು ಅಥವಾ ಅದಕ್ಕೆ ಕಡಿಮೆಯ ಅವಧಿಗೆ ರೂ 5/- ರಂತೆ ದಂಡ ವಸೂಲು ಮಾಡಬೇಕಾಗುತ್ತದೆ. ಇದೇ ರೀತಿ ಗುಂಪಿನಿಂದ ತಿಂಗಳೊಂದಕ್ಕೆ ಕಂತು ಬಾರದಿದ್ದಲ್ಲಿ ಬಾಕಿಯಾದ ರೂ 1000/- ಕ್ಕೆ ತಿಂಗಳಿಗೆ ರೂ 20/- ರಂತೆ ದಂಡ ತೆರಬೇಕಾಗುತ್ತದೆ.

ನಿಧಿಗೆ ಅರ್ಜಿ ಪರಿಶೀಲನೆ, ಮಂಜೂರಾತಿ ಮತ್ತು ಬಿಡುಗಡೆಯ ವಿಧಾನ

ಸ್ವ ಸಹಾಯ ಸಂಘದ ಗುಂಪು ತನ್ನ ವಾರದ ಸಭೆಯಲ್ಲಿ ಯಾವ ಸದಸ್ಯನಿಗೆ ಸಾಲದ ಅವಶ್ಯಕತೆ ಇದೆ, ಈ ಎಲ್ಲಾ ವಿಷಯಗಳ ಚರ್ಚೆ ಮಾಡಿ ನಿರ್ಣಯ ಕೈಗೊಳ್ಳುತ್ತದೆ. ಮತ್ತು ಸಾಲದ ಅವಶ್ಯಕತೆ ಇರುವ ವ್ಯಕ್ತಿಯ ಅರ್ಜಿಯನ್ನು ಬರೆದು, ಅದೇ ದಿನ ಸೇವಾನಿರತರಿಗೆ ಸಲ್ಲಿಸಲಾಗುತ್ತದೆ. ಸೇವಾನಿರತರು ಗುಂಪಿನ ಮತ್ತು ವ್ಯಕ್ತಿಯ ಅರ್ಹತೆಯನ್ನು ಅದೇ ದಿನ ಗುರುತಿಸಿ ಸಾಲದ ಉದ್ದೇಶವನ್ನು ಮನದಟ್ಟು ಮಾಡಿಕೊಳ್ಳುತದೆ. ಬೇಡಿಕೆಯು ಸಮರ್ಪಕವಾಗಿದ್ದಲ್ಲಿ ಮತ್ತು ಮಂಜೂರತಿಯ ನಿಯಮಗಳಿಗೆ ಒಳಪಟ್ಟಿದಲ್ಲಿ ಅರ್ಜಿಯನ್ನು ಸ್ವೀಕರಿಸಿದ ಎರಡು ದಿನದೊಳಗೆ ಒಕ್ಕೂಟ ಮಂಜೂರತಿ ಉಪಸಮಿತಿಗೆ ಕಳುಹಿಸಿಕೊಡುತ್ತಾರೆ. ಒಕ್ಕೂಟ ಮಂಜೂರಾತಿ ಸಮಿತಿಯು ತಿಂಗಳಿಗೆ 2 ಬಾರಿ ಅಥವಾ ಅಗತ್ಯವಿದ್ದರೆ ಅದಕ್ಕೂ ಹೆಚ್ಚು ಬಾರಿ ಸಭೆ ಸೇರಿ ಗುಂಪಿನ/ವೈಯಕ್ತಿಕ ಸಾಲದ ಉದ್ದೇಶವನ್ನು ಮನಗಂಡು ಮಂಜುರಾತಿ ಶಿಫಾರಸ್ಸು ಮಾಡಿ ಯೋಜನಾಧಿಕಾರಿಯವರ ಕಛೇರಿಗೆ ಕಳುಹಿಸುತ್ತದೆ. ಇದಕ್ಕೆ ಒಂದು ವಾರ ತಗಲುತ್ತದೆ. ಯೋಜನಾಧಿಕಾರಿಯವರು ತನ್ನ ಮೇಲ್ವಿಚಾರಕರ ಸಭೆಯಲ್ಲಿ ಅರ್ಜಿಯನ್ನು ಮಂಡಿಸಿ ತದನಂತರದಲ್ಲಿ ಮಂಜೂರು ಮಾಡುತ್ತದೆ. ಇದಕ್ಕೆ 2 ದಿನ ಹಿಡಿಯುತ್ತದೆ. ಸಾಲವು ಬ್ಯಾಂಕ್ ಚೆಕ್ ಮೂಖಾಂತರ ದೊರೆಯುತ್ತದೆ. ಇದಕ್ಕೂ 2 ದಿನ ಬೇಕಾಗುತ್ತದೆ. ಒಟ್ಟಿನಲ್ಲಿ ಸಾಲದ ಅರ್ಹ ವ್ಯಕ್ತಿಯು ಸಾಲಕ್ಕೆ ಅರ್ಜಿ ಸಲ್ಲಿಸಿ ಗರಿಷ್ಠ 2 ವಾರದೊಳಗೆ ಸಾಲವನ್ನು ಪಡೆಯಬಹುದಾಗಿದೆ.

ನಿಧಿಯ ಸದುಪಯೋಗ ಮತ್ತು ಮರುಪಾವತಿ ಪರಿಶೀಲನೆ

ಉತ್ಪಾದಕ ನಿಧಿಯ ಸದುಪಯೋಗ ಬಗ್ಗೆ ಗುಂಪಿನವರು ಒಕ್ಕೂಟಕ್ಕೆ ತಿಂಗಳಿಗೊಮ್ಮೆ ವರದಿ ಸಲ್ಲಿಸುತ್ತಾರೆ. ಇದನ್ನು ಸೇವಾನಿರತ, ಮೇಲ್ವಿಚಾರಕ, ಮತ್ತಿತರ ಹಿರಿಯ ಅಧಿಕಾರಿಗಳು, ಒಕ್ಕೂಟದ ಪದಾಧಿಕಾರಿಗಳು ಗಮನಿಸುತಿರುತ್ತಾರೆ.

ನಿಧಿಯ ಮರುಪಾವತಿ ವರದಿಯನ್ನು ಗುಂಪಿನವರು ಒಕ್ಕೂಟಕ್ಕೆ ತಿಂಗಳಿಗೊಮ್ಮೆ ತಿಳಿಸುತ್ತಾರೆ. ಸೇವಾನಿರತರ ಮರುಪಾವತಿ ವರದಿಯನ್ನು ಪಡೆದುಕೊಂಡು ಬ್ಯಾಂಕ್ ಪಾಸ್ ಪುಸ್ತಕದಿಂದ ಖಾತ್ರಿ ಮಾಡಿಕೊಂಡು ಬಾಕಿ ಇದ್ದವರ ಮಾಹಿತಿಯನ್ನು ಹಿರಿಯ ಅಧಿಕಾರಿಗಳಿಗೆ ತಿಳಿಸುತ್ತಾರೆ. ಬಾಕಿಯಾದ ನಿಧಿಗೆ ಮರುಪಾವತಿ ಪ್ರಯತ್ನವನ್ನು ಗುಂಪಿನವರು ಒಕ್ಕೂಟದವರು ಮತ್ತು ಸೇವಾನಿರತರು, ಮೇಲ್ವಿಚಾರಕರು ಒಂದುವೇಳೆ ಇವರ್ಯಾರಿಗೂ ಆಗದಿದ್ದಲ್ಲಿ ಸಂಘಟನೆಯ ನಿರ್ದೇಶಕರುಗಳೇ ವಹಿಸಿಕೊಳ್ಳುತ್ತಾರೆ.

೫.೨ ಸಮೀಕ್ಷಾ ಪ್ರದೇಶದಲ್ಲಿ ಕಾರ್ಯೋನ್ಮುಖವಾಗಿರುವ SKDRDP ಯ ಹಿನ್ನೆಲೆ

1982ರಲ್ಲಿ ಆರಂಭಗೊಂಡು ಇಂದಿಗೆ 26 ವರ್ಷದ ಸಂಭ್ರಮದಲ್ಲಿರುವ SKDRDP ಯು ಅಂತರರಾಷ್ಟ್ರೀಯ ಮಾನ್ಯತೆಯನ್ನು ಪಡೆದಿದೆ. ಆರಂಭದಿಂದ ಇಂದಿನವರೆಗೆ ಯೋಜನೆಯು ಗ್ರಾಮೀಣ ಜೀವನದ ವಿವಿಧ ಪ್ರಕಾರಗಳಲ್ಲಿ ಬದಲಾವಣೆಯ ಹರಿಕಾರನಾಗಿ ತಾನು ಆಯ್ದ ಗ್ರಾಮಗಳಲ್ಲಿ ಕೂಲಿ ಕಾರ್ಮಿಕರ ಮತ್ತು ರೈತರ ಬದುಕನ್ನು ಹಸನುಗೊಳಿಸುವಲ್ಲಿ, ಪ್ರೇರಣೆ, ಮಾರ್ಗದರ್ಶನ ನೀಡುತ್ತಾ ಬಂದಿದೆ. ಅದರ ಪ್ರಯತ್ನ ಯಶಸ್ಸು ಕಂಡಿದೆ.

ತನ್ನ ಸಮುದಾಯ ಕಾರ್ಯಕ್ರಮಗಳ ಮುಖೇನ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪರಿಚಿತವಾಗಿದೆ. ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಡತನ, ಅಜ್ಞಾನ, ನಿರಕ್ಷರತೆ, ದುಶ್ಚಟಗಳ ವಿರುದ್ಧ ಮೌನ ಕ್ರಾಂತಿಯನ್ನು ಮಾಡುವ ಮೂಲಕ ಮಹಾತ್ಮಾ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸನ್ನು ಸಾಕಾರಗೊಳಿಸುವಲ್ಲಿ ಯಶಸ್ವಿ ಹೆಜ್ಜೆಗಳನ್ನು ಇರಿಸಿದೆ. ಯೋಜನೆಯು ಮೊದಲು ಬೆಳ್ತಂಗಡಿ ತಾಲ್ಲೂಕಿನ 18,000 ಕಡು ಬಡ ಕುಟುಂಬಗಳೊಂದಿಗೆ ಕೆಲಸ ಮಾಡಿ ಅಗತ್ಯ ಸಂಪನ್ಮೂಲ ಒದಗಿಸಿ ಕೃಷಿ ಅಭಿವೃದ್ಧಿಗೆ ನೆರವಾಯಿತು. ಆ ಬಳಿಕ ಗ್ರಾಮದ ಅಭಿವೃದ್ಧಿಯ ವಿವಿಧ ಮಜಲುಗಳಲ್ಲಿ ತೊಡಗಿಸಿಕೊಂಡು ಅಭಿವೃದ್ಧಿಗೆ ಸಹಕರಿಸಿತು.

ಇದೀಗ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೂ ಈ ಯೋಜನೆ ಕಾಲಿರಿಸಿದೆ. ಸಮುದಾಯ ಅಭಿವೃದ್ಧಿ ಯೋಜನೆ ಅನೇಕ ಜಿಲ್ಲೆಗಳಲ್ಲಿ ಕಾರ್ಯರೂಪಕ್ಕೆ ಬಂದಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ 4,000 ಗ್ರಾಮಗಳು ಈ ಯೋಜನೆ ವ್ಯಾಪಿಸಿದೆ. 2,500 ಕ್ಕೂ ಅಧಿಕ ಕಾರ್ಯಕರ್ತರಿದ್ದಾರೆ. ಕೂಲಿ ಕಾರ್ಮಿಕರು ಮತ್ತು ಅತಿ ಸಣ್ಣ ರೈತರನ್ನು ಒಳಗೊಂಡ 8.50 ಲಕ್ಷ ಸದಸ್ಯರು ಸೇರ್ಪಡೆಯಾಗಿದ್ದಾರೆ.

SKDRDP ಯು ವಿವಿಧ ಮುಖಗಳಲ್ಲಿ ತನ್ನನ್ನು ಪರಿಚಯಿಸಿಕೊಂಡಿದೆ. ಅವುಗಳಲ್ಲಿ ಪ್ರಮುಖವಾದವುಗಳು ಇಂತಿವೆ. ಪ್ರಗತಿಬಂಧು ಯೋಜನೆಯಲ್ಲಿ ಬರುವ ಸಣ್ಣ ಹಾಗೂ ಅತೀ ಸಣ್ಣ ರೈತರನ್ನು ಪ್ರಗತಿಬಂಧು ಸ್ವ ಸಹಾಯ ಸಂಘಗಳ ಮೂಲಕ ಸಂಘಟಿಸಲಾಗಿದೆ. 5 ರಿಂದ 10 ಸದಸ್ಯರನ್ನೊಳಗೊಂಡ ಸಂಘಗಳೇ ಪ್ರಗತಿಬಂಧು ಗುಂಪುಗಳು. ನಿಯಮಿತವಾಗಿ ವಾರಕ್ಕೊಮ್ಮೆ ಸೇರಿ ಉಳಿತಾಯ, ಸಾಲ ವಿತರಣೆ ಹಾಗೂ ಶ್ರಮ ವಿನಿಮಯದಲ್ಲಿ ತೊಡಗಿಸಿಕೊಂಡು ಅಭಿವೃದ್ಧಿಯ ಪಥದಲ್ಲಿ ಸಾಗುತ್ತಾರೆ.

ಶ್ರಮ ವಿನಿಮಯದಿಂದ ಸಣ್ಣರೈತರು ಕೃಷಿಯ ಮುಖ್ಯ ಕಾರ್ಯಗಳಾದ ಬೇಲಿ, ಬಾವಿ, ನೆಲಸಮತಟ್ಟು, ಕೊಟ್ಟಿಗೆ, ಮನೆಗಳ ನಿರ್ಮಾಣ ಮುಂತಾದ ಶ್ರಮ ಆಧಾರಿತ ಕಾರ್ಯಗಳು ಸುಲಭವಾಗಿ

ಹಾಗೂ ಯಶಸ್ವಿಯಾಗಿ ಕೈಗೊಳ್ಳುವಂತೆ ಮಾಡಿದೆ. ಈ ಪೈಕಿ 1, 00000 42.304 ಸಣ್ಣ ಹಾಗೂ ಅತೀ ಸಣ್ಣ ಕೃಷಿಕರ 22,35,17,76 ಲಕ್ಷ ಮಾನವ ದಿನಗಳ ಶ್ರಮ ವಿನಿಮಯದಿಂದ 65 ಸಾವಿರ ಹೆಕ್ಟೇರ್ ಕೃಷಿ ಭೂಮಿ ಈಗ ಹಸಿರಾಗಿದೆ.

SKDRDP ಯ ವಿವಿಧ ಕಾರ್ಯಕ್ರಮಗಳು ೫.೨.

ಜ್ಞಾನ ವಿಕಾಸ ಕೇಂದ್ರ:-

ಅವಿದ್ಯಾವಂತ, ಭೂರಹಿತ ನಿರುದ್ಯೋಗಿಗಳಾದ ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣಕ್ಕಾಗಿ ದುಡಿಯುತ್ತಿರುವ ವಿಶಿಷ್ಟ ಕೇಂದ್ರಗಳೇ ಜ್ಞಾನ ವಿಕಾಸ ಕೇಂದ್ರಗಳು ಆರ್ಥಿಕವಾಗಿ ಹಿಂದುಳಿದಿರುವ, ಬೀಡಿ ಕಟ್ಟುವುದೇ ಮುಖ್ಯ ಉದ್ಯೋಗವಾಗಿರುವ ಈ ಮಹಿಳೆಯರ ಆರೋಗ್ಯ, ಕುಟುಂಬ ಕಲ್ಯಾಣ, ನೈರ್ಮಲ್ಯ, ಮಕ್ಕಳ ವಿದ್ಯಾಭ್ಯಾಸ, ಶುಚಿ ಪರಿಸರ, ಉತ್ತಮ ಜೀವನವನ್ನು ಕುರಿತು ಪ್ರತಿವಾರ ಎರಡು ಗಂಟೆಗಳ ಕಾರ್ಯಕ್ರಮದಲ್ಲಿ ಮಾಹಿತಿ ಪಡೆಯುತ್ತಾರೆ.

ಜ್ಞಾನ ವಿಕಾಸ ಕೇಂದ್ರಗಳಲ್ಲಿ ಮಹಿಳೆಯರಿಗೆ ಪರ್ಯಾಯ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಪುಷ್ಪೋದ್ಯಮ, ಹೈನುಗಾರಿಕೆ ತರಕಾರಿ ಕೃಷಿ ಮುಂತಾದವುಗಳಲ್ಲಿ ತರಬೇತಿ ಮತ್ತು ಮಾರ್ಗದರ್ಶನ ನೀಡಲಾಗುತ್ತಿದೆ.

ಈ ಯೋಜನೆಯಡಿ 4.80 ಲಕ್ಷ ಮಹಿಳೆಯರು ಸ್ವ ಉದ್ಯೋಗಗಳನ್ನು ಮಾಡುತ್ತಿದ್ದಾರೆ. ಒಟ್ಟು 80.242 ಸ್ವ ಸಹಾಯ ಗುಂಪುಗಳು ರಚನೆಯಾಗಿವೆ. ಈ ಗುಂಪುಗಳು 106.90 90,000000 ಕೋಟಿ ರೂಪಾಯಿ ಹಣ ಉಳಿತಾಯ ಮಾಡಿದ್ದಾರೆ.

ಸಂಪೂರ್ಣ ಸುರಕ್ಷಾ ವಿಮಾ ಯೋಜನೆ:-

ಈ ವಿಮಾ ಯೋಜನೆಯಡಿ ವಾರ್ಷಿಕವಾಗಿ ರೂ 700 ಚಂದಾ ಭರಿಸುವ ಒಬ್ಬ ವಿಮೇದಾರನ ಐದು ಮಂದಿ ಸದಸ್ಯರಿರುವ ಕುಟುಂಬಕ್ಕೆ ತಗಲುವ ಆಸ್ಪತ್ರೆಯ ವೆಚ್ಚವನ್ನು ರೂ 25.000ದವರೆಗೆ ಭರಿಸಲಾಗುತ್ತದೆ. ಗೃಹಿಣಿಯರಿಗೆ ಹೆರಿಗೆ ಸಮಯದ ಚಿಕಿತ್ಸಾ ಸೌಲಭ್ಯ, ದುಡಿಯುವ ಸದಸ್ಯರಿಗೆ ಜೀವ ವಿಮಾ ಭರಿಸುತ್ತದೆ.

ಉದ್ದೇಶ:-

೧. ಸಾಧ್ಯವಾದಷ್ಟರ ಮಟ್ಟಿಗೆ ರಿಯಾಯಿತಿ ದರದಲ್ಲಿ ಆಸ್ಪತ್ರೆ ಸೌಲಭ್ಯ.

೨. ಉತ್ತಮ ಆಸ್ಪತ್ರೆಗಳೊಂದಿಗೆ ಸಂಪರ್ಕ.

೩. ಹೆಚ್ಚಿನ ಖರ್ಚಿಗಾಗಿ ಗುಂಪಿನಿಂದ ಸಾಲ ಸೌಲಭ್ಯ.

೪. ವಿಮೆಗೆ ಒಳಪಡುವ ಫಲಾನುಭವಿಗಳಿಗೆ ಕುಟುಂಬ ವರ್ಗದವನ್ನು ಸೇರಿಸಿ ಆಕಸ್ಮಿಕವಾಗಿ ಒದಗಬಹುದಾದ ಆಸ್ಪತ್ರೆ ಚಿಕಿತ್ಸೆಯ ಖರ್ಚಿನ ಭಯದಿಂದ ಮುಕ್ತಿ.

ಸಮೀಕ್ಷಾ ಪ್ರದೇಶವಾದ ಬೆಳ್ತಂಗಡಿ ತಾಲೂಕಿನಲ್ಲಿ ಡಿಸೆಂಬರ್ 2008 ರವರೆಗೆ ಒಟ್ಟು 20,525 ಕುಟುಂಬಗಳು ಮತ್ತು 89.725 ಮಂದಿ ಸದಸ್ಯರು ಯೋಜನೆಗೆ ಒಳಪಟ್ಟಿದ್ದಾರೆ. 2008.2009ರಲ್ಲಿ ಬೆಳ್ತಂಗಡಿ ತಾಲೂಕಿನ ಬೆಳಾಲಿನಿಂದ 320 ಮತ್ತು ಉಜಿರೆ ಗ್ರಾಮದಿಂದ 313 ಜನ ಸದಸ್ಯರು ವಿಮಾ ಯೋಜನೆಯ ಸದಸ್ಯರಾಗಿದ್ದಾರೆ.

ಸಿರಿ ಯೋಜನೆ :-

SKDRDP ಯು ಭೂಹೀನರ ಆರ್ಥಿಕ ಸಬಲೀಕರಣಕ್ಕಾಗಿ ಹಲವಾರು ಆದಾಯ ಚಟುವಟಿಕೆಗಳನ್ನು ರೂಪಿಸಿದೆ. ಗುಂಪುಗಳ ಮುಖೇನ ಉತ್ಪಾದಕ ಹಾಗೂ ಸೇವಾ ಕ್ಷೇತ್ರಗಳನ್ನು ಪ್ರಮುಖ ಕಾರ್ಯಗಳಾಗಿ ಆಯ್ಕೆ ಮಾಡಲಾಗಿದೆ. ಗುಂಪುಗಳಿಗೆ ಅಗತ್ಯವಿರುವ ತರಬೇತಿ ಹಾಗೂ ಘಟಕಗಳನ್ನು ಸ್ಥಾಪಿಸಲು ನೆರವನ್ನು ನೀಡಲಾಗಿದೆ. ಆಯಾ ಕ್ಷೇತ್ರಕ್ಕೆ ಅಗತ್ಯವಿರುವ ವೃತ್ತಿಪರ ನೆರವನ್ನು, ನೈಪುಣ್ಯ, ಕಚ್ಚಾವಸ್ತುಗಳ ಖರೀದಿ, ಉತ್ಪಾದನೆ ಹಾಗೂ ಮಾರಾಟ ಮುಂತಾದವುಗಳನ್ನು ನೀಡಲಾಗಿದೆ. ಈ ಗುಂಪುಗಳು ಸಿರಿ ಎಂಬ ಹೆಸರಿನಲ್ಲಿ ಉತ್ಪನ್ನಗಳನ್ನು ಬಿಡುಗಡೆ ಮಾಡುತ್ತಿವೆ. ಸಿರಿ ಯೋಜನೆಯಡಿ ಒಟ್ಟು 10 ಕೋಟಿ ರೂಪಾಯಿ ಆರ್ಥಿಕ ವಹಿವಾಟು ನಡೆಸಲಾಗಿದೆ.

ಮಧ್ಯ ವರ್ಜನ ಶಿಬಿರ:-

ಗ್ರಾಮೀಣ ಜನತೆಗೆ ಮಧ್ಯಪಾನವೊಂದು ಶಾಪವಾಗಿದೆ. ಈ ದುಶ್ಚಟವೆಂಬ ದೊಡ್ಡ ಸಾಮಾಜಿಕ ಅನಿಷ್ಟವನ್ನು ತೊಡೆದುಹಾಕಲು ಜನಜಾಗೃತ್ತಿಗಾಗಿ ಮಧ್ಯ ವರ್ಜನ ಶಿಬಿರಗಳಲ್ಲಿ ಪಾನಮುಕ್ತರಾಗಿ ಹೊಸ ಬದುಕಿಗೆ ಮುಂದಡಿಯಿಟ್ಟ ಸದಸ್ಯರನ್ನು ಸೇರಿಸಿ ನವಜೀವನ ಸಮಿತಿಗಳನ್ನು ರಚಿಸಲಾಗಿದೆ. ಪಾನಮುಕ್ತ ಮತ್ತೆ ಚಟದ ಬಲೆಗೆ ಬೀಳದಂತೆ ನವಜೀವನ ಸಮಿತಿಯ ಎಚ್ಚರಿಕೆ ವಹಿಸುತ್ತದೆ. ಇದುವರೆಗೆ

160 ಮಧ್ಯವರ್ಜನ ಶಿಬಿರಗಳನ್ನು ಆಯೋಜಿಸಲಾಗಿದ್ದು 20 ಸಾವಿರ ಮಂದಿ ಮಧ್ಯವರ್ಜನ ಮುಕ್ತರಾಗಿದ್ದಾರೆ.

ರುದ್ರ ಭೂಮಿ ಯೋಜನೆ:-

ರುದ್ರ ಭೂಮಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಾವವಿರುವುದನ್ನು ಮನಗಂಡು SKDRDP ಯು ಮಹತ್ವದ ರುದ್ರಭೂಮಿ ಅಭಿವೃದ್ಧಿ ಯೋಜನೆಗೆ ಚಾಲನೆ ನೀಡಿದೆ. ಹಳ್ಳಿ, ಪಟ್ಟಣ ಹಾಗೂ ನಗರದಲ್ಲಿರುವ ರುದ್ರ ಭೂಮಿಗಳ ಸುಧಾರಣೆಗೆ ಧನಸಹಾಯ ಹಾಗೂ ತಾಂತ್ರಿಕ ಮಾರ್ಗದರ್ಶನ ಒದಗಿಸುವುದರ ಜೊತೆಗೆ ಈ ಯೋಜನೆಯಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿದ್ದಾರೆ. ರುದ್ರ ಭೂಮಿ ಯೋಜನೆಯ ಅನ್ವಯ 232 ರುದ್ರ ಭೂಮಿ ನಿರ್ಮಿಸಲಾಗಿದೆ.

ಗ್ರಾಮಮಟ್ಟದಲ್ಲಿ ಕಾರ್ಯಕ್ರಮಗಳು

೧. ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳು:-

ಗ್ರಾಮೀಣ ಪ್ರದೇಶದ ಜನರ ಮುಖ್ಯ ಉದ್ಯೋಗ ಕೃಷಿಯಾಗಿರುವುದರಿಂದ ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು SKDRDP ಯೋಜನೆಯು ಸಮೀಕ್ಷೆಗೊಳಪಟ್ಟ 'ಬೆಳಾಲು' ಎಂಬ ಪ್ರದೇಶದಲ್ಲಿ ಅನೇಕ ಮಾಹಿತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ.

೧. ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳು

೨. ಸಂಸ್ಕೃತಿಕ ಕಾರ್ಯಕ್ರಮಗಳು

೩. ಜಾಗೃತಿ ಕಾರ್ಯಕ್ರಮಗಳು

ಗ್ರಾಮಮಟ್ಟದಲ್ಲಿ ಕಾರ್ಯಕ್ರಮಗಳು:-

ಸ್ವ ಸಹಾಯ ಸಂಘಗಳ ಮುಖ್ಯ ಉದ್ದೇಶ ಗ್ರಾಮೀಣ ಪ್ರದೇಶದ ಜನರನ್ನು ಆರ್ಥಿಕವಾಗಿ ಸಶಕ್ತರನ್ನಾಗಿಸುವುದರ ಜೊತೆಗೆ, ಒಗ್ಗಟ್ಟು ಮತ್ತು ಪರಸ್ಪರ ಸಹಕಾರದೊಂದಿಗೆ ಬದುಕುವಂತೆ ಮಾಡುವುದು ಆಗಿದೆ. ಈ ಕಾರಣದಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಸ್ವ ಸಹಾಯ ಸಂಘಗಳು ಆರ್ಥಿಕ

ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸದಸ್ಯರ ವ್ಯಕ್ತಿತ್ವ ವಿಕಸನಕ್ಕೆ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸುತ್ತದೆ.

೧. ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳು:-

ಕೃಷಿಯು ಗ್ರಾಮೀಣ ಜೀವನದ ಅವಿಭಾಜ್ಯ ಅಂಗವಾಗಿದೆ. ಗ್ರಾಮೀಣ ಪ್ರದೇಶದ ಶೇ.60ಕ್ಕಿಂತ ಹೆಚ್ಚು ಮಂದಿಯ ಜೀವನ ನಿರ್ವಹಣೆ ಕೃಷಿಯ ಮೇಲೆ ಅವಲಂಬಿತವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಸಮೀಕ್ಷೆ ನಡೆಸಿದ ಬೆಳಾಲು ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ SKDRDP ಸ್ವ ಸಹಾಯ ಸಂಘವು ಈ ಕೆಳಗಿನ ಯೋಜನೆಗಳ ಮೂಲಕ ಕೃಷಿಯ ಅಭಿವೃದ್ಧಿಗೆ ಒತ್ತು ನೀಡಿದೆ.

ಹಿಡುವಳಿ ಯೋಜನೆ:-

ಸಮೀಕ್ಷೆ ನಡೆಸಿದ ಬೆಳಾಲು ಗ್ರಾಮದಲ್ಲಿ ಕಾರ್ಯೋನ್ಮುಖವಾಗಿರುವ SKDRDP ಸ್ವ ಸಹಾಯ ಸಂಘವು ಇಲ್ಲಿಯ ಗುಂಪಿನ ಜೊತೆ ಚರ್ಚಿಸಿ, ಸದಸ್ಯರ ಅಗತ್ಯಗಳಿಗೆ ತಕ್ಕಂತೆ ಐದು ವರ್ಷಗಳ ಅವಧಿಗೆ ಕೃಷಿ ಯೋಜನೆಯನ್ನು ತಯಾರಿಸುತ್ತಾರೆ. ಚಿಕ್ಕ ಕೃಷಿ ತಾಕುಗಳನ್ನು ಕೂಡ ಅಧಿಕ ಇಳುವರಿ ನೀಡುವ ವಾಣಿಜ್ಯ ತೋಟವನ್ನಾಗಿ ಪರಿವರ್ತಿಸುವಲ್ಲಿ ಈ ಕೃಷಿ ಯೋಜನೆಯು ಪೂರಕವಾಗಿ ನೆರವಾಗುತ್ತಿದೆ. ಬೇಲಿ ಕಟ್ಟುವುದು, ಬಾವಿ ಅಗೆಯುವುದು, ನೀರನ್ನು ಸಂರಕ್ಷಿಸಲು ಅಗತ್ಯವಾದ ತಾಂತ್ರಿಕತೆ, ಮುಂತಾದವುಗಳನ್ನು ಕಾಲ ಕಾಲಕ್ಕೆ ಯೋಜನೆಯ ಪ್ರಕಾರ ಅನುಷ್ಠಾನಗೊಳಿಸಲಾಗುತ್ತಿದೆ. ಇದರ ಜೊತೆಗೆ ಈ ಎಲ್ಲಾ ಪ್ರಕ್ರಿಯೆಗಳನ್ನು ಒಂದು ಪ್ರತ್ಯೇಕವಾದ ಪುಸ್ತಕದಲ್ಲಿ ನೊಂದಾಯಿಸಲಾಗುತ್ತದೆ ಮತ್ತು ಇದು ಈ ಯೋಜನೆಯನ್ನು ಪರಾಮರ್ಶಿಸಲು ಸಹಾಯಕವಾಗಿದೆ. ಇದುವರೆಗೂ ಸುಮಾರು 30 ಕುಟುಂಬಗಳು ಈ ಯೋಜನೆಯನ್ನು ತಯಾರಿಸಿ ಯಶಸ್ವಿಯಾಗಿ ಅಳವಡಿಸಿದ್ದಾರೆ.

ಯೋಜನೆಯ ಪ್ರಕಾರವಾಗಿಯೇ ಕೃಷಿಯನ್ನು ಕೈಗೆತ್ತಿಕ್ಕೊಳ್ಳಲಾಗುತ್ತದೆ. ಆರ್ಥಿಕ ಸ್ಥಿರತೆಯನ್ನು ಪಡೆಯಲು ದೀರ್ಘಾಕಾಲಿಕ ಬೆಳೆಗಳ ಜೊತೆಯಲ್ಲಿಯೇ ಅಲ್ಪಕಾಲಿಕ ಬೆಳೆಗಳನ್ನು ಬೆಳೆಯಲಾಗುತ್ತಿದೆ. ವಾಣಿಜ್ಯ ಬೆಳೆಗಳಾದ ರಬ್ಬರ್, ಗೇರು, ಅಡಿಕೆ ಮತ್ತು ವೆನಿಲ್ಲಾ ಕೃಷಿಯನ್ನು ಪ್ರೋತ್ಸಾಹಿಸಲು ಯೋಜನೆಯು ಅವುಗಳ ಸಸ್ಯಗಳನ್ನು ರಿಯಾಯಿತಿ ದರದಲ್ಲಿ ಕೃಷಿಕರಿಗೆ ನೀಡಿದೆ. ಗುಡ್ಡ ಪ್ರದೇಶದಲ್ಲಿ ಬೆಳೆಯಲು ಸೂಕ್ತವಾದ ಶುಂಠಿ, ಅರಿಶಿನ, ತರಕಾರಿ ಮತ್ತಿತರ ಬೆಳೆಗಳನ್ನು ಕೂಡ ಪ್ರೋತ್ಸಾಹಿಸುತ್ತಿದೆ.

ಸಾವಯುವ ಕೃಷಿ

ಸಮೀಕ್ಷೆಗೊಳಪಟ್ಟ ಬೆಳಾಲು ಗ್ರಾಮದಲ್ಲಿ ಯೋಜನೆಯು ಸಾವಯವ ಕೃಷಿಗೆ ಆದ್ಯತೆ ನೀಡುತ್ತಲಿದ್ದು ಅದಕ್ಕೆ ಪೂರಕವಾಗಿ ಅಗತ್ಯವಿರುವ ಸ್ಥಳೀಯ ತಂತ್ರಜ್ಞಾನವನ್ನು ನೀಡುತ್ತದೆ. ಎರೆಹುಳು ಬೆಳೆಸುವುದು, ಎರೆಹುಳು ಗೊಬ್ಬರ ಮುಂತಾದವುಗಳ ವಿವರಗಳನ್ನು ಕೃಷಿಕರಿಗೆ ತಲುಪಿಸುತ್ತಿದೆ.

ಇತ್ತೀಚಿನ ದಿನಗಳಲ್ಲಿ ಗೊಬ್ಬರದ ಪೂರೈಕೆ ಸರಿಯಾಗಿ ಆಗದೇ ಗೊಬ್ಬರದ ಕೊರತೆ ಅನುಭವಿಸುತ್ತಿರುವ ರೈತರಿಗೆ ವೈಜ್ಞಾನಿಕವಾಗಿ ಎರೆಹುಳು ಗೊಬ್ಬರವನ್ನು ತಯಾರಿಸುವ ಬಗ್ಗೆ ಯೋಜನೆಯು ಮಾಹಿತಿ ನೀಡುತ್ತಿದೆ. ಸಮೀಕ್ಷೆ ನಡೆಸಿದ ಪ್ರದೇಶದಲ್ಲಿ ಒಂದು ಎರೆಹುಳು ಗೊಬ್ಬರ ತಯಾರಿಕಾ ಘಟಕವಿದ್ದು ಇಲ್ಲಿ ಗೊಬ್ಬರ ತಯಾರಿಸುತ್ತಿರುವ ಅಧಿಕ ಇಳುವರಿಯ ಫಸಲನ್ನು ಪಡೆಯುತ್ತಿದ್ದುದಲ್ಲಿ ಸಮೀಕ್ಷೆಯ ಸಂದರ್ಭದಲ್ಲಿ ಕಂಡು ಬಂದಿದೆ. ಉತ್ತಮ ತೋಟಗಳನ್ನು ಅಭಿವೃದ್ಧಿ ಪಡಿಸಲು ಉತ್ತಮ ಗುಣಮಟ್ಟದ ಬೀಜಗಳಿಗಾಗಿ SKDRDPಯು ರೈತರಿಗೆ ಸಸ್ಯ ಕ್ಷೇತ್ರ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಒತ್ತಾಸೆ ನೀಡುತ್ತಲಿದೆ. ತನ್ನದೇ ಸಸ್ಯ ಕ್ಷೇತ್ರ ಹೊಂದಿರುವ ಸಂಸ್ಥೆಯು ರೈತರಿಗೆ ಉತ್ತಮ ಬೀಜಗಳನ್ನು ವಿತರಿಸುತ್ತಿದೆ. ಹಲವಾರು ಉತ್ಪಾದಿಸುವ ಸಂಸ್ಥೆಗಳ ಜೊತೆಗೂಡಿರುವುದಲ್ಲದೆ ಸರಕಾರದ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳಿಂದ ದೊರೆಯುವ ಸೌಲಭ್ಯವನ್ನು ರೈತರಿಗೆ ತಲುಪುವಂತೆ ಮಾಡಲು ಶ್ರಮಿಸುತ್ತಿದೆ.

೫.೩. ಸಂದರ್ಶಿಸಿದ ಕ್ಷೇತ್ರ ಮತ್ತು ತಂಡಗಳ ವಿವರ

ಪ್ರಕೃತ ಅಧ್ಯಯನವು ಬೆಳ್ತಂಗಡಿ ತಾಲೂಕಿನ ಎರಡು ಗ್ರಾಮಗಳಾದ ಬೆಳಾಲು ಮತ್ತು ಉಜಿರೆಯಲ್ಲಿ ಕಾರ್ಯಾಚರಿಸುತ್ತಿರುವ ಸ್ವ ಸಹಾಯ ಸಂಘ, ಪ್ರಗತಿ ಬಂಧು ಮತ್ತು ಜ್ಞಾನ ವಿಕಾಸ ತಂಡಗಳ ಕಾರ್ಯ್ಯ ವಿಶ್ಲೇಷಣೆಯನ್ನು ಆಧಾರಿಸಿದೆ. ಉಜಿರೆ ಗ್ರಾಮವು ಬೆಳ್ತಂಗಡಿ ತಾಲೂಕಿನಿಂದ 4 ಕಿ.ಮೀ ದೂರದಲ್ಲಿದ್ದು SKDRDPಯ ಕೇಂದ್ರ ಸ್ಥಾನವಾದ ಧರ್ಮಸ್ಥಳದಿಂದ 9 ಕಿ.ಮೀ ದೂರವಿದೆ. ಅಂತೆಯೇ ಬೆಳಾಲು ಗ್ರಾಮವು ಬೆಳ್ತಂಗಡಿಯಿಂದ 14 ಕಿ.ಮೀ ದೂರದಲ್ಲಿದೆ. ಉಜಿರೆ ಗ್ರಾಮದಿಂದ ರಾಜ್ಯದ ಬೇರೆ-ಬೇರೆ ಕಡೆಗೆ ರಸ್ತೆ ಸಂಪರ್ಕ ಇರುವುದರಿಂದ ಸ್ವಲ್ಪ ಮಟ್ಟಿನ ನಗರೀಕರಣಕ್ಕೆ ಒಳಗಾಗಿದೆ.

ಪ್ರಕೃತ ಅಧ್ಯಯನಕ್ಕಾಗಿ ಉಜಿರೆ ಗ್ರಾಮದಲ್ಲಿರುವ 19 ಪ್ರಗತಿ ಬಂಧು, 33 ಸ್ವ ಸಹಾಯ ಸಂಘ ಮತ್ತು 9 ಜ್ಞಾನವಿಕಾಸ ತಂಡಗಳಿಂದ ತಲಾ 2 ಗುಂಪುಗಳನ್ನು ಆರಿಸಿಕೊಂಡಿದೆ. ಅಂತೆಯೇ ಬೆಳಾಲು

ಗ್ರಾಮದಲ್ಲಿ ಒಟ್ಟು 25 ಪ್ರಗತಿ ಬಂಧು, 30 ಸ್ವ ಸಹಾಯ ಸಂಘ ಮತ್ತು 18 ಜ್ಞಾನ ವಿಕಾಸ ತಂಡಗಳಿದ್ದು ಇವುಗಳಿಂದಲ್ಲೂ ತಲಾ ಎರಡೆರಡು ಗುಂಪುಗಳನ್ನು ಆರಿಸಿಕೊಳ್ಳಲಾಗಿದೆ.

ಉಜಿರೆ ಗ್ರಾಮದಲ್ಲಿ ಒಟ್ಟು 61 ತಂಡಗಳಿದ್ದು 527 ಜನ ಸದಸ್ಯರಿದ್ದು ಇವರಲ್ಲಿ 20 ತಂಡಗಳಲ್ಲಿ ಪುರುಷರು ಮಾತ್ರ ಇದ್ದು, ಇವರ ಸಂಖ್ಯೆ 123 ಇದೆ. ಜೊತೆಗೆ 37 ತಂಡಗಳು ಮಹಿಳೆಯರದ್ದಾಗಿದ್ದು 380 ಜನರಿದ್ದಾರೆ. ಒಟ್ಟು 4 ತಂಡಗಳಲ್ಲಿ ಮಹಿಳೆಯರು ಮತ್ತು ಪುರುಷರು ಇಬ್ಬರೂ ಇದ್ದು ಇವರ ಒಟ್ಟು ಸಂಖ್ಯೆ 24 ಆಗಿದೆ. ಫೆಬ್ರವರಿ 2008 ವರೆಗೆ ಇಲ್ಲಿಯ ಪ್ರಗತಿ ಬಂಧು, ಸ್ವ ಸಹಾಯ ಮತ್ತು ಜ್ಞಾನ ವಿಕಾಸದ ಸದಸ್ಯರುಗಳು ಕಿರುಹಣಕಾಸಿನ ಮೂಲಕ ಒಟ್ಟು 96, 26,150 ರೂಪಾಯಿ ಸಾಲ ಪಡೆದಿದ್ದಾರೆ. ಇದರಲ್ಲಿ 43, 57,000 ರೂಪಾಯಿ ಮರುಪಾವತಿಯಾಗಿದ್ದು ಉಳಿದ 52, 69,000 ಮರುಪಾವತಿಯಾಗಬೇಕಾಗಿದೆ.

ಬೆಳಾಲು ಗ್ರಾಮದಲ್ಲಿ ಒಟ್ಟು 73 ತಂಡಗಳಿದ್ದು 598 ಸದಸ್ಯರಿದ್ದಾರೆ. ಫೆಬ್ರವರಿ 2008 ವರೆಗೆ ಈ 73 ತಂಡಗಳ ಸದಸ್ಯರು ಒಟ್ಟು 82, 17,000 ರೂಪಾಯಿ ಸಾಲ ಪಡೆದಿದ್ದಾರೆ. ಇದರಲ್ಲಿ 37, 58,000 ರೂಪಾಯಿ ಮರುಪಾವತಿಯಾಗಿದ್ದು ಉಳಿದ 44, 59,000 ಮರುಪಾವತಿಯಾಗಬೇಕಾಗಿದೆ.

ಕೋಷಕ. 5.1: ಬೆಳಾಲು ಮತ್ತು ಉಜಿರೆ ಗ್ರಾಮದಲ್ಲಿ ಸಂದರ್ಶಿಸಿದ ತಂಡಗಳು.

ಕ್ರಮ ಸಂಖ್ಯೆ	ಸ್ವ ಸಹಾಯ ಸಂಘಗಳು	ಸ್ಥಳ
I	ತಂಡಗಳ ಹೆಸರು	
1 2	ಜ್ಯೋತಿ ನಗರ ಹೊಸಕಿರಣ	ಬೆಳಾಲು
3 4	ಪವಿತ್ರ ಸೌಭಾಗ್ಯ	ಉಜಿರೆ


ಕ್ರಮ ಸಂಖ್ಯೆ	ಜ್ಞಾನ ವಿಕಾಸ	ಸ್ಥಳ
II	ತಂಡಗಳ ಹೆಸರು	
1 2	ನಾಗಶ್ರೀ ಜ್ಞಾನ ಶ್ರೀ	ಬೆಳಾಲು
3 4	ಶ್ರೀ ರಕ್ಷಾ ಪ್ರಿಯದರ್ಶಿನಿ	ಉಜಿರೆ

ಕ್ರಮ ಸಂಖ್ಯೆ	ಪ್ರಗತಿಬಂಧು	ಸ್ಥಳ
III	ತಂಡಗಳ ಹೆಸರು	
1 2	ಜ್ಯೋತಿ ನಗರ ಮುಂದಾಲು	ಬೆಳಾಲು
3 4	ಕೆರೆಬೈಲು ಸೌಭಾಗ್ಯ	ಉಜಿರೆ

ಸಂದರ್ಶನಕ್ಕೆ ಆಯ್ಕೆ ಮಾಡಿದ 75 ಸದಸ್ಯರಲ್ಲಿ 62 ಜನ ಸಾಲ ಸೌಲಭ್ಯ ಪಡೆದ ತಮ್ಮ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ತಂಡಗಳ ಸದಸ್ಯರಾಗಿರುತ್ತಾರೆ. ಅವರ ಪಾಲಿಗೆ ಅದು ಅನಿವಾರ್ಯ ಮತ್ತು ಅನೀರಿಕ್ಷಿತವಾಗಿ ದೊರೆತ ಸೌಭಾಗ್ಯ ಈ ಬಗ್ಗೆ ಸದಸ್ಯರಿಗೆ ತುಂಬಾ ತೃಪ್ತಿ ಇದೆ. ತಮ್ಮ ಮೌಲ್ಯವನ್ನು ಸ್ವ ಸಹಾಯ ಮತ್ತು ಪರಸ್ಪರ ಸಹಾಯದ ಮೂಲಕ ಉತ್ತರಿಸಬೇಕೆಂದು ಮಹತ್ವಕಾಂಕ್ಷೆಯಿದೆ.

ಜಾತಿವಾರು ವಿಂಗಡಣೆ: – 5.3.1

ಸಮೀಕ್ಷೆ ನಡೆಸಿದ ಪ್ರದೇಶದಲ್ಲಿ ಸಾಮಾನ್ಯ ವರ್ಗದ ಜನರದ್ದೇ ಮೇಲುಗೈ. ಸಮೀಕ್ಷೆಗೊಳಪಟ್ಟವರಲ್ಲಿ 88% ಜನ ಸಾಮಾನ್ಯ ವರ್ಗದವರು ಉಳಿದಂತೆ ಮುಸ್ಲಿಂ 5.33% ಹಿಂದುಳಿದವರು 4% ಮತ್ತು ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವರು 2.66% ಅಧ್ಯಯನದ ಸಮಯದಲ್ಲಿ ಗಮನಕ್ಕೆ ಬಂದ ಒಂದು ಮುಖ್ಯ ಅಂಶ ಎಂದರೆ ಇಲ್ಲಿ ಜಾತಿ–ಧರ್ಮಗಳ ಹೆಸರಲ್ಲಿ ಜನರು ಬೇರೆ–ಬೇರೆಯಾಗಿ ಇರಲು ತಯಾರಿಲ್ಲ. ಬದಲಾಗಿ ಎಲ್ಲರೂ ಒಟ್ಟಾಗಿ ಆರ್ಥಿಕ ಪ್ರಗತಿ ಸಾಧಿಸಲು ಬಹಳ ಉತ್ಸುಕರಾಗಿದ್ದಾರೆ. ಇಲ್ಲಿ ಜಾತಿ



ಅಥವಾ ಧರ್ಮದ ಹೆಸರಲ್ಲಿ ಕಚ್ಚಾದದೇ ಒಗ್ಗಟ್ಟಾಗಿ ಆರ್ಥಿಕ ಪ್ರಗತಿಗೆ ಕೈ ಜೋಡಿಸಿರುವುದು ನಿಜಕ್ಕೂ ಶ್ಲಾಘನೀಯ.

ಸದಸ್ಯರ ವಯೋಮಾನ: – ಟಿ. ಕ. ೨

ಸಂದರ್ಶನಕ್ಕೊಳಪಟ್ಟ ಸದಸ್ಯರ ವಯೋಮಾನದ ವಿವರ

ವಯಸ್ಸು	ಪುರುಷರು	ಮಹಿಳೆಯರು	ಒಟ್ಟು
20-30	8	12	20
30-40	8	8	16
40-50	11	13	24
50-60	13	2	15
	40	35	75

20 ರಿಂದ 30 ವರ್ಷದ ಸದಸ್ಯರುಗಳಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆಯಲ್ಲಿ ಜಾಸ್ತಿ ಇದೆ. ಸಾಮಾನ್ಯವಾಗಿ ಯುವಕರು ಈ ಪ್ರಾಯದಲ್ಲಿ ಜವಾಬ್ದಾರಿ ತೆಗೆದುಕೊಳ್ಳದೇ ವಿನಾಕಾರಣ ಸಮಯ ಹಾಳು ಮಾಡುತಿರುತ್ತಾರೆ. ಆದುದರಿಂದ ಬಡ ಮತ್ತು ನಿರುದ್ಯೋಗಿ ಯುವಕರುಗಳನ್ನು ಯೋಜನೆಯ ಮಹತ್ವವನ್ನು ತಿಳಿಸಿಕೊಟ್ಟು ಅವರನ್ನು ಸಂಘಟನೆಯ ಸದಸ್ಯರನ್ನಾಗಿಸುವ ಗುರುತರವಾದ ಜವಾಬ್ದಾರಿ ಸಂಘಟನೆಯ ಕಾರ್ಯಕರ್ತರ ಮೇಲೆ ಇದೆ.

ಗ್ರಾಮೀಣ ಪ್ರದೇಶದ ಬಡಮಹಿಳೆಯರು ಮುಖ್ಯವಾಗಿ ತಮ್ಮ ಜೀವನೋಪಾಯಕ್ಕೆ ಬೀಡಿ ಉದ್ಯಮವನ್ನು ಅವಲಂಬಿಸಿಕೊಂಡಿದ್ದರು. ಆದರೆ ಸ್ವ ಸಹಾಯ ಸಂಘ, ಮತ್ತು ಜ್ಞಾನವಿಕಾಸ

ಕಾರ್ಯಕ್ರಮಗಳು ಮಹಿಳೆಯರಲ್ಲಿ ನವನವೀನ ಚಿಂತನೆಯನ್ನು ಹುಟ್ಟುಹಾಕಿದೆ. ಜೊತೆಗೆ ಶಿಸ್ತನ್ನು ಮೂಡಿಸಿದೆ. ಆರ್ಥಿಕವಾಗಿ ಸ್ವಾವಲಂಬಿ ಜೀವನವನ್ನು ನಡೆಸಲು ಸಹಕಾರಿಯಾಗಿದೆ.

ಸಂದರ್ಶನದ ಸಮಯದಲ್ಲಿ ಗಮನಕ್ಕೆ ಬಂದ ಇನ್ನೊಂದು ಮುಖ್ಯ ಅಂಶವೆಂದರೆ ಪುರುಷರು ಪ್ರಾಯವಾಗುತ್ತಾ ಹೋದಂತೆ ಸಂಘ ಜೀವಿಗಳಾಗಿ ಬದುಕಲು ಉತ್ಸುಕರಾದದ್ದು ಕಂಡುಬಂತು. ಇದಕ್ಕೆ ಪುಷ್ಟಿಕೊಡುವಂತೆ 50 ರಿಂದ 60 ಪ್ರಾಯದ ಪುರುಷರ ಸಂಖ್ಯೆ ಅತೀ ಹೆಚ್ಚಾಗಿದೇ ಜೊತೆಗೆ ಮಹಿಳೆಯರಲ್ಲೇ ಸಂಘಟನೆಗಳಿಂದ ಹೊರ ಬಂದು ತಮ್ಮ ಮನೆ, ಮಕ್ಕಳು, ಮೊಮಕ್ಕಳೊಂದಿಗೆ ನೆಮ್ಮದಿಯಾಗಿರಲು ಬಯಸುತ್ತಿದ್ದಾರೆ. ಇದಕ್ಕೆ ಅವರೇ ಹೇಳುವಂತೆ ಮುಖ್ಯ ಕಾರಣ ಆರೋಗ್ಯದ ಸಮಸ್ಯೆ.

ಸದಸ್ಯರ ಶಿಕ್ಷಣ ಮಟ್ಟ:- 5. 3. 3

ಶಿಕ್ಷಣ ಪ್ರಮಾಣ	ಪುರುಷರು	ಮಹಿಳೆಯರು	ಒಟ್ಟು	ಶೇಕಡಾ
ಅಶಿಕ್ಷಿತರು	12	16	28	37
ಪ್ರಾಥಮಿಕ	11	8	19	25
ಪ್ರೌಢಶಿಕ್ಷಣ	15	9	24	32
ಕಾಲೇಜು	2	2	4	5
	40	35	75	100

ರಾಜ್ಯ ಸರಕಾರ ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣ ಮಟ್ಟ ಹೆಚ್ಚಿಸಲು ಕೈಗೊಂಡಿರುವ ಕಡ್ಡಾಯ ಶಿಕ್ಷಣ ಅಭಿಯಾನ, ಬಡಮಕ್ಕಳಿಗಾಗಿ ರೂಪಿಸಿರುವ ಉಚಿತ ಬೈಸಿಕಲ್ಲು ವಿತರಣೆ ಮತ್ತು ಉಚಿತ ಬಿಸಿಯೂಟ ಯೋಜನೆಗಳಿಂದಾಗಿ ಗ್ರಾಮೀಣ ಪ್ರದೇಶದಲ್ಲೂ ಶಿಕ್ಷಣ ಮಟ್ಟ ಹೆಚ್ಚಾಗುತ್ತಿದೆ.

ದುರಾದೃಷ್ಟಶಾತ್ ಗ್ರಾಮೀಣ ಪ್ರದೇಶದ ಜನರ ಅಜ್ಞಾನ ಮತ್ತು ಅಧಿಕಾರಿಗಳ ಇಚ್ಛಾಶಕ್ತಿಯಿಂದಾಗಿ ಸರಕಾರದ ಮಹಾತ್ವಾಕಾಂಕ್ಷೆಯ ವಯಸ್ಕರ ಶಿಕ್ಷಣ ನಿರೀಕ್ಷಿತ ಯಶಸ್ಸನ್ನು ಕಂಡಿಲ್ಲ. ಇದಕ್ಕೆ ಪುಷ್ಠಿಕೊಡುವಂತೆ ಸಮೀಕ್ಷಾ ಪ್ರದೇಶದಲ್ಲಿ ಶೇಕಡಾ 37 ಜನ ಅನಕ್ಷರಸ್ಥರಿದ್ದಾರೆ. ಇದರಲ್ಲಿ ಕೆಲವರಿಗೆ ತಮ್ಮ ಹೆಸರನ್ನು ಬರೆಯಲು ಬರುವುದಿಲ್ಲ. ಅನಕ್ಷರಸ್ಥ ಪುರುಷರ ಪ್ರಮಾಣ 16% ಹಾಗೆಯೇ ಅನಕ್ಷರಸ್ಥ ಮಹಿಳೆಯರ ಪ್ರಮಾಣ 21% ಇದೆ.

ಸಂದರ್ಶನದ ಕ್ಷೇತ್ರದಲ್ಲಿ ಮಹಿಳೆಯರ ಶಿಕ್ಷಣ ಮಟ್ಟ ಕಡಿಮೆ ಇದೆ. ಆದರೆ ಸ್ವ ಸಹಾಯ ಸಂಘದ ಸದಸ್ಯರುಗಳ ಮಕ್ಕಳ ಶಿಕ್ಷಣದಮಟ್ಟ 100% ಇರುವುದು ನಿಜಕ್ಕೂ ಸಂತಸದ ವಿಷಯವಾಗಿದೆ.

ಸದಸ್ಯರ ಭೂ ಸಂಪನ್ಮೂಲದ ವಿವರ:- 5. 3. 4

ಭೂರಹಿತ ಕೃಷಿ ಕಾರ್ಮಿಕರು	2%
1/2 ಎಕರೆಗಿಂತ ಕಡಿಮೆ ಭೂಮಿ ಹೊಂದಿದವರು	22%
1/2 ದಿಂದ 2 ಎಕರೆ	76%
2 ಎಕರೆಗಿಂತ ಮೇಲ್ಪಟ್ಟು	2.1%
ಸರಾಸರಿ ಭೂಮಿ	1.99% ಸೆಂಟ್ಸ್

ಸಮೀಕ್ಷೆಗೊಳಪಟ್ಟ ಪ್ರದೇಶದಲ್ಲಿ ಸದಸ್ಯರುಗಳು ಸರಾಸರಿಯಾಗಿ 1.99 ಸೆಂಟ್ಸ್ ಜಾಗ ಹೊಂದಿದ್ದಾರೆ. ಇಲ್ಲಿ ಭೂರಹಿತ ಕೃಷಿ ಕಾರ್ಮಿಕರು 2.1 ಮತ್ತು ಳ 1/2 ಎಕರೆಗಿಂತ ಕಡಿಮೆ ಜಮೀನು ಹೊಂದಿದ 22% ಜನ ತಮ್ಮ ಜೀವನನೋಪಾಯಕ್ಕಾಗಿ ಇತರರ ಜಮೀನುಗಳಲ್ಲಿ ದಿನಗೂಲಿಗೆ ಹೋಗುತ್ತಿದ್ದಾರೆ. 1/2 ಎಕರೆಯಿಂದ ಮೇಲ್ಪಟ್ಟು 78.1% ಜನ ಇದ್ದು ಈ ಜನರು ತಮ್ಮ ಕೃಷಿಭೂಮಿಯಿಂದಾಗಿ ಜೀವನ ನಡೆಸುತ್ತಿದ್ದಾರೆ. ಭೂರಹಿತ ಮತ್ತು 1/2 ಎಕರೆಗಿಂತ ಕಡಿಮೆ ಜಮೀನು ಹೊಂದಿದವರನ್ನು ಸ್ವ ಉದ್ಯೋಗ ಕೈಗೊಳ್ಳುವಂತೆ ಪ್ರೇರೆಪಿಸಿ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲು ಸ್ವ ಸಹಾಯ ಸಂಘಗಳು ಹೆಚ್ಚಿನ ಒತ್ತನ್ನು ನೀಡಬೇಕಾಗಿದೆ.

ಪಿತ್ರಾರ್ಜಿತ ಆಸ್ತಿ ಪಡೆದವರು	54%
ಸ್ವ ಪ್ರಯತ್ನದಿಂದ	26%
ಸರಕಾರದ ವಿವಿಧ ಯೋಜನೆಗಳಿಂದ	18%
ಅಕ್ರಮಸಕ್ರಮದಿಂದ	2%

ಕ್ಷೇತ್ರಾಧ್ಯೆಯನ ಸಂದರ್ಭದಲ್ಲಿ 54% ಜನರು ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಅನುಭವಿಸುತ್ತಾ ತಮ್ಮ ಜೀವನವನ್ನು ನಡೆಸುತ್ತಿರುವುದು ಕಂಡುಬಂತು. ಉಳಿದಂತೆ 26% ಜನ ತಮ್ಮ ಸ್ವ

ಪ್ರಯತ್ನದಿಂದ ಜಮೀನು ಮಾಡಿ ಕೊಂಡಿದ್ದಾರೆ 18% ಜನಕ್ಕೆ ಸರಕಾರವೇ ವಿವಿಧ ಯೋಜನೆಗಳ ಮೂಲಕ ಭೂಮಿಯನ್ನು ನೀಡಿದೆ. 2% ಜನ ಅಕ್ರಮಸಕ್ರಮದಲ್ಲಿ ಜಮೀನು ಮಾಡಿಕೊಂಡಿದ್ದಾರೆ.

ಯೋಜನೆಯ ಸದಸ್ಯರಾಗುವ ಮೊದಲು ಬಹಳಷ್ಟು ಜನ ತಮ್ಮ ಕೃಷಿ ಭೂಮಿಯಲ್ಲಿ ಹಾಳುಬಿಟ್ಟು ಇತರ ಜಮೀನುಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದುದು ತಿಳಿದುಬಂತು. ಯೋಜನೆಯ ಸದಸ್ಯರಾದ ಮೇಲೆ ಪ್ರಗತಿಬಂಧು ಯೋಜನೆಯನ್ನು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ.

ಮೂಲಭೂತ ಸೌಕರ್ಯಗಳು:– ಃ. ಃ. ಃ

ಅರ್ಥ: – ಮೂಲಭೂತ ಸೌಕರ್ಯಗಳು ಎಂದರೆ ಅರ್ಥವ್ಯವಸ್ಥೆಗೆ ಅಗತ್ಯವಿರುವ ಮೂಲಾಧಾರ ಸೇವೆಗಳನ್ನು ಒದಗಿಸುವ ಚಟುವಟಿಕೆಗಳು ಎಂದರ್ಥ. ಅರ್ಥವ್ಯವಸ್ಥೆಯ ಅಭಿವೃದ್ಧಿಗೆ ಹಲವಾರು ಮೂಲ ಸೌಲಭ್ಯಗಳು ಅವಶ್ಯಕವಾಗಿರುತ್ತದೆ. ಈ ಸೌಲಭ್ಯಗಳ ವ್ಯವಸ್ಥೆಯು ವಿಕಸನಗೊಂಡಾಗ ಮತ್ತು ಅವು ಕೊರತೆಯಿಲ್ಲದಂತೆ ಲಭಿಸಿದಾಗ ಮಾತ್ರ ಆರ್ಥಿಕಾಭಿವೃದ್ಧಿಯ ಸಾಧನೆ ಸಾಧ್ಯವಾಗುತ್ತದೆ.

ನೀರಾವರಿ ಸೌಕರ್ಯ:–ಸಮೀಕ್ಷಾ ಪ್ರದೇಶದಲ್ಲಿ ಶೇಕಡಾ 72ರಷ್ಟು ಜನ ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ ಸಂದರ್ಶಿಸಿದ 75 ಜನರಲ್ಲಿ 34 ಜನ ಯೋಜನೆಯ ಸದಸ್ಯರಾಗುವ ಮೊದಲು ಕೃಷಿಗೆ ಮಾತ್ರವಲ್ಲದೇ ಕುಡಿಯುವ ನೀರಿಗಾಗಿಯೂ ಇತರರನ್ನು ಅವಲಂಬಿಸಿದ್ದಾರೆ. ಇದು ನಿಜವಾಗಿಯೂ ತ್ರಾಸದಾಯಕ ಕೆಲಸವಾಗಿತ್ತು. ಯೋಜನೆಯು ಸದಸ್ಯರುಗಳಾದ ಮೇಲೆ 90.66% ಜನರು ಅಂದರೆ 69 ಜನರು ತಮ್ಮ ಜಾಗದಲ್ಲಿ ಕೆರೆ ಅಥವಾ ಬಾವಿಗಳನ್ನು ನಿರ್ಮಿಸಿಕೊಂಡು ಸ್ವಾವಲಂಬಿಗಳಾಗಿ ನೀರಿನ ಸೌಲಭ್ಯ ಪಡೆದುಕೊಂಡಿದ್ದಾರೆ. 34 ಜನ ಬಾವಿಯನ್ನು ನಿರ್ಮಿಸಿಕೊಂಡಿದ್ದಾರೆ. ಉಳಿದಂತೆ 8% ಜನ ಅಂದರೆ 6 ಜನ ಪಂಚಾಯತಿಗಳ ಮೂಲಕ ಹಾಕಲ್ಪಟ್ಟ ನಳ್ಳಿ ನೀರಿನ ಸೌಲಭ್ಯವನ್ನು ಆಶ್ರಯಿಸಿಕೊಂಡಿದ್ದಾರೆ.

ಅಡುಗೆ ಮಾಡುವ ರೀತಿ:–

ಸಂದರ್ಶಿಸಿದ ಪ್ರದೇಶದಲ್ಲಿ ಈ ಕೆಳಗಿನ ಸಾಧನಗಳ ಮೂಲಕ ಸದಸ್ಯರುಗಳು ಅಡುಗೆಯನ್ನು ತಯಾರಿಸುತ್ತಿದ್ದಾರೆ.

ಅಡುಗೆ ತಯಾರಿಗೆ ಬಳಸುವ ಸಾಧನ	ಶೇಕಡಾ
ಕಟ್ಟಿಗೆ	84%
ಗೋಬರ್ ಗ್ಯಾಸ್	9.33%
ಸೀಮೆ ಎಣ್ಣೆ ಸ್ಟವ್	2.66%
ಇತರ	2%

ಸಂದರ್ಶನಕ್ಕೆ ಆಯ್ದು ಬೆಳಾಲು ಮತ್ತು ಉಜಿರೆ ಗ್ರಾಮಗಳು ಗ್ರಾಮೀಣ ಪ್ರದೇಶಗಳಾದ್ದರಿಂದ ಅರಣ್ಯ ಪ್ರದೇಶ ಅತ್ಯಧಿಕವಾಗಿದೆ. ಹೀಗಾಗಿ ಇಲ್ಲಿಯ ಬಹುಳಷ್ಟು ಜನರು ಕಟ್ಟಿಗೆಯನ್ನೇ ಉರುವಲಾಗಿ ಬಳಸುತ್ತಿದ್ದಾರೆ. ಸಂದರ್ಶಿಸಿದ ಸದಸ್ಯರುಗಳಲ್ಲಿ ಶೇಕಡಾ 86% ಜನರು ಅಂದರೆ 66 ಮನೆಗಳಲ್ಲಿ ಇಂದಿಗೂ ಕಟ್ಟಿಗೆಯನ್ನೇ ಅಡುಗೆ ತಯಾರಿಗೆ ಬಳಸುತ್ತಿದ್ದಾರೆ. ಉಳಿದಂತೆ 9.33% ಜನ ಅಂದರೆ 7 ಮನೆಗಳಲ್ಲಿ ದನದ ಸಗಣಿ ಮತ್ತು ಮರದ ಎಲೆಗಳನ್ನು ಉಪಯೋಗಿಸಿ ಗೋಬರ್‌ಗ್ಯಾಸ್ ತಯಾರಿಸಿ ಅಡುಗೆಯನ್ನು ತಯಾರಿಸುತ್ತಿದ್ದಾರೆ. ಮತ್ತು ಗೋಬರ್‌ಗ್ಯಾಸ್ ನಿರ್ಮಾಣಕ್ಕೆ ದನದ ಸಗಣಿ ಅತ್ಯಗತ್ಯವಾಗಿರುವುದರಿಂದ ಇಲ್ಲಿಯ ಜನರು ದನಗಳನ್ನು ಸಾಕುವ ಮೂಲಕ ಪರೋಕ್ಷವಾಗಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುತ್ತಿದ್ದಾರೆ ಇದಲ್ಲದೇ ಗೋಬರ್‌ಗ್ಯಾಸ್ ನಿರ್ಮಾಣಕ್ಕೆ ಕೃಷಿಗೆ ಬೇಕಾದ ಅತ್ಯುತ್ತಮ ಸಾವಯುವ ಗೊಬ್ಬರವೂ ಸೇರಿದಂತೆ ಹತ್ತು ಹಲವು ಪ್ರಯೋಜನಗಳಿರುವುದರಿಂದ ಸರಕಾರದ ಮೂಲಕ ಗೋಬರ್‌ಗ್ಯಾಸ್ ನಿರ್ಮಾಣಕ್ಕೆ ಧನಸಹಾಯವು ದೊರೆಯುತ್ತದೆ. ಉಳಿದಂತೆ 2.66% ಜನ ಅಂದರೆ 2 ಮನೆಗಳಲ್ಲಿ ಸೀಮೆ ಎಣ್ಣೆ ಸ್ಟವ್ ಬಳಸಿ ಅಡುಗೆಯನ್ನು ತಯಾರಿಸುತ್ತಿದ್ದಾರೆ.

ಮನೆ ಮತ್ತು ಶೌಚಾಲಯ: – ಸಂದರ್ಶನಕ್ಕೊಳಪಟ್ಟ ಎಲ್ಲಾ ಸದಸ್ಯರುಗಳು ಸ್ವಂತ ಮನೆಗಳನ್ನು ಹೊಂದಿದ್ದಾರೆ. ಇವರಲ್ಲಿ ಶೇ 65% ರಷ್ಟು ಜನ ತಮ್ಮ ಹಿರಿಯರಿಂದ ಬಂದ ಮನೆಯಲ್ಲಿ ವಾಸಿಸುತ್ತಿದ್ದಾರೆ ಉಳಿದಂತೆ ಶೇಕಡಾ 3ರಷ್ಟು ಜನ ತಮ್ಮ ಸ್ವ ಪ್ರಯತ್ನದಿಂದ ಮನೆ ನಿರ್ಮಿಸಿಕೊಂಡಿದ್ದಾರೆ. ಆದರೆ ಬಹಳಷ್ಟು ಸದಸ್ಯರ ಮನೆಗಳು ಶಿಥಿಲಾವ್ಯವಸ್ಥೆಯಲ್ಲಿದ್ದು ಜೋರಾದ ಗಾಳಿ–ಮಳೆಗೆ ಬಿದ್ದು ಬಿಡುವ ಸ್ಥಿತಿಯಲ್ಲಿದೆ. ಯೋಜನೆಯ ಕಾರ್ಯಕರ್ತರಿಗೆ, ಯೋಜನೆಯ ಸದಸ್ಯರಿಗೆ ಗೃಹ ನಿರ್ಮಾಣ ಅಥವಾ ರಿಪೇರಿಗೆ ಸಾಲ ದೊರಕಿಸಿ ಕೊಟ್ಟೂ ಸದಸ್ಯರ ಜೀವನ ಮಟ್ಟವನ್ನು ಉತ್ತಮಗೋಳೀಸಬೇಕಾದ ಜವಬ್ದಾರಿಯಿದೆ.


ಸಮೀಕ್ಷಾ ಪ್ರದೇಶದಲ್ಲಿ ಯೋಜನೆಗೆ ಸೇರುವ ಮೊದಲು ಕೇವಲ 42% ಜನರಿಗೆ ಮಾತ್ರ ಶೌಚಾಲಯದ ವ್ಯವಸ್ಥೆ ಇತ್ತು. ಆದರೆ ಯೋಜನೆಯ ಸದಸ್ಯರಾದ ಮೇಲೆ ಜನರಲ್ಲಿ ಜಾಗೃತಿ ಉಂಟಾಗಿ "ಶೌಚಾಲಯ ನಿರ್ಮಿಸಿರಿ: ರೋಗಗಳಿಂದ ದೂರವಿರಿ" ಎಂಬ ಮಾತನ್ನು ಅರ್ಥಮಾದಿಕೊಂಡು ಪ್ರತಿಯೊಂದು ಮನೆಯಲ್ಲಿಯೂ ಶೌಚಾಲಯವನ್ನೂ ನಿರ್ಮಿಸಿಕೊಂಡಿದ್ದಾರೆ. ಇದಕ್ಕೆ ಸರಕಾರದ "SGSY" ಯೋಜನೆಯಿಂದಲೂ ಸಹಕಾರ ದೊರೆತಿದೆ.

ವಿದ್ಯುತ್:- ಯೋಜನೆಗೆ ಸೇರುವ ಮೊದಲು ಸಮಿಕ್ಷೆ ನಡೆಸಿದ ಜನರಲ್ಲಿ 70% ಜನರಿಗೆ 70% ಜನರಿಗೆ ಮಾತ್ರ ವಿದ್ಯುತ್ ಸೌಕರ್ಯ ಇತ್ತು. ಆದರೆ ಸಂಘಟನೆಯ ಸದಸ್ಯರುಗಳಾದ ಮೇಲೆ 96% ಜನ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ. ಈ 96% ಜನರಲ್ಲಿ ಸರಕಾರವೇ ಗುರುತಿಸಿದ ಬಡತನದ ರೇಖೆಯ ಕೆಳಗಿರುವ 21% ಜನ "ಭಾಗ್ಯ ಜ್ಯೋತಿ" ಯೋಜನೆಯ ಸದುಪಯೋಗ ಪಡೆದುಕೊಂಡಿದ್ದಾರೆ.

ರಸ್ತೆ ಮತ್ತು ದೂರವಾಣಿ ಸೌಲಭ್ಯಕ್ಕೆ ರೇಡಿಯೋ:- ಕ್ಷೇತ್ರಾಧ್ಯಯನ ನಡೆಸಿದ ಬೆಳಾಲು ಮತ್ತು ಉಜಿರೆ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಗಳು ಉತ್ತಮ ಮಟ್ಟದಲ್ಲಿವೆ. ಬೆಳಾಲು ಗ್ರಾಮದಲ್ಲಿರುವ ಒಳ ರಸ್ತೆಗಳು ಮುಖ್ಯ ಮತ್ತು ಜಲ್ಲಿ ಕಲ್ಲುಗಳನ್ನು ಹಾಕಿದ ರಸ್ತೆಗಳಾಗಿದ್ದರು ಉತ್ತಮವಾದ ಸ್ಥಿತಿಯಲ್ಲಿಯೇ ಇದೆ: ಇಲ್ಲಿನ ಹೆಚ್ಚಿನ ಜನರು ತಮ್ಮ ಓಡಾಟಕ್ಕೆ ದ್ವಿ ಚಕ್ರವಾಹನಗಳನ್ನು ಬಳಸುತ್ತಿದ್ದಾರೆ. ಜೊತೆಗೆ 83% ಜನರ ಮನೆಗಳಲ್ಲಿ ದೂರವಾಣಿ ಸೌಲಭ್ಯವಿದೆ. 94% ಜನರ ಮನೆಯಲ್ಲಿ ರೇಡಿಯೋ ಇದ್ದು ಇದರ ಮೂಲಕ ಆರೋಗ್ಯವಾಣಿ, ಕೃಷಿ ವಾರ್ತೆಗಳನ್ನು ಆಲಿಸಿಕೊಂಡು ತಮ್ಮ ಜೀವನ ಮಟ್ಟವನ್ನು ಉತ್ತಮಗೊಳಿಸಿಕೊಳ್ಳುತ್ತಿದ್ದವುದು ಸಂದರ್ಶನದ ಸಂದರ್ಭದಲ್ಲಿ ತಿಳಿದುಬಂತು.

ಗುಂಪುಗಳಿಗೆ ಸೇರಲು ಕಾರಣ ಮತ್ತು ಕಾರಣರಾದವರು:- ಪ. ೬

ಸ್ವ ಸಹಾಯ ಗುಂಪುಗಳನ್ನು ಸೇರಲು ಕಾರಣ	ಶೇಕಡಾ (%)
ಸಾಲ ಸೌಲಭ್ಯ ಪಡೆಯಲು	84%
ಉಳಿತಾಯ ಮಾಡಲು	8%
ವ್ಯಕ್ತಿತ್ವ ವಿಕಸನ ಮತ್ತು ತರಬೇತಿ ಪಡೆಯಲು	5.33%
ಇತರ ಕಾರಣಗಳಿಗಾಗಿ	2%



ಸಂದರ್ಶಿಸಿದ ಸದಸ್ಯರುಗಳಲ್ಲಿ 84% ಜನರು ಸಾಲಸೌಲಭ್ಯಕ್ಕಾಗಿ ಸ್ವ ಸಹಾಯ ಸಂಘ ಸೇರಿರುವುದು ಕ್ಷೇತ್ರಾಧ್ಯಯನದಲ್ಲಿ ತಿಳಿದುಬಂದ ಅಂಶ. ಸ್ವ ಸಹಾಯ ಸಂಘ ಸೇರುವ ಮೊದಲು ಇವರು ಲೇವಾದೇವಿದಾರರಲ್ಲಿ ಸ್ಥಳೀಯ ವ್ಯಾಪಾರಸ್ಥರಲ್ಲಿ ಸಾಲ ಪಡೆಯುತ್ತಿದ್ದರು. ಈ ರೀತಿಯ ಸಾಲಕ್ಕೆ ಬಡ್ಡಿಯು ಅಧಿಕ ಪ್ರಮಾಣದಲ್ಲಿರುತ್ತಿತ್ತು. ಭೂ ಮಾಲಿಕರಿಂದ ಸಾಲ ಪಡೆದರೆ ಕೆಲವು ಸಂದರ್ಭಗಳಲ್ಲಿ ಅವರ ಗದ್ದೆ, ತೋಟ, ಮನೆಯಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯತೆ ಇತ್ತು. ಬಹಳಷ್ಟು ಸಂದರ್ಭಗಳಲ್ಲಿ ಕೃಷಿ ಕಾರ್ಮಿಕರು ಮತ್ತು ಬಡವರಿಗೆ ಬ್ಯಾಂಕುಗಳು ಅಥವಾ ಸಹಕಾರಿ ಬ್ಯಾಂಕುಗಳಿಂದ ಸಾಲ ಪಡೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ಮುಖ್ಯ ಕಾರಣ ಬ್ಯಾಂಕಿಗೆ ಭದ್ರತೆಯಾಗಿ ನೀಡಲು ಅವರ ಬಳಿ ಯಾವುದೇ ಬೆಲೆ ಬಾಳುವ ವಸ್ತುಗಳಿರುತ್ತಿರಲಿಲ್ಲ.

ಇಂತಹ ಸಂದರ್ಭದಲ್ಲಿ ಜನರಲ್ಲಿ ಉಳಿತಾಯದ ಮಹತ್ವವನ್ನು ತಿಳಿಸಿಕೊಟ್ಟು ಅವರಲ್ಲಿಯೇ ಹಣದ ಉಳಿತಾಯ ಮೂಡಿಸಿ, ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ತೆರೆಯಿರಿ, ಬ್ಯಾಂಕುಗಳಿಂದಲೇ ಅಲ್ಪ ಪ್ರಮಾಣದ ಬಡ್ಡಿಗೆ ಸಾಲ ಸೌಲಭ್ಯ ದೊರೆಯುವಂತೆ ಮಾಡುವ ಯೋಜನೆಯ ಕಾರ್ಯ ವೈಖರಿ ಬಡಜನರನ್ನು ಬಹಳವಾಗಿ ಆಕರ್ಷಿಸಿದೆ. ಸಮೀಕ್ಷಾ ಪ್ರದೇಶದಲ್ಲಿ 8% ಜನ ತಮ್ಮ ಉಳಿತಾಯ ಖಾತೆಯನ್ನು ತೆರೆಯುವ ಸಲುವಾಗಿಯೇ ಸಂಘಗಳಲ್ಲಿ ಸದಸ್ಯರಾಗಿದ್ದಾರೆ. ವ್ಯಕ್ತಿತ್ವ ವಿಕಾಸನ ಮತ್ತು ವಿವಿಧ ರೀತಿಯ ತರಬೇತಿ ಪಡೆಯಲು 5.33% ಜನ ಸೇರ್ಪಡೆಗೊಂಡಿದ್ದರೆ ಉಳಿದ 2% ಜನರು ಇತರ ಜನರ ಗುಂಪು ಸೇರಿ ಸಾಧಿಸಿದ ಪ್ರಗತಿಯನ್ನು ನೋಡಿ ಸಂಘಟನೆಯಲ್ಲಿ ಸದಸ್ಯರುಗಳಾಗಿದ್ದಾರೆ.

ಯೋಜನೆಯ ಸದಸ್ಯರಾಗಲು ಕಾರಣರಾದವರು:-

ಸೇರಲು ಕಾರಣ	ಶೇಕಡಾ (%)
ಕಾರ್ಯಕರ್ತರು	84%
ನೆರೆಮನೆ	30%
ಸ್ನೇಹಿತರು	14.66%



ಯೋಜನೆಯ ಸದಸ್ಯರಲ್ಲಿ ಹೆಚ್ಚಿನವರು ಸಂಘದ ಸದಸ್ಯರಾಗಲು ಕಾರಣರಾದವರು ಯೋಜನೆಯ ಕಾರ್ಯಕರ್ತರು. ಇವರು ಈ ಭಾಗದ ಜನರಲ್ಲಿ ಸ್ವ ಸಹಾಯ ಸಂಘದ ಮಹತ್ವನ್ನು ಅಲ್ಲಲ್ಲಿ ಸಭೆಗಳನ್ನು ನಡೆಸುವ ಮೂಲಕ ಮನವರಿಕೆ ಮಾಡಿಕೊಟ್ಟರು. ಹೀಗಾಗಿ ಸಂದರ್ಶಿಸಿದ 75 ಸದಸ್ಯರಲ್ಲಿ 41 ಜನ ಅಂದರೆ 54% ಸಂಘಕ್ಕೆ ಸೇರಲು ಯೋಜನೆಯ ಕಾರ್ಯಕರ್ತರು ನೀಡಿದ ಮಾರ್ಗದರ್ಶನವೇ ಕಾರಣ. ಇದೇ ರೀತಿ ನೆರೆ-ಹೊರೆಯವರು ಯೋಜನೆಯ ಸದಸ್ಯರಾಗಿ ಅಭಿವೃದ್ದಿ ಹೊಂದುತ್ತಿರುವುದನ್ನು ನೋಡಿ ಶೇಕಡಾ 30% ರಷ್ಟು ಅಂದರೆ 22 ಜನ ಸಂಘದ ಸದಸ್ಯರಾಗಿದ್ದಾರೆ. ಉಳಿದಂತೆ 14.66% ಜನ ಸ್ನೇಹಿತರು ಮತ್ತು ಸಂಬಂಧಿಕರ ಮಾತು ಕೇಳಿ ಯೋಜನೆಯ ಸದಸ್ಯರುಗಳಾಗಿದ್ದಾರೆ.

ತಂಡದಲ್ಲಿ ಜವಾಬ್ದಾರಿ ಹಂಚಿಕೆ

ವ್ಯಕ್ತಿತ್ವ ವಿಕಸನ ಆಗುವಂತಹದ್ದು ನಾಲ್ಕು ಜನರೊಡನೆ ಸೇರಿ ಸಮಾಜದ ಮುಖ್ಯ ವಾಹಿನಿಯಲ್ಲಿ ಪಾಲ್ಗೊಂಡಾಗ. ಹೀಗಾಗಿ ಸ್ವ ಸಹಾಯ ಸಂಘಗಳಲ್ಲಿ ತಂಡದಲ್ಲಿ ಸೇರ್ಪಡೆಗೊಂಡಿರುವ ಸದಸ್ಯರನ್ನೇ ಅಧ್ಯಕ್ಷ, ಕಾರ್ಯದರ್ಶಿಯನ್ನಾಗಿ ಆರಿಸಿ ಆ ಮೂಲಕ ಅದರಲ್ಲೂ ಸಾಮಾಜಿಕ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಸಮೀಕ್ಷೆಕೊಳಪಟ್ಟ 75 ಜನರಲ್ಲಿ ಪ್ರಸ್ತುತ 16 ಜನ ವಿವಿಧ ಜವಾಬ್ದಾರಿಗಳನ್ನು ತಂಡಗಳಲ್ಲಿ

ವಹಿಸಿಕೊಂಡಿದ್ದಾರೆ. ಅಂತೆಯೇ 21 ಜನ ಈ ಹಿಂದೆ ವಿವಿಧ ಜವಾಬ್ದಾರಿಗಳಗಳನ್ನು ವಹಿಸಿಕೊಂಡಿದ್ದರು. ಕೇವಲ ಯೋಜನೆಯಲ್ಲಿ ಸದಸ್ಯರು ಅಥವಾ ಹುದ್ದೆಯನ್ನು ಮಾತ್ರ ಅಲಂಕರಿಸದೇ ಇತರ ಸಂಘ ಸಂಸ್ಥೆಗಳಲ್ಲೂ ಇಲ್ಲಿಯ ಜನ ಸಕ್ರಿಯವಾಗಿ ಪಾಲ್ಗೊಳುವುದನ್ನು ಕಲಿತಿದ್ದಾರೆ. ಸಮೀಕ್ಷೆಗೊಳಪಟ್ಟ 75 ಜನರಲ್ಲಿ, ಸ್ವ ಸಹಾಯ ಸಂಘಗಳಿಗೆ ಸೇರುವ ಮೊದಲು ಕೇವಲ 2 ಜನ ಮಾತ್ರ ಇತರ ಸಂಘಟನೆಯಲ್ಲಿ ಸದಸ್ಯತ್ವ ಪಡೆದಿದ್ದರು. ಆದರೆ ಈಗ 15 ಜನ ಇತರ ಸಂಘಟನೆಯಲ್ಲಿ ಸದಸ್ಯತ್ವ ಪಡೆದಿರುವುದು ಸಮಾಜದ ಮುಖ್ಯ ವಾಹಿನಿಯಲ್ಲಿ ಹಾಲು ಒಕ್ಕೂಟದಲ್ಲಿ 5 ಜನ, ಗ್ರಾಮ ಪಂಚಾಯತುಗಳಲ್ಲಿ 6 ಜನ ಮತ್ತು ಜನ ಜಾಗೃತಿ ವೇದಿಕೆಗಳಲ್ಲಿ 4 ಜನ ಸಕ್ರಿಯವಾಗಿ ಪಾಲ್ಗೊಳುತ್ತಿದ್ದಾರೆ. ಮತ್ತು ವರ್ಷದಿಂದ ವರ್ಷಕ್ಕೆ ಈ ಪ್ರಮಾಣ ಅಧಿಕಗೊಳ್ಳುತ್ತಿದೆ.

ಸ್ವ ಸಹಾಯ ಸಂಘದಲ್ಲಿ ಇಟ್ಟುಕೊಳ್ಳಬೇಕಾದ ದಾಖಲಾತಿ ಪುಸ್ತಕಗಳು:-

ಸ್ವ ಸಹಾಯ ಸಂಘಗಳನ್ನು ಗ್ರಾಮಮಟ್ಟದ ಬ್ಯಾಂಕ್‌ಗಳೆಂದು ಕರೆಯಬಹುದಾಗಿದೆ. ಇದಕ್ಕೆ ಮುಖ್ಯಕಾರಣ ಬ್ಯಾಂಕುಗಳು ಜನರಿಂದ ಠೇವಣಿ ಪಡೆದು ಅವರಿಗೆ ಬಡ್ಡಿಯ ಜೊತೆಗೆ ಭದ್ರತೆಯನ್ನು ನೀಡುತ್ತದೆ. ಜೊತೆಗೆ ಹಣದ ಅವಶ್ಯಕತೆ ಇರುವವರಿಗೆ ಬಡ್ಡಿಯ ಆಧಾರದಲ್ಲಿ ಸಾಲ ನೀಡುತ್ತದೆ. ಇದೇ ಕೆಲಸವನ್ನು ಸ್ವ ಸಹಾಯ ಸಂಘಗಳಲ್ಲಿ ನಾವು ಕಾಣಬಹುದು. ಸ್ವ ಸಹಾಯ ಸಂಘಗಳಲ್ಲಿ ನಡೆಯುವ ಇಂತಹ ಕೊಡು – ಕೊಳ್ಳುವಿಕೆಯ ಜವಾಬ್ದಾರಿಯುತ ವ್ಯವಹಾರ ಸುಲಲಿತವಾಗಿ ಸಾಗಲು ಲೆಕ್ಕ ಪತ್ರಗಳ ದಾಖಲಾತಿ ಪುಸ್ತಕಗಳು ಅತ್ಯಂತ ಅವಶ್ಯಕವಾಗಿರುತ್ತದೆ.

೧. ನಿರ್ಣಯ ಪುಸ್ತಕ:-

ಸ್ವ ಸಹಾಯ ಸಂಘಗಳಲ್ಲಿ ಸದಸ್ಯರಾಗ ಬಯಸುವವರು ಅಧಿಕೃತವಾಗಿ ಪ್ರವೇಶ ಶುಲ್ಕವನ್ನು ಸದಸ್ಯತ್ವ ಪಡೆಯಬೇಕಾಗುತ್ತದೆ. ಸದಸ್ಯತ್ವ ಶುಲ್ಕ 20, 50 ಅಥವಾ 100 ಹೀಗೆ ಬೇರೆ ಬೇರೆ ಮೊತ್ತವಾಗಿರುತ್ತದೆ. ಸದಸ್ಯತ್ವ ಶುಲ್ಕ ಎಷ್ಟಿರಬೇಕೆಂದು ಸ್ವ ಸಹಾಯ ಸಂಘವೇ ನಿರ್ಧರಿಸುತ್ತದೆ. ಹೀಗೆ ಆರಂಭವಾದ ತಂಡದ ಪ್ರಾರಂಭದ ಮಾಹಿತಿ, ಅಂದರೆ ತಂಡದ ಆರಂಭದಿಂದ ಹಿಡಿದು ತಂಡದಲ್ಲಿರಬೇಕಾದ ಸದಸ್ಯರು, ತಂಡದಲ್ಲಿ ಶಿಸ್ತು, ಮುನ್ನಡೆಸುವ ಬಗ್ಗೆ ಒಂದು ರೂಪುರೇಷೆ ತಯಾರಿಸಿ ಇವುಗಳನ್ನು ನಿರ್ಣಯ ಪುಸ್ತಕದಲ್ಲಿ ನಮೂದಿಸಲಾಗುತ್ತದೆ.

೨. ಸದಸ್ಯರುಗಳ ವೈಯಕ್ತಿಕ ಉಳಿತಾಯ ಮತ್ತು ಸಾಲದ ಪುಸ್ತಕ:-

ಸ್ವ ಸಹಾಯ ಸಂಘಗಳಲ್ಲಿ ಸದಸ್ಯರುಗಳದವರು ವಾರಕ್ಕೆ ಕನಿಷ್ಠ 10 ರೂ ರೂಪಾಯಿಯನ್ನು ಉಳಿತಾಯವಾಗಿ ಸಂಘದಲ್ಲಿ ಕಟ್ಟುವುದು ಪದ್ಧತಿ. ಹೀಗೆ ಪ್ರತಿಒಬ್ಬ ಸದಸ್ಯರುಗಳು ಎಷ್ಟು ಉಳಿತಾಯ ಮಾಡಿದ್ದಾರೆ? ಸಾಲ ಪಡೆದಿದ್ದಲ್ಲಿ ಎಷ್ಟು ಪಡೆದಿದ್ದಾರೆ? ಮರುಪಾವತಿ ಹೇಗೆ ಸಾಗಿದೆ? ಮುಂತಾದ ಎಲ್ಲಾ ವಿಚಾರಗಳನ್ನು ಯಾವುದೇ ಸಂದರ್ಭದಲ್ಲಿ ತಿಳಿಯಲು ಈ ಪುಸ್ತಕ ಸಹಕಾರಿಯಾಗುತ್ತದೆ. ಸಾಮಾನ್ಯವಾಗಿ ಈ ಪುಸ್ತಕದ ಎಡಭಾಗದಲ್ಲಿ ಉಳಿತಾಯದ ವಿವರಗಳನ್ನು ಬಲಭಾಗದಲ್ಲಿ ಸಾಲದ ವಿವರಗಳನ್ನು ನಮೂದಿಸಲಾಗಿರುತ್ತದೆ.

೩. ಹಣ ಪಡೆದ ದಾಖಲೆ ಪುಸ್ತಕ:-

ಸ್ವ ಸಹಾಯ ಸಂಘದ ಸದಸ್ಯರುಗಳು ಪ್ರತಿವಾರ ಉಳಿಸುವ ಹಣವನ್ನು ಸೂಕ್ತ ದಾಖಲೆಗಳೊಂದಿಗೆ ಇಡಬೇಕು. ಇದಕ್ಕೆ ಅನುಗುಣವಾಗಿ `ಹಣ ಪಡೆದ ದಾಖಲೆ` ಪುಸ್ತಕವನ್ನು ರೂಪಿಸಲಾಗುತ್ತದೆ. ಪ್ರಾರಂಭದಲ್ಲಿ ಸಂಘದ ಹೆಸರು ಮತ್ತು ದಿನಾಂಕದೊಂದಿಗೆ ಹಣ ಸಂದ ರಶೀದಿ ಸಂಖ್ಯೆ, ಇರುತ್ತದೆ. ನಂತರ ಜಮಾ ವಿವರಗಳನ್ನು ದಾಖಲಿಸಬೇಕು. ಜಮಾ ವಿವರಗಳು ಸಾಮಾಣ್ಯವಾಗಿ ನಾಲ್ಕು ಹಂತಗಳಲಿರುತ್ತದೆ.

೧. ವಾರದ ಉಳಿತಾಯ — ೩. ಸಾಲ ಮರುಪಾವತಿ

೨. ಸೇವಾ ಶುಲ್ಕ — ೪. ದಂಡ ವಸೂಲಿ.

ಹೀಗೆ ಈ ನಾಲ್ಕು ಸಂಘಕ್ಕೆ ಸಂದಾಯವಾದ ಹಣದ ವಿವರಗಳನ್ನೂ ಬರೆದು, ಬರೆದವರ ಮತ್ತು ಅಂಗೀಕರಿಸಿದವರು ಸಹಿಗಳನ್ನು ಕಡ್ಡಾಯವಾಗಿ ನಮೂದಿಸಬೇಕು. ರಶೀದಿಯ ಹಿಂಬಾಗದಲ್ಲಿ ಸದಸ್ಯವಾರು ಉಳಿತಾಯ, ಸಾಲ ಮರುಪಾವತಿ, ಸೇವಾ ಶುಲ್ಕ ಮತ್ತು ದಂಡ ವಸೂಲಿಯ ವಿವರಗಳಿರುತ್ತದೆ.

೪. ಬ್ಯಾಂಕಿಗೆ ಹಣ ಸಂದಾಯವಾದ ದಾಖಲೆ ಪುಸ್ತಕ:-

ಸ್ವ ಸಹಾಯ ಸಂಘದಲ್ಲಿ ಯಾವುದೇ ಸದಸ್ಯರುಗಳ ತಂಡ ಹೊಸದಾಗಿ ಆರಂಭಗೊಂಡ ಕೂಡಲೇ, ಬ್ಯಾಂಕಿನಲ್ಲಿ ತಮ್ಮ ತಂಡದ ಹೆಸರಿನಲ್ಲಿ ಖಾತೆಯನ್ನು ತೆರೆಯುತ್ತಾರೆ. ಹೀಗೆ ತಂಡದ ಹೆಸರಿನಲ್ಲಿ ತೆರೆದ ಖಾತೆಗೆ ಪ್ರತಿವಾರ ಯಾರಾದರೊಬ್ಬ ಸದಸ್ಯ ಅಥವಾ ತಂಡದ ಅಧ್ಯಕ್ಷ, ಅಥವಾ ಕಾರ್ಯದರ್ಶಿ ತಂಡದ ಸದಸ್ಯರಿಂದ ಉಳಿತಾಯವಾದ ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡಿ ಬರುತ್ತಾರೆ. ಹೀಗೆ ಜಮಾ

ಆದ ಹಣದ ವಿವರ ಬ್ಯಾಂಕಿಗೆ ಖಾತೆ ಪುಸ್ತಕದಲ್ಲಿ ನಮೂದಾಗಿರುತ್ತದೆ. ಇದು ಪ್ರತಿವಾರ ತಂಡದ ಸದಸ್ಯರುಗಳಿಗೆ ಬ್ಯಾಂಕಿಗೆ ಹಣ ಸಂದಾಯವಾದುದರ ವಿವರ ಒದಗಿಸುತ್ತದೆ.

೫. ಸಾಮಾನ್ಯ ಖಾತೆ ಪುಸ್ತಕ:-

ಯಾವುದೇ ಸಂದರ್ಭದಲ್ಲಿಯಾದರೂ ಸಂಘದ ಒಟ್ಟು ವಹಿವಾಟು ಯಾವ ಬಾಬ್ತಿನಲ್ಲಿ ಏಷ್ಟಿದೆ ಎಂದು ತಿಳಿಯಲು ಸಾಮಾನ್ಯ ಖಾತೆ ಪುಸ್ತಕ ಸಹಕಾರಿಯಾಗಿರುತ್ತದೆ. ಇಲ್ಲಿ ದಿನಾಂಕ, ನಗದು ಬಂದ ವಿವರ, ಜಮಾ ಖರ್ಚು, ಉಳಿದ ಹಣ ಹೀಗೆ ಕಾಲಮುಗಳನ್ನು ರೂಪಿಸಿಕೊಂಡಿದ್ದು ಅದರಂತೆ ವಿವರಗಳನ್ನು ಬರೆಯುತ್ತಾ ಹೋಗುತ್ತಾರೆ. ಸಾಮಾನ್ಯ 5-6 ಉಪವಿಭಾಗಗಳನ್ನು ಕಾಣಬಹುದಾಗಿದೆ.

ಮೊದಲನೆಯದಾಗಿ ಸಾಮಾನ್ಯ ನಿಧಿಗಳ ಲೆಕ್ಕ, ಸದಸ್ಯತ್ವ ಪಡೆಯಬೇಕಾದಾಗ ಸದಸ್ಯರು ಒಗ್ಗೂಡಿಸಿದ ಪ್ರವೇಶ ಶುಲ್ಕ ಸಾಮಾನ್ಯ ನಿಧಿಯ ಲೆಕ್ಕದಲ್ಲಿ ಬರುತ್ತದೆ.

ಸಾಮಾನ್ಯ ಖಾತೆ ಪುಸ್ತಕದಲ್ಲಿ ಸಾಮಾನ್ಯವಾಗಿ ಎರಡನೆ ಅಂಶವಾಗಿ ಬರುವುದು ಸಂಘದ ಒಟ್ಟು ಉಳಿತಾಯದ ಲೆಕ್ಕ, ಪ್ರತಿವಾರ ಸದಸ್ಯರು ಉಳಿಸಿದ ಹಣದ ಒಟ್ಟಾರೆ ವಿವರ ಇಲ್ಲಿನ ಕಾಲಂನಲ್ಲಿರುತ್ತದೆ.

ಮೂರನೆಯದಾಗಿ ಸಂಘ ನೀಡಿರುವ ಒಟ್ಟು ಸಾಲದ ಲೆಕ್ಕ ಸಂಘ ಪ್ರಾರಂಭಗೊಂಡಾಗಿನಿಂದ ಇಲ್ಲಿಯವರೆಗೆ ತನ್ನ ಸದಸ್ಯರಿಗೆ ಎಷ್ಟು ಸಾಲ ನೀಡಿದೆ ಎಂಬ ವಿವರ ಈ ಕಾಲಂನಲ್ಲಿ ದೊರೆಯುತ್ತದೆ.

ಸದಸ್ಯರು ವಾರದ ಸಭೆಗೆ ತಡವಾಗಿ ಬಂದಾಗ,. ಅಥವಾ ಗೈರುಹಾಜರಾದಾಗ ದಂಡ ವಿಧಿಸುವ ಪ್ರಕ್ರಿಯೆ ಸಂಘದಲ್ಲಿರುತ್ತದೆ ಹೀಗೆ ಇಂತಹ ಬಾಬ್ತಿನಿಂದ ಬಂದ ಒಟ್ಟು ಹಣ ಎಷ್ಟು ಎನ್ನುವ ಲೆಕ್ಕ ಈ ಕಾಲಂನಲ್ಲಿ ಸಿಗುತ್ತದೆ.

೬. ನಡವಳಿಕೆ ಪುಸ್ತಕ:-

ಸಂಘದ ಲೆಕ್ಕಪತ್ರ ಸಂಘದ ಕಾರ್ಯಚಟುವಟಿಕೆಗಳನ್ನು ಬರೆದಿಡುವ ಪುಸ್ತಕವಾದ ನಡವಳಿಕೆ ಪುಸ್ತಕವನ್ನು "ಸಂಘದ ಬೈಬಲ್" ಎಂದು ಕರೆಯುತ್ತಾರೆ. ಏಕೆಂದರೆ ಪ್ರತಿವಾರ ಸಭೆ ಸೇರಿದಾಗ ಸರ್ವಸಮ್ಮತವಾಗಿ ಕೈಗೊಂಡ ಚರ್ಚೆ, ತೀರ್ಮಾನ, ನಿಯಮಾವಳಿಗಳು, ಉಳಿತಾಯ, ಸಾಲ ಸಂಬಂಧಿತ ವಿಚಾರಗಳು ದಾಖಲಾಗುವುದು ಇದೇ ಪುಸ್ತಕದಲ್ಲಿ.

ಪ್ರತಿವಾರದ ಸಭೆಯಲ್ಲಿ ನಡೆಯುವ ಪ್ರಾರ್ಥನೆ, ಸ್ವಾಗತ, ಅತಿಥಿಗಳ ಭಾಷಣ, ಸಂಘದ ಉಳಿತಾಯ, ಸಾಲ ಇನ್ನಿತರ ವಿಚಾರಗಳ ಚರ್ಚೆ, ಅಧ್ಯಕ್ಷರ ಮಾತು, ವಂಸನಾರ್ಪಣೆ ಹೀಗೆ ಹಂತದ ಕಾರ್ಯಚಟುವಟಿಕೆಗಳನ್ನು ಹಂತ-ಹಂತವಾಗಿ ನಡವಳಿಕೆ ಪುಸ್ತಕದಲ್ಲಿ ಪ್ರತಿವಾರ ನಮೂದಿಸಲಾಗುತ್ತದೆ. ಇದು ಸಂಘದಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳ ವಿವರವನ್ನು ಒದಗಿಸುತ್ತದೆ.

ಕಿರುಹಣಕಾಸಿನ ಮೂಲಕ ಆದಾಯತರುವ ಚಟುವಟಿಕೆಗಳು

ಸಮೀಕ್ಷೆಗೊಳಪಟ್ಟ ಪ್ರದೇಶದಲ್ಲಿ ಕಿರುಹಣಕಾಸು ಯೋಜನೆಯು ಆದಾಯ ತರುವ ವಿವಿಧ ಆರ್ಥಿಕ ಚಟುವಟಿಕೆಗಳಾದ ಕೋಳಿಸಾಕಣೆ, ಟೈಲರಿಂಗ್ ಮತ್ತು ವ್ಯಾಪಾರಗಳಿಗೆ ಒತ್ತು ನೀಡಿದೆ. ಇದರಲ್ಲೂ ಮುಖ್ಯವಾಗಿ ಕೋಳಿಸಾಕಾಣೆಗೆ ಹೆಚ್ಚಿನ ಒತ್ತನ್ನು ನೀಡಲಾಗಿರುವುದು ಸಮೀಕ್ಷೆಯಿಂದ ತಿಳಿದುಬರುತ್ತದೆ.

ಕೋಳಿಸಾಕಾಣೆ:-

ಬೆಳ್ತಂಗಡಿ ತಾಲೂಕಿನ, ಬೆಳಾಲು ಗ್ರಾಮದ, ಮುಂಡ್ರೊಟ್ಟು ಎಂಬ ಪ್ರದೇಶದಲ್ಲಿ ವಾಸವಾಗಿರುವ ಉಮೇಶ್‌ನಾಯ್ಕ ಎಂಬವರು 2 ವರ್ಷದ ಹಿಂದೆ 'ಮುಂಡ್ರೊಟ್ಟು ತಂಡ' ದ ಮೂಲಕ SKDRDPಯ ಸದಸ್ಯರಾಗಿದ್ದಾರೆ. ಇವರು 11-9-2007 ರಂದು 70,000 ರೂಪಾಯಿಗಳನ್ನು ಪ್ರಗತಿನಿಧಿ ಸಾಲದ ಮೂಲಕ ಪಡೆದು ಕೋಳಿ ಉದ್ಯಮವನ್ನು ಪ್ರಾರಂಭಿಸಿದ್ದಾರೆ. ಇವರು ಕೋಳಿಸಾಕಣಿಕೆಯ ಉದ್ಯಮವನ್ನು ಪ್ರಾರಂಭಿಸುವ ಮೊದಲು ತಮ್ಮ 1 1/2 ಎಕರೆ ಜಾಗದಲ್ಲಿ ಕೃಷಿಯಚಟುವಟಿಕೆಯಲ್ಲಿ ತೊಡಗಿಕೊಂಡಿದ್ದರು. ಆದರೆ ಈ ಸಂದರ್ಭದಲ್ಲಿ ಅವರಿಗೆ ಯಾವುದೇ ರೀತಿಯಲ್ಲಿ ಹಣದ ಉಳಿತಾಯ ಮಾಡುವುದು ಸಾಧ್ಯವಾಗುತ್ತಿರಲಿಲ್ಲ ಎಂದು ಸಂದರ್ಶನದ ಸಂದರ್ಭದಲ್ಲಿ ತಿಳಿಸಿದರು. ಈಗ ಕಿರುಹಣಕಾಸು ಯೋಜನೆಯ ಮೂಲಕ ಕೋಳಿ ಉದ್ಯಮವನ್ನು ಆರಂಭಿಸಿ ಪ್ರತಿ ತಮ್ಮ ಮನೆಯ ಎಲ್ಲಾ ಖರ್ಚುಗಳನ್ನು ಕಳೆದು ಸರಾಸರಿ 6,000 ದಿಂದ 7,000 ವರೆಗೆ ಉಳಿಸುತ್ತಿದ್ದಾರೆ ಕೋಳಿ ಸಾಕಣಿಕೆ ಉದ್ಯಮದಿಂದ ಉತ್ತಮ ಆದಾಯ ಬರುತ್ತಿರುವುದರಿಂದ ಇದನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕೆನ್ನುವುದು ಇವರ ಬಯಕೆಯಾಗಿದೆ. ಮತ್ತು ಇದಕ್ಕೆ ಪ್ರಗತಿನಿಧಿಯ ಮೂಲಕ 40,000 ರೂಪಾಯಿಗಳು ಮುಂಜೂರಾಗಿರುವುದು. ಸಂದರ್ಶನದ ಸಮಯದಲ್ಲಿ ತಿಳಿಯಬಂತು.

ಆದರೆ ಇವರಿಗೆ ತಮ್ಮ ಮನೆಗೆ ಹೋಗುವ ರಸ್ತೆ ಚಿಕ್ಕಮಂಗಳೂರಿನಿಂದ ಪೂರೈಕೆಯಾಗುವ ಕೋಳಿಮರಿಗಳು ಕ್ಲಪ್ತ ಸಮಯಕ್ಕೆ ತಲುಪದೇ ಇರುವುದರಿಂದ ಸಂಪೂರ್ಣ ಹಾಳಾಗಿ, ತಮ್ಮ ಉದ್ಯಮಕ್ಕೆ ದೊಡ್ಡ-ಹೊಡೆತ ಬಿದ್ದಿರುವುದು ತಿಳಿಸಿದರು.

ಟೈಲರಿಂಗ್:- S.K.D.R.D.Pಯ, ಗ್ರಾಮೀಣ ಪ್ರದೇಶದ ಮಹಿಳೆಯರ ಉದ್ಯೋಗ ಸೃಷ್ಟಿಯ ಯೋಜನೆಯಾದ 'ಸಿರಿ' ಯ ಮೂಲಕ ಬೆಳಾಲಿನ 8 ಮಂದಿ ಯುವತಿಯರು ರೆಕ್ಸಿನ್ ಘಟಕವನ್ನು ಆರಂಭಿಸಿದ್ದಾರೆ. ಈ 8 ಮಂದಿ ಯುವತಿಯರು ರೆಕ್ಸಿನ್ ಘಟಕ ಆರಂಭಿಸುವ ಮೊದಲು ಮನೆಯಲ್ಲಿ ಬೀಡಿಕಟ್ಟಿ ತಿಂಗಳಿಗೆ ಸಾರಸರಿ 500 ರೂಪಾಯಿ ಉಳಿಸುತ್ತಿದ್ದರು. ಆದರೆ ಈಗ ದಿನವೊಂದಕ್ಕೆ 45 ರೂಪಾಯಿಗಳಂತೆ ತಿಂಗಳಿಗೆ 1,350 ರೂಪಾಯಿ ಉಳಿಸುತ್ತಿದ್ದಾರೆ. ಇದರ ಜೊತೆಗೆ ಸಮಾಜದ ಆಗುಹೋಗುಗಳನ್ನು ತಿಳಿದುಕೊಳ್ಳುತ್ತಾ ಸ್ವಾವಲಂಬಿಯಾಗಿ ಬದುಕುವುದನ್ನು ಕಲಿತಿರುವುದು ಸಮೀಕ್ಷೆಯ ಸಂದರ್ಭದಲ್ಲಿ ತಿಳಿದುಬಂದ ವಿಷಯ.

ವ್ಯಾಪಾರ (ಅಂಗಡಿ):- ಬೆಳಾಲಿನ ಗ್ರಾಮದಲ್ಲಿರುವ "ಆದಂ" ಎಂಬ ವ್ಯಕ್ತಿ S.K.D.R.D.P ಸೇರುವ ಮೊದಲು ಬೇರೆ ಯವರ ಮನೆಗೆ ಕೂಲಿಕೆಲಸಕ್ಕೆ ಹೋಗುತ್ತಿದ್ದರು. ಮತ್ತೆ ಇವರು 1-2008 ರಂದು ಪ್ರಗತಿನಿಧಿಯ ಮೂಲಕ 8,000 ರೂಪಾಯಿಗಳನ್ನು ಸಾಲ ಪಡೆದು ತಮ್ಮ ಮನೆಯಲ್ಲಿಯೇ ಒಂದು ಕಿರಾಣಿ ಅಂಗಡಿಯನ್ನು ತೆರೆದಿದ್ದಾರೆ. ಇದರಿಂದಾಗಿ ಅಕ್ಕ ಪಕ್ಕದ ಮನೆಯವರು ಅಂಗಡಿಯಿಂದ ಸಾಮಾನು ತರಲು 4ಕಿ.ಮೀ ಹೋಗುವುದನ್ನು ತಪ್ಪಿಸಿದಂತಾಗಿದೆ. ಜೊತೆಗೆ ಇವರು ತಮ್ಮ ಸಾಲದಲ್ಲಿ 60% ಹಣವನ್ನು ಬಡ್ಡಿ ಸಹಿತ ಈಗಾಗಲೇ ಮರುಪಾವತಿ ಮಾಡಿರುವುದು ಕಂಡುಬಂತು.

ಕಿರು ಆರ್ಥಿಕ ಯೋಜನೆಯಲ್ಲಿ, ಉಳಿತಾಯ, ಸಾಲ ಮತ್ತು ಮರುಪಾವತಿ:-

ಕಿರು ಆರ್ಥಿಕ ಯೋಜನೆಯಡಿಯಲ್ಲಿ ಸದಸ್ಯರ ನಿತ್ಯದ ಅಗತ್ಯಗಳಿಗೆ ಆದಾಯ ತರುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಹಾಗೂ ಮೂಲ ಸೌಕರ್ಯಗಳಾದ ಮನೆ, ಶೌಚಾಲಯ, ಗೋಬರ್ ಅನಿಲಸ್ಥಾವರ ಮುಂತಾದವುಗಳ ನಿರ್ಮಾಣ ಕೈಗೊಳ್ಳಲು ಆರ್ಥಿಕ ಬೆಂಬಲ ನೀಡಲಾಗುತ್ತಿದೆ. ಸಾಲವನ್ನು ನೀಡಲು ಅಗತ್ಯವಿರುವ ಮೊತ್ತವನ್ನು ಸದಸ್ಯರ ಗುಂಪಿನ ಉಳಿತಾಯದ ಖಾತೆಯಿಂದ ಪಡೆಯಲಾಗುತ್ತದೆ. ಮತ್ತೊಂದು ಮೂಲವೆಂದರೆ ಗುಂಪು ಬ್ಯಾಂಕಿನಿಂದ ಪಡೆದ ಸಾಲ.

ಕಿರು ಆರ್ಥಿಕ ಯೋಜನೆಯಡಿಯಲ್ಲಿ ನೀಡುವ ಸಾಲವು ಪ್ರಗತಿ ನಿಧಿ ಎಂದು ಕರೆಯಲ್ಪಡುತ್ತದೆ. ಸಾಲ ನಿರ್ವಹಣೆಗೆ ಅಗತ್ಯವಿರುವ ತರಬೇತಿಯನ್ನು ಕೂಡ ಸದಸ್ಯರಿಗೆ ನೀಡಲಾಗುತ್ತದೆ. ಗುಂಪುಗಳಿಗೆ ಬ್ಯಾಂಕ್ ಲಿಂಕೇಜ್ ಒದಗಿಸಲಾಗುತ್ತದೆ. ಯಾವುದೇ ರೀತಿಯ ತೊಂದರೆ ತಕರಾರಿಲ್ಲದೆ ಸುಲಭವಾಗಿ ದೊರೆಯುವ ಸಾಲ ಸೌಲಭ್ಯ, ಅಗತ್ಯತೆಗಳಿಗೆ ತಕ್ಕಷ್ಟು ಸಾಲ, ಮರುಪಾವತಿ ಇವು ಈ ಯೋಜನೆಯ ವೈಶಿಷ್ಟಗಳಾಗಿವೆ. ಸದಸ್ಯರು ಪ್ರತಿವಾರ ಸಾಲವನ್ನು ಮರುಪಾವತಿಸುತ್ತಾರೆ.


ಸದಸ್ಯರ ಉಳಿತಾಯದ ಆಧಾರದ ಮೇಲೆ ಸಾಲವನ್ನು ನೀಡುವುದು ಕಿರುಹಣಕಾಸಿನ ಪದ್ಧತಿ. ಅದರಲ್ಲೂ ಸದಸ್ಯರ ಉಳಿತಾಯದ ನಾಲ್ಕು ಪಟ್ಟು ಸಾಲವನ್ನು ನೀಡಬಹುದಾದರೂ ಇಲ್ಲಿ ಪಡೆದಿರುವುದು 1:2.66% ಸಂದರ್ಶಿಸಿದ ಸ್ವ ಸಹಾಯ ಸಂಘಗಳ ಸದಸ್ಯರ ಒಟ್ಟು ಉಳಿಕೆ ಸೆಪ್ಟಂಬರ್ 30, 2008ರ ವರೆಗೆ 5, 15,772 ರೂಪಾಯಿಗಳು. ಮತ್ತು ಇವರು ಪಡೆದ ಸಾಲ ಸೆಪ್ಟಂಬರ್ ಅಂತ್ಯಕ್ಕೆ 13, 84, 820 ರೂಪಾಯಿಗಳು.

ಕ್ಷೇತ್ರಾಧ್ಯಯನ ನಡೆಸಿದ ಬೆಳಾಲು ಗ್ರಾಮದಲ್ಲಿ ಒಟ್ಟು 59 ಮಂದಿ ಸದಸ್ಯರು ಪೆಬ್ರವರಿ 2008 ವರೆಗೆ ಒಟ್ಟು 82, 1,000 ಸಾಲ ಪಡೆದಿದ್ದು ಇದರಲ್ಲಿ 37, 58,000 ಮರುಪಾವತಿಯಾಗಬೇಕಾಗಿದೆ.

ಉಜಿರೆ ಗ್ರಾಮದಲ್ಲಿ ಒಟ್ಟು 527 ಜನ ಸದಸ್ಯರಿದ್ದು ಇವರು ಫೆಬ್ರವರಿ 2008 ವರೆಗೆ ಒಟ್ಟು 96. 26,150 ಸಾಲಪಡೆದಿದ್ದು ಇದರಲ್ಲಿ 43, 57, 00 ಮರುಪಾವತಿಸಿದ್ದಾರೆ. ಉಳಿದಂತೆ 52, 69,000 ಮರುಪಾವತಿ ಯಾಗಬೇಕಾಗಿದೆ.


ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳು. (40.8%) 5, 66,000

ಕೃಷಿ ಗ್ರಾಮೀಣ ಪ್ರದೇಶದ ಜನರ ಮುಖ್ಯ ಉದ್ಯೋಗ. ಗ್ರಾಮೀಣ ಪ್ರದೇಶದ ಸುಮಾರು 82% ಜನ ಇಂದಿಗೂ ಕೂಡ ಕೃಷಿಯನ್ನು ಅವಲಂಬಿಸಿದ್ದಾರೆ. ಈ ಅಂಶವನ್ನು ಪುಷ್ಟೀಕರಿಸುವಂತೆ ಸಮೀಕ್ಷೆಗೊಳಪಟ್ಟ ಗ್ರಾಮೀಣ ಪ್ರದೇಶದಲ್ಲಿಯೂ ಬಹಳಷ್ಟು ಜನರು ಕೃಷಿಯನ್ನೆ ಅವಲಂಬಿಸಿದ್ದಾರೆ. ಮತ್ತು ಇವರು ಪಡೆದ ಒಟ್ಟು ಸಾಲದ ಸಿಂಹಪಾಲು ಅಂದರೆ 40.8% ದಷ್ಟು ಹಣ ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಿಗೆ ವ್ಯಯಗೊಂಡಿದೆ. ಇದರಲ್ಲಿ ಮುಖ್ಯವಾಗಿ 52.8% ದಷ್ಟು ಕೃಷಿ ಸಾಮಾಗ್ರಿಗಳಾದ ಬೀಜ, ಗೊಬ್ಬರ, ಸಲಕರಣೆಗಳಂತಹ ವಿಷಯಗಳಿಗೆ ವ್ಯಯಿಸಿದ್ದಾರೆ. 30.91% ದಷ್ಟು ಹಣವನ್ನು ಕೆರೆ ಮತ್ತು ಕೆರೆಗೆ ರಿಂಗ್ ಹಾಕುವಂತಹ ಮತ್ತು ನೀರಾವರಿ ಸೌಲಭ್ಯಕ್ಕೆ ವ್ಯಯಿಸಿದ್ದಾರೆ. 14.48% ದಷ್ಟು ಹಣ ಹಟ್ಟಿರಚನೆಗೆ ತಗುಲಿಗೆ, ಜೊತೆಗೆ 1.76 ರಷ್ಟು ಹಣ ಹಸು ಖರಿದಿಗೆ ತಗುಲಿದೆ.



ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗೆ 1, 77,000 (12.78%)

ಮದುವೆಗೆ ಅಥವಾ ಇತರ ಸಾಮಾಜಿಕ ಕಟ್ಟುಪಾಡಿನ ಕಾರ್ಯಕ್ರಮಗಳಿಗೆ ಮತ್ತು ಪೂಜೆ ಪುರಸ್ಕಾರಗಳಂತಹ ಕಾರ್ಯಕ್ರಮಗಳು ಜನರಲ್ಲಿ ಜೀವನೋತ್ಸಹವನ್ನು ತುಂಬುವುದರ ಜೊತೆಗೆ ದೇವರ ಮೇಲಿನ ಭಕ್ತಿಯ ಜೊತೆಗೆ ಜೀವನದಲ್ಲಿ ಶಿಸ್ತನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಸಮೀಕ್ಷೆ ನಡೆಸಿದ ಪ್ರದೇಶದ ಜನರು ಪಡೆದ ಒಟ್ಟು ಸಾಲದಲ್ಲಿ 12.78% ಹಣ ಇದಕ್ಕೆ ವ್ಯಯಿಸಿದ್ದಾರೆ. ಒಟ್ಟು 96.6% ದಷ್ಟು ಮದುವೆಯಂತಹ ಸಾಮಾಜಿಕ ಕಟ್ಟುಪಾಡಿನ ಕಾರ್ಯಗಳಿಗೆ ವ್ಯಯವಾದರೆ ಉಳಿದ 3.38% ಹಣ ಧಾರ್ಮಿಕ ಆಚರಣೆಗೆ ವ್ಯಯಿಸಿದ್ದಾರೆ.



ಕೈಸಾಲ ಮರುಪಾವತಿ:- 28,000 (2.02%)

ಸ್ವ ಸಹಾಯ ಸಂಘಗಳು ಗ್ರಾಮೀಣ ಪ್ರದೇಶದ ಜನರು ತಮ್ಮಗೆ ಸಾಲಬೇಕಾದರೆ, ಊರಿನ ಶ್ರೀಮಂತರ ಬಳಿ ಅಥವಾ ಬಡ್ಡಿಗೆ ಹಣಕೊಡುವವರ ಹತ್ತಿರ ಪಡೆದುಕೊಳ್ಳಬೇಕಾಗಿತ್ತು. ಆದರೆ ಇಂತಹ ಸಂದರ್ಭದಲ್ಲಿ ಹಣಕೊಟ್ಟವರು ಅಧಿಕ ಬಡ್ಡಿಯನ್ನು ಪಿಧಿಸಿ, ಬಡವರನ್ನು ಕಷ್ಟದಲ್ಲಿ ಬದುಕುವಂತೆ ಮಾಡುತ್ತಿದ್ದರು. ಆದರೆ ಸ್ವ - ಸಹಾಯ ಸಂಘಗಳ, ಕಿರು ಆರ್ಥಿಕ ಯೋಜನೆಯು ಬಡವರಿಗೆ ಹಣವನ್ನು ಸಣ್ಣ ಪ್ರಮಾಣದಲ್ಲಿ ನಿಯಮಿತವಾಗಿ ಉಳಿಸಲು ಕಲಿಸಿ, ನಂತರ ಅವರಿಗೆ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ನೀಡುವ ಮೂಲಕ ಹೊಸ ಆರ್ಥಿಕ ಕ್ರಾಂತಿಯನ್ನೇ ಮಾಡಿದೆ. ಇದರಿಂದಾಗಿ ಅನೇಕ ಶ್ರೀಮಂತರಿಗೆ ಬಡ್ಡಿ ಕಟ್ಟುತ್ತಾ ತಮ್ಮ ಜೀವನಪರ್ಯಾಂತ ಸಾಲದ ಬಾಧೆಯಿಂದ ಬಳಲುತ್ತಿದ್ದ ಅದೆಷ್ಟೋಮಂದಿ ಸ್ವ ಸಹಾಯ ಸಂಘಗಳ ಮೂಲಕ ಸಾಲ ರಹಿತರಾಗಿ ಬದುಕಲು ಅವಕಾಶ ಪಡೆದಿದ್ದಾರೆ. ಮತ್ತು ತಮ್ಮ ಸಾಲದ ಹೊರೆಯನ್ನು ಕಡಿಮೆಗೊಳಿಸಿಕೊಂಡು ಸ್ವತಂತ್ರ್ಯರಾಗಿ ಬದುಕಲು ಕಿರು ಆರ್ಥಿಕ ಯೋಜನೆಯ ಮೂಲಕ ಸಾಲ ಪಡೆದು ಸ್ವತಂತ್ರ್ಯರಾಗಿ ಬದುಕುತ್ತಿದ್ದಾರೆ. ಹೀಗಾಗಿ ಈ ಪ್ರದೇಶದ ಜನರು ಪಡೆದ ಸಾಲದಲ್ಲಿ 2.02% ದಷ್ಟು ಹಣವನ್ನು ಸಾಲ ಮರುಪಾವತಿಗಾಗಿ ಪಡೆದು ಸ್ವತಂತ್ರ್ಯರಾಗಿ ಬದುಕುತ್ತಿದ್ದಾರೆ.


ಚಿನ್ನ ಖರೀದಿ – 1, 84,000 (13.28%)

ಗ್ರಾಮೀಣ ಪ್ರದೇಶದ ಜನರಲ್ಲಿ ಮೊದಲಿನಿಂದಲೂ ಬೆಳೆದು ಬಂದ ಅಭ್ಯಾಸ ಎಂದರೆ ಹಣವನ್ನು ಚಿನ್ನದ ರೂಪದಲ್ಲಿ ಸಂಗ್ರಹಿಸಿಡುವುದು. ಇಲ್ಲಿ ಮುಖ್ಯವಾಗಿ ಚಿನ್ನದ ಆಭರಣ ಸಮೃದ್ಧಿಯ ಸಂಕೇತದ ಜೊತೆಗೆ ಆಪತ್ಕಾಲದಲ್ಲಿ ನೆರವಿಗೂ ಬರುವುದರಿಂದ, ಚಿನ್ನದ ಆಭರಣ ಖರೀದಿಗೆ ಹೆಚ್ಚಿನ ಪ್ರಾಶಸ್ತ್ಯ ಒದಗಿಬರುತ್ತಿದೆ. ಇದರ ಜೊತೆಗೆ ಮನೆಯಲ್ಲಿ ಹೆಣ್ಣು ಮಕ್ಕಳಿದ್ದರಂತೂ ಚಿನ್ನದ ಆಭರಣ ಖರೀದಿಸಿ ಇಟ್ಟು ಮದುವೆ ಸಂದರ್ಭದಲ್ಲಿ ಉಪಯೋಗಿಸಲು ಬಳಸುತ್ತಾರೆ. ಒಟ್ಟು ಚಿನ್ನದ ಆಭರಣಗಳ ಖರೀದಿಗೆ 13.28%ದಷ್ಟು ಹಣ ವ್ಯಯವಾಗಿದೆ.

ಸ್ವ ಉದ್ಯೋಗ:-42,000 (10.25%)


ಸಮೀಕ್ಷೆಗೊಳಪಟ್ಟ ಪ್ರದೇಶದಲ್ಲಿ ಸ್ವ ಉದ್ಯೋಗಕ್ಕಾಗಿ ಪಡೆದ ಸಾಲ ಕೇವಲ 10.25% ಆಗಿರುವುದು ಇಲ್ಲಿ ಸ್ವ ಉದ್ಯೋಗಕ್ಕಾಗಿ ಹೆಚ್ಚಿನ ಪ್ರಾಶಸ್ತ್ಯ ದೊರಕದೆ ಇರುವುದನ್ನು ತೋರಿಸುತ್ತದೆ.

ಆದರಲ್ಲೂ ಸ್ವ ಉದ್ಯೋಗಕ್ಕೆ ಪಡೆದ ಹಣದಲ್ಲಿ 8.45% ಟೈಲರಿಂಗ್‌ಗೆ ಮತ್ತು 5.63% ವ್ಯಾಪಾರಕ್ಕೆ, 8.45 ಆಡು ಸಾಕಣೆಗೆ ಮತ್ತು 77.46% ಕೋಳಿಸಾಕಣೆಗೆ ವ್ಯಯಿಸಿರುವುದು ತಿಳಿದು ಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸ್ವ ಉದ್ಯೋಗಕ್ಕೆ ಇನ್ನೂ ಹೆಚ್ಚಿನ ಒಲವು ದೊರೆಯಬೇಕಾಗಿದ್ದು ಹೊಸ- ಹೊಸ ರೀತಿಯ ಸ್ವ ಉದ್ಯೋಗಕ್ಕೆ ಹೆಚ್ಚಿನ ಒತ್ತನ್ನು ಗ್ರಾಮಾಭಿವೃದ್ಧಿ ಯೋಜನೆಯು ನೀಡಬೇಕಾಗಿದೆ. ಜೊತೆಗೆ ಸಂದರ್ಶನದ ಸಂದರ್ಭದಲ್ಲಿ ಬಹಳಷ್ಟು ಜನರು ಹೊಸ- ಸ್ವ ಉದ್ಯೋಗದ ಬಗ್ಗೆ ಮಾಹಿತಿ ಮತ್ತು ಸಹಕಾರ ದೊರೆಯದೇ ಇರುವುದರ ಬಗ್ಗೆ ಅಸಮಾಧಾನ ಹೊಂದಿದ್ದಾರೆ.





ಜೀವನ ಮಟ್ಟ ಸುಧಾರಣೆ:- 74.82 – 2, 87,820(20.781%)

ಯಾವುದೇ ಒಂದು ಆರ್ಥಿಕ ಚಟುವಟಿಕೆ ಸುಗಮವಾಗಿ ಆಗಬೇಕಾದರೆ ಅಲ್ಲಿ ಮೂಲಭೂತ ಸೌಕರ್ಯಗಳು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಅಂತೆಯೇ ಸಮೀಕ್ಷೆಗೊಳಪಟ್ಟ ಪ್ರದೇಶದಲ್ಲಿಯೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಿರುವುದು ಸಮೀಕ್ಷೆಯ ಸಂದರ್ಭದಲ್ಲಿ ಗಮನಕ್ಕೆ ಬಂದ ವಿಷಯ. ಪಡೆದ ಒಟ್ಟು ಸಾಲದಲ್ಲಿ 20.78% ಹಣ್ಣು ಮೂಲಸೌಕರ್ಯಗಳ ಅಭಿವೃದ್ಧಿಗೆ ವ್ಯಯವಾಗಿದೆ. ಆದರಲ್ಲೂ ಹೊಸಮನೆಗೆ 55.5% ದಷ್ಟು ಹಣ ಖರ್ಚಾಗಿದೆ. ಹಳೆಮನೆ ರಿಪೇರಿಗೆ 19.10%, ವೈದ್ಯಕೀಯಕ್ಕೆ 7.5%, ಶಿಕ್ಷಣಕ್ಕೆ 4.16% ಮತ್ತು ಶೌಚಾಲಯ ನಿರ್ಮಾಣಕ್ಕೆ 1.38% ಹಣ ವ್ಯಯವಾಗಿದೆ, ವಿದ್ಯುತ್ ಅಳವಡಿಕೆಗೆ 12.16% ಸಾಲ ಪಡೆದಿದ್ದಾರೆ.



ಸಮೀಕ್ಷೆ ನಡೆಸಿದ ಪ್ರದೇಶದಲ್ಲಿ ಪಡೆದ ಸಾಲದ ಉದ್ದೇಶ ಮತ್ತು ಪ್ರಮಾಣ





ಸಂಶೋಧನೆಯ ಫಲಿತಗಳು

ಪ್ರಸ್ತುತ ಅಧ್ಯಯನ ಆಧಾರದ ಮೇಲೆ ಈ ಕೆಳಗಿನ ತೀರ್ಮಾನಗಳಿಗೆ ಬರಲಾಗಿದೆ.

- ಸದಸ್ಯರು ತೆಗೆದುಕೊಂಡ ಸಾಲ ಉದ್ದೇಶಕ್ಕನುಗುಣವಾಗಿ ಬಳಕೆಯಾಗುತ್ತಿಲ್ಲ. ಮುಖ್ಯವಾಗಿ ಸ್ವ ಉದ್ಯೋಗ ಮತ್ತು ಕೃಷಿಗಾಗಿ ತೆಗೆದುಕೊಂಡ ಸಾಲದಲ್ಲಿ ಈ ಅವ್ಯವಸ್ಥೆ ಅಧಿಕವಾಗಿದೆ.
- ಕಿರುಹಣಕಾಸು ಯೋಜನೆಯ ಮೂಲಕ ಸಾಲಸೌಲಭ್ಯ ಪಡೆದ ಸದಸ್ಯರು ಆರ್ಥಿಕವಾಗಿ ಸದೃಢಗೊಳ್ಳುತ್ತಿದ್ದಾರೆ.
- ಕಿರುಹಣಕಾಸು ಯೋಜನೆಯಿಂದಾಗಿ ಗ್ರಾಮೀಣ ಪ್ರದೇಶದ ಬಡಜನರೂ ಕೂಡ ಉಳಿತಾಯ ಖಾತೆಗಳನ್ನು ಹೊಂದುತ್ತಿದ್ದಾರೆ.
- ಸಮೀಕ್ಷೆಗೊಳಪಟ್ಟ 75 ಜನರಲ್ಲಿ, ಯೋಜನೆಯ ಸೇರುವ ಮೊದಲು 53 ಜನರಿಗೆ ಮಾತ್ರ ಸ್ವಂತ ಮನೆ ಇತ್ತು ಆದರೆ ಈಗ 72 ಜನ ಸ್ವಂತ ನಿವೇಶನಗಳನ್ನು ಹೊಂದಿದ್ದಾರೆ.
- ಯೋಜನೆಗೆ ಸೇರುವ ಮೊದಲು 75 ಜನ ಸದಸ್ಯರಲ್ಲಿ ಕೇವಲ 32 ಜನ ಶೌಚಾಲಯ ಹೊಂದಿದ್ದರು. ಈಗ ಪ್ರತಿಯೊಬ್ಬರು ಸ್ವಂತ ಶೌಚಾಲಯವನ್ನು ಹೊಂದಿದ್ದಾರೆ.
- ಯೋಜನೆಯ ಸದಸ್ಯರಲ್ಲಿ ಹೆಚ್ಚಿನವರು ಸದಸ್ಯರಾಗಿರುವುದು ಸಾಲ ಸೌಲಭ್ಯ ಪಡೆಯಲು.
- ಜನರಲ್ಲಿ ಹಣ ಉಳಿತಾಯದ ಪ್ರಜ್ಞೆ ಮೂಡಿಸಿ, ಅವರಿಗೆ ಸ್ವ ಉದ್ಯೋಗ ಮತ್ತು ಆರ್ಥಿಕವಾಗಿ ಸದೃಢರಾಗಲು ಹಣಕಾಸಿನ ನೆರವು ನೀಡುತ್ತಿರುವ ಯೋಜನೆಯ ಬಗ್ಗೆ ಜನರಿಗೆ ಬಹಳಷ್ಟು ಗೌರವವಿದೆ.
- ಯೋಜನೆಯ ಸದಸ್ಯರಾಗುವ ಮೊದಲು ಬಹಳಷ್ಟು ಜನ ಅಡುಗೆ ತಯಾರಿಸಲು ಕಟ್ಟಿಗೆ ಉಪಯೋಗಿಸುತ್ತಿದ್ದರು. ಇದರ ಸದಸ್ಯರಾದ ಬಳಿಕ 7 ಜನ ಗೋಬರ್ ಗ್ಯಾಸ್‌ನ ಸೌಲಭ್ಯ ಪಡೆದಿದ್ದಾರೆ.
- ಸದಸ್ಯರಾಗುವ ಮೊದಲು ಕೆಲವೇ ಮನೆಗಳಿಗೆ ವಿದ್ಯುತ್ ಸೌಲಭ್ಯ ಪಡೆದಿದೆ.
- ಯೋಜನೆಯಲ್ಲಿ ಸದಸ್ಯರಾಗುವ ಮೂಲಕ ಮಹಿಳೆಯರಲ್ಲಿ ಸಾಮಾಜಿಕ ಪ್ರಜ್ಞೆ ಜಾಗೃತವಾಗಿದೆ.

ಅಧ್ಯಾಯ 6

೬. ಸಲಹೆಗಳು ಮತ್ತು ಉಪಸಂಹಾರ

ಹದಿಹರೆಯದ ಯುವಕ ಯುವತಿಯರು ಗ್ರಾಮೀಣಾಭಿವೃದ್ಧಿ ಯೋಜನೆಗಳಿಂದ ದೂರವೇ ಉಳಿದಿದ್ದಾರೆ. ನಿರುದ್ಯೋಗ ಮತ್ತು ಬಡತನ ನಿರ್ಮೂಲನೆಯಲ್ಲಿ ಗ್ರಾಮೀಣಾಭಿವೃದ್ಧಿಯ ಪಾತ್ರ ಏನು ಎಂಬುದನ್ನು ತಿಳಿಸಿಕೊಡುವ ಬಲು ದೊಡ್ಡ ಸವಾಲು ಕ್ಷೇತ್ರ ಸೇವಾಸಿರತರ ಮೇಲೆ ಇದೆ. ಈ ಸವಾಲನ್ನು ಯಶಸ್ವಿಯಾಗಿ ಮತ್ತು ಸಮಾಧಾನವಾಗಿ ನಿಭಾಯಿಸಿ ಅರ್ಹರು ಗ್ರಾಮಾಭಿವೃದ್ಧಿ ಯೋಜನೆಯ ಪ್ರಯೋಜನವನ್ನು ಪಡೆಯುವಂತೆ ಮಾಡಬೇಕಾಗಿದೆ.

ಯೋಜನೆಯ ಸದಸ್ಯರುಗಳಲ್ಲಿ 96% ಜನ ಸ್ವಂತ ಮನೆ ಹೊಂದಿದ್ದಾರೆ. ಉಳಿದವರು ಸ್ವಂತ ಮನೆ ಹೊಂದುವಂತೆ ಪ್ರೇರೇಪಿಸಬೇಕಾಗಿದೆ. ಮನೆ ಹೊಂದಿದವರಲ್ಲಿ ಹೆಚ್ಚಿನವರದು ಪಿತ್ರಾರ್ಜಿತವಾದ ಮನೆ. ಅವುಗಳನ್ನು ದುರಸ್ತಿ ಮಾಡಬೇಕಾದ ಅನಿವಾರ್ಯತೆ ಇದೆ. ಬಿದಿರಿನ ಈಚಲುಮರದ ಛಾವಣಿ, ತೀರಾ ಹಳೆಯದಾದ ಹಂಚುಗಳು, ಮಣ್ಣಿನ ಗೋಡೆ ಮತ್ತು ಜರಿದ ನೆಲ-ಮಳೆಗಾಲದಲ್ಲಿ ಭಯದಿಂದ ಬದುಕಬೇಕಾದ ಪರಿಸ್ಥಿತಿ ನಿರ್ಮಾಣಗೊಂಡಿದೆ. ಅಧ್ಯಯನ ಕಾಲದಲ್ಲಿ ಶೇ. 95ಕ್ಕಿಂತ ಹೆಚ್ಚು ಮಂದಿ ಹೊಸ ಮನೆಯನ್ನು ನಿರ್ಮಿಸುವ ಕನಸನ್ನು ಕಾಣುತ್ತಿರುವುದು ಗಮನಕ್ಕೆ ಬಂತು. ಆದರೆ ಏರುತ್ತಿರುವ ವೆಚ್ಚದ ಸಂದರ್ಭದಲ್ಲಿ ಹೊಸ ಸದಸ್ಯರ ಮನೆ ನಿರ್ಮಾಣಕ್ಕೆ ಮೊದಲ ಆದ್ಯತೆ ನೀಡಬೇಕಾಗಿದೆ.

ಸಮೀಕ್ಷಾ ಪ್ರದೇಶದಲ್ಲಿ ಬೇಸಿಗೆಯ ಕಾಲದಲ್ಲಿ ನೀರಿನ ಸಮಸ್ಯೆ ಇರುವುದು ಕಂಡು ಬಂತು. ಸದಸ್ಯರುಗಳು ಕೃಷಿಯನ್ನೇ ಅವಲಂಬಿಸಿರುವುದರಿಂದ, ಯೋಜನೆಯ ಕಾರ್ಯಕರ್ತರು ಮಳೆ ಕೊಯ್ಲು, ಜಲ ಮರ ಪೂರಣ, ಕಿರು ಒಡ್ಡುಗಳ ನಿರ್ಮಾಣ, ಛಾವಣಿ ನೀರಿನ ಬಳಕೆ ಇತ್ಯಾದಿಗಳ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಬೇಕಾಗಿದೆ.

ಸಂದರ್ಶಿಸಿದ ಸದಸ್ಯರುಗಳಲ್ಲಿ ಶೇಕಡಾ 32 ಮಂದಿ ಅನಕ್ಷರಸ್ಥರಾದರೆ ಶೇಕಡಾ 21 ಮಂದಿ ಪ್ರಾಥಮಿಕ ಶಿಕ್ಷಣ ಪಡೆದವರು. ತಂಡದ ಸದಸ್ಯರುಗಳಿಗೆ ವಾರದ ಸಭೆ, ಹಣದ ಉಳಿತಾಯ ಮತ್ತು ಪಡೆದ ಸಾಲದ ಮಾಹಿತಿಯನ್ನು ತಮ್ಮ ಪುಸ್ತಕದಲ್ಲಿ ನೊಂದಾಯಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಯೋಜನೆಯ ಸದಸ್ಯರುಗಳಿಗೆ ಓದು-ಬರಹ ಅತ್ಯಗತ್ಯವಾಗಿದೆ. ಹೀಗಾಗಿ ಸಂಘಟನೆಯ ಕಾರ್ಯಕರ್ತರು ಸದಸ್ಯರನ್ನು ಪ್ರೇರೇಪಿಸಬೇಕಾಗಿದೆ. ಮತ್ತು ಶಿಕ್ಷಣ ನೀಡಲು ಆಯಾ ಪ್ರದೇಶದ ನಿವೃತ್ತ ಶಿಕ್ಷಕರನ್ನು ನೇಮಿಸಿಕೊಳ್ಳಬೇಕು ಗುಂಪುಗಳ ನಡುವೆ ಹಸ್ತಾಕ್ಷರ ಸ್ಪರ್ಧೆ, ಪುಸ್ತಕ ಓದುವ ಸ್ಪರ್ಧೆ ಇತ್ಯಾದಿಗಳನ್ನು ನಡೆಸಬೇಕು.

ಸಂದರ್ಶನಕ್ಕೆ ಬೀಡಿ ಕಟ್ಟುವವರು ಹೊಗೆಸೊಪ್ಪಿನ ಹುಡಿಯ ವಾಸನೆ ಸೇವಿಸಿ ಕ್ಷಯ, ತಲೆಸುತ್ತು, ರಕ್ತದ ಕೊರತೆ, ಕೆಮ್ಮು ಮುಂತಾದ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಅಧ್ಯಯನ ಸಂದರ್ಭದಲ್ಲಿ ಬಹುತೇಕರು ವೃತ್ತಿ ಬದಲಾವಣೆಯ ಆಸೆಯನ್ನು ವ್ಯಕ್ತಪಡಿಸಿದರು. ಆದರೆ ಮನೆಗೆಲಸ ನಿಭಾಯಿಸಿ ಕೈಗೊಳ್ಳಬಹುದಾದ ಬದಲಿ ವೃತ್ತಿ ಬೇರೊಂದು ದೊರೆಯುತ್ತಿಲ್ಲ. ಆದುದರಿಂದ ಯೋಜನೆಯ ಕಾರ್ಯಕರ್ತರು ಈ ಸದಸ್ಯೆಯರ ಆರೋಗ್ಯ ಸುಧಾರಣೆಯ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗಿದೆ.

ಯೋಜನೆಯ ಸದಸ್ಯರುಗಳು ಸಂಪೂರ್ಣ ಸುರಕ್ಷಾ ವಿಮಾ ಯೋಜನೆಗೆ ಒಳಪಡುತ್ತಾರೆ. ಅದಕ್ಕಾಗಿ ಕುಟುಂಬವೊಂದು ವರ್ಷಕ್ಕೆ 700 ರೂಪಾಯ ಕಟ್ಟಬೇಕಾಗುತ್ತದೆ. ಇತ್ತೀಚೆಗೆ ಭಾರತೀಯ ಜೀವ ವಿಮಾ ನಿಗಮದ ಅನೇಕ ಸರಳವಾದ ವಿಮಾ ಯೋಜನೆಗಳನ್ನು ರೂಪಿಸಿದೆ. ಈ ಯೋಜನೆಗಳಲ್ಲಿ ಹಣ ತೊಡಗಿಸಲು ಯೋಜನೆಯ ಸದಸ್ಯರನ್ನು ಕಾರ್ಯಕರ್ತರು ಪ್ರೇರೇಪಿಸಬೇಕಾಗಿದೆ.

ಯೋಜನೆಯ ಸದಸ್ಯರು ವಾರಕ್ಕೆ ಕನಿಷ್ಠ 10 ರೂಪಾಯಿಯನ್ನು ಕಡ್ಡಾಯವಾಗಿ ಉಳಿತಾಯ ಮಾಡಬೇಕು. ಆದರೆ ಇದರ ಒಟ್ಟು ಉಳಿತಾಯ ವರ್ಷದ ಕೊನೆಗೆ 500 ರೂಪಾಯಿಯನ್ನು ಮೀರುವುದಿಲ್ಲ. ಇಂದಿನ ಬೆಲೆ ಏರಿಕೆಯ ದಿನಗಳಲ್ಲಿ ಇದು ತೀರಾ ಚಿಕ್ಕ ಮೊತ್ತವಾಗುತ್ತದೆ ಅನೇಕ ಸರಕಾರಿ ಸಂಘಗಳು ಉಳಿತಾಯ ಠೇವಣಿಗಳಿಗೆ ಶೇಕಡಾ 10ಕ್ಕಿಂತಲೂ ಹೆಚ್ಚು ಬಡ್ಡಿಯನ್ನು ನೀಡುತ್ತವೆ. ಆದುದರಿಂದ ಕೇವಲ ಸಾಪ್ತಾಹಿಕ ಉಳಿತಾಯಕ್ಕಷ್ಟೇ ಸೀಮಿತಗೊಳ್ಳದೇ ಇತರ ರೀತಿಯ ಉಳಿತಾಯಗಳನ್ನು ಮಾಡಿ ಸದಸ್ಯರು ನಿರಖು ಠೇವಣಿಗಳಲ್ಲಿ ಇರಿಸಿ ತಮ್ಮ ಆದಾಯವನ್ನೂ ವೃದ್ಧಿಸಿಕೊಳ್ಳಬೇಕು. ಜೊತೆಗೆ ಸದಸ್ಯರು ಯೋಜನೆಯ ಮೂಲಕ ಸಾಲ ಪಡೆಯುವಗಾಲೂ ಅವರ ಉಳಿತಾಯ ನೋಡಲಾಗುತ್ತದೆ. ಹಾಗಾಗಿ ಸಾಲ ಪಡೆಯುವ ಸಂದರ್ಭದಲ್ಲಿ ಹೆಚ್ಚು ಉಳಿತಾಯ ಮಾಡಿದ್ದರೆ ದೊಡ್ಡ ಮೊತ್ತದ ಸಾಲ ಪಡೆಯಲು ಸಹಕಾರಿಯಾಗುತ್ತದೆ.

ಸದಸ್ಯರು ಪಡೆಯುವ ಸಾಲದ ಬಳಕೆಯ ಮೇಲುಸ್ತುವಾರಿ ಅತ್ಯಂತ ಸಮರ್ಪಕವಾಗಿ ನಡೆಯುತ್ತಿಲ್ಲ. ಯಾವ ಉದ್ದೇಶಕ್ಕಾಗಿ ಸದಸ್ಯರು ಸಾಲ ಪಡೆದಿರುತ್ತಾರೆಯೋ ಅದೇ ಉದ್ದೇಶಕ್ಕೆ ಸಾಲದ ಹಣ ಬಳಸಬೇಕಾದುದು ಅವಶ್ಯಕ. ಆದರೆ ಇತರ ಅನಿವಾರ್ಯತೆ, ಸಾಮಾಜಿಕ ನಂಬಿಕೆ ಇತ್ಯಾದಿಗಳಿಂದಾಗಿ ಸದಸ್ಯರು ತಾವು ತೆಗೆದುಕೊಂಡು ಸಾಲವನ್ನು ಬೇರೆ ಉದ್ದೇಶಕ್ಕೆ ಬಳಸಿದ ಉದಾಹರಣೆಗಳಿವೆ. ಈ ಬಗ್ಗೆ ಯೋಜನೆಯ ಕಾರ್ಯಕರ್ತರು ಮತ್ತು ಮೇಲ್ವಿಚಾರಕರು ಹೆಚ್ಚಿನ ಗಮನ ನೀಡಬೇಕಾಗಿದೆ.

ಯೋಜನೆಯ ಮೂಲಕ ಸಾಲ ಪಡೆದ ಸದಸ್ಯರುಗಳು ತಮ್ಮ ಸಾಲ ಮರುಪಾವತಿಯ ಅವಧಿಯನ್ನು ಹೆಚ್ಚಿಸಬೇಕು ಎಂಬ ಸಲಹೆಯನ್ನು ನೀಡಿರುತ್ತಾರೆ. ಸದಸ್ಯರಿಗೆ ಬ್ಯಾಂಕುಗಳು ಸಾಲವನ್ನು ನೀಡುವುದರಿಂದ ಮತ್ತು ಬ್ಯಾಂಕುಗಳಿಗೆ ದೀರ್ಘಾವಧಿ ಸಾಲವನ್ನು ನೀಡುವ ಅಧಿಕಾರ ಇಲ್ಲದಿರುವುದರಿಂದ

ಇಲ್ಲೊಂದು ತಾಂತ್ರಿಕ ತೊಡಕಿದೆ. ಆದುದರಿಂದ ಸ್ವ ಸಹಾಯ ಗುಂಪುಗಳಿಗೆ ನಬಾರ್ಡ್ ನೀಡುವ ಹಣ ಬ್ಯಾಂಕುಗಳ ಬದಲಾಗಿ ಸಹಕಾರಿ ಸಂಸ್ಥೆಗಳಿಂದ ನೀಡಲ್ಪಟ್ಟರೆ ಗ್ರಾಮೀಣ ಬಡಜನರಿಗೆ ತುಂಬಾ ಸಹಕಾರಿಯಾಗುತ್ತದೆ. ಗ್ರಾಮಾಭಿವೃದ್ಧಿಯಲ್ಲಿ ತೊಡಗಿರುವ ಸರಕಾರೇತರ ಸಂಸ್ಥೆಗಳು ಒಟ್ಟಾಗಿ ಈ ವಿಷಯವನ್ನು ನಬಾರ್ಡ್‌ಗೆ ಮನಗಾಣಿಸಬೇಕಾಗಿದೆ.

ಕಿರು ಹಣಕಾಸು ಯೋಜನೆಯ ಮೂಲಕ ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಮಟ್ಟದಲ್ಲಿ ಆರ್ಥಿಕ ಬದಲಾವಣೆಯಾಗಬೇಕಾಗಿದೆ. ಹಾಗಾಗಿ ಸರಕಾರೇತರ ಸಂಸ್ಥೆಗಳಿಗೆ ಸರಕಾರವು ಹೆಚ್ಚಿನ ಮನ್ನಣೆ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಒಗ್ಗಟ್ಟಿನಿಂದ ಶ್ರಮಿಸಬೇಕಾಗಿದೆ.

ಉಪಸಂಹಾರ:-

ಭಾರತದಲ್ಲಿ ಇಂದು ಸಾರ್ವಜನಿಕ ವಲಯದ ಬ್ಯಾಂಕುಗಳ ಹೆಚ್ಚಿನ ಪ್ರಮಾಣದ ಸಾಲಗಳು ಕಿರು

ಹಣಕಾಸಿನ ರೂಪದಲ್ಲಿರುವುದು ಒಂದು ವಿಶೇಷ. ಖಾಸಗಿ ವಲಯದ ಮತ್ತು ಸಹಕಾರಿ ವಲಯದ ಬ್ಯಾಂಕುಗಳು ಈ ಪ್ರಯತ್ನಕ್ಕೆ ಗಣನೀಯಾವಾಗಿ ಕೈ ಜೋಡಿಸಿವೆ. ಕಿರು ಹಣಕಾಸಿನ ಕಾರ್ಯಕ್ರಮವು ಅತೀ ಮುಖ್ಯವಾಗಿ ಸ್ವ ಸಹಾಯ ಗುಂಪು ಬ್ಯಾಂಕ್ ಜೋಡಣೆಯ ಕಾರ್ಯಕ್ರಮದ ಆಶ್ರಯದಲ್ಲಿ ವಿಜೃಂಭಿಸುತ್ತದೆ. ಬ್ಯಾಂಕುಗಳು ತಮ್ಮ ಉದ್ಯಮದಲ್ಲಿ ನವ ಪ್ರವರ್ತನೆಗೆ ಹಾತೊರೆಯುತ್ತಿರುವಾಗ ಮತ್ತು ಸಾಂಪ್ರದಾಯಿಕ ಸಾಲ ನೀಡಿಕೆಯ ಮಾರ್ಗಗಳಿಗೆ ಅವಕಾಶಗಳು ಕಡಿಮೆಯಾಗುತ್ತಿರುವಾಗ ಕಿರು ಹಣಕಾಸಿನ ಕಾರ್ಯಕ್ರಮವು ಹೆಚ್ಚು ಆಕರ್ಷಕವಾಗಿ ಹೊರಹೊಮ್ಮಿದೆ. ಸಹಕಾರಿ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು ಮತ್ತು ಸಾರ್ವಜನಿಕ ವಲಯದ ಬ್ಯಾಂಕುಗಳು ಮಾತ್ರವಲ್ಲದೆ ವಿದೇಶಿ ಬ್ಯಾಂಕುಗಳೂ ಸಹ ತಮ್ಮ ಹವಾನಿಯಂತ್ರಿತ ಕೊಠಡಿಗಳಿಂದ ಹೊರ ಬಂದು ವಾಸ್ತವಿಕ ಭಾರತದ ಕಿರಿದಾದ ಧೂಳು ಹಿಡಿದ ರಸ್ತೆಗಳ ಮೂಲಕ ಹಳ್ಳಿಗಳಿಗೆ ತಮ್ಮ ಪಯಣವನ್ನು ಬೆಳೆಸಿವೆ.

ಜಾಗತೀಕರಣದ ಎಲ್ಲಾ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಗ್ರಾಮಾಭಿವೃದ್ಧಿ ಯೋಜನೆಗಳಿಗಿವೆ. ಅವುಗಳ ಪ್ರಾಮಾಣಿಕ ಅನುಷ್ಠಾನದಿಂದ ದೇಶ ತಳ ಹಂತದಿಂದ ಆರ್ಥಿಕವಾಗಿ ಬಲಿಷ್ಠವಾಗುತ್ತದೆ. ಈ ನಿಟ್ಟಿನಲ್ಲಿ ಸರಕಾರೇತರ ಸಂಸ್ಥೆಗಳಿಂದ ರೂಪಿಸಲ್ಪಟ್ಟ ಕಿರು ಹಣಕಾಸು ಯೋಜನೆಯು ಬಹಳ ಮಹತ್ವದ್ದಾಗಿದೆ. ಕಿರು ಹಣಕಾಸಿನ ಯೋಜನೆಯ ಫಲಪ್ರದ ಅನುಷ್ಠಾನದಲ್ಲಿ ನಬಾರ್ಡ್‌ನ ಪಾತ್ರ ಹಿರಿದಾದುದು. ಈ ಯೋಜನೆಯಲ್ಲಿ ನಬಾರ್ಡ್ ನೇತಾರನಾಗಿ, ಮಿತ್ರನಾಗಿ, ತತ್ವಜ್ಞಾನಿಯಾಗಿ ಮತ್ತು ಮಾರ್ಗದರ್ಶಕನಾಗಿ ಕೆಲಸ ಮಾಡುತ್ತಿದೆ. ಅನೇಕ ನವ ಪ್ರವರ್ತನೆಗಳನ್ನು ಮತ್ತು

ಆರಂಭ ಶೀಲತೆಗಳನ್ನು ಅದು ಹುಟ್ಟು ಹಾಕುತ್ತಿದೆ. ಸಮೀಕ್ಷಾ ಪ್ರದೇಶದಲ್ಲಿ ಕಾರ್ಯಚರಿಸುತ್ತಿರುವ SKDRDP ಯು 1991 ರಿಂದ ಕಿರುಹಣಕಾಸು ಯೋಜನೆಯ ಮೂಲಕ ಇಡೀ ರಾಷ್ಟದಲ್ಲೇ ಗುರುತಿಸಿಕೊಂಡಿದೆ. ಕಿರುಹಣಕಾಸು ಯೋಜನೆಯ ಮೂಲಕ ಗ್ರಾಮೀಣಾ ಪ್ರದೇಶಗಳು ಅಭಿವೃದ್ಧಿ ಹೊಂದಿ ಗಾಂಧೀಜಿ ಕಂಡ ರಾಮ ರಾಜ್ಯದ ಕನಸು ನಿಜವಾದ ಅರ್ಥದಲ್ಲಿ ಸಾಕಾರಗೊಳ್ಳುತ್ತಿದೆ.

ಅನುಬಂಧ: I

ಸಂದರ್ಶಿಸಿದ ಸದಸ್ಯರ ಹೆಸರು

ಕ್ರಮಸಂಖ್ಯೆ	ಸದಸ್ಯರ ಹೆಸರು	ವಯಸ್ಸು
1.	ಬಾಬು ಆಚಾರ್ಯ	48
2.	ಬೊಮ್ಮಣ್ಣ ಗೌಡ	49
3.	ಆದಂ	38
4.	ಶ್ರೀಧರ	28
5.	ಕೃಷ್ಣಮೂರ್ತಿ ಆಚಾರಿ	46
6.	ಬಾಬು ಗೌಡ	58
7.	ಲೀಲಾವತಿ	34
8.	ಸುಮಲತಾ	20
9.	ಲೋಕಮ್ಮ	48
10.	ಸೀತಮ್ಮ	46
11.	ಮೀನಾಕ್ಷಿ	29
12.	ಪೂರ್ಣಿಮ	22
13.	ಗುಲಾಬಿ	40
14.	ಗಿರಿಜಾ	28
15.	ವಿಮಲ	32
16.	ಸುಂದರಿ	36
17.	ಇಂದಿರಾ	22
18.	ಚೆಲುವಮ್ಮ	42
19.	ಆಶಾ	21
20.	ಬೇಬಿ	26

21.	ಪ್ರೇಮ	26
22.	ವಿಮಲ	42
23.	ಭಾರತಿ	40
24.	ಕಮಲ	38
25.	ಗಿರಿಜಾ	42
26.	ಸೀತಾಲಕ್ಷ್ಮೀ	28
27.	ಸುನಂದ	32
28.	ಪ್ರೇಮ. ಬಿ	43
29.	ಭಾರತಿ	26
30.	ರೇವತಿ	50
31.	ಸುಮತಿ	28
32.	ಮಲ್ಲಿಕ	55
33.	ಚಿನ್ನಮ್ಮ	45
34.	ಮೋಹಿನಿ	45
35.	ವಿಮಲ	47
36.	ಸರಸ್ವತಿ	40
37.	ಆನಂದ	31
38.	ನೀಲಯ್ಯ	35
39.	ಕೊರಗಪ್ಪ	35
40.	ಕೇಶವ	27
41.	ಯೋಗಿಶ್ ಗೌಡ	48
42.	ಆನಂದ ಗೌಡ	51
43.	ಮಾದಿಗ ಹರಿಜನ	53

44.	ಶೇಖರ	33
45.	ಗುರುರಾಜ	51
46.	ನೋಣಯ್ಯ ಗೌಡ	36
47.	ಡೊಂಬಯ್ಯ	53
48.	ಯಶೋಧರ	41
49.	ಡೀಕಯ್ಯ ಗೌಡ	47
50.	ಸುಂದರ ಆಚಾರಿ	27
51.	ರಾಮಣ್ಣ	52
52.	ಸಂಜೀವ	50
53.	ಡಾಗಯ್ಯ ಗೌಡ	48
54.	ಬಾಬು ನ್ಯಾಕ	52
55.	ನೀಲಯ್ಯ ನ್ಯಾಕ	53
56.	ಪದ್ದಣ್ಣ ನ್ಯಾಕ	35
57.	ಅಬ್ಬಾಸ್	49
58.	ಬಾಲಕ್ಕ	45
59.	ಶಶಿಕಲ	25
60.	ಗಿರಿಜಾ	38
61.	ಕಮಲ	48
62.	ಸುಂದರಿ	50
63.	ಸತೀಶ	29
64.	ಸಿದ್ಧಿಕ್	33
65.	ಮಾತುಕುಟ್ಟಿ	41
66.	ಬಾಲಕೃಷ್ಣ	36

67.	ಗಣೇಶ	46
68.	ಕೇಶವ	39
69.	ಅಚ್ಯುತ	51
70.	ಸಂದೀಪ	43
71.	ಮನೋಹರ	55
72.	ಪ್ರದೀಪ	28
73.	ಜೋಸೆಫ್	39
74.	ರಾಜೇಶ್	42
75	ರಾಮಣ್ಣ	48

ಅನುಬಂಧ: II

ಪ್ರಶ್ನಾವಳಿ

I. ಗುಂಪಿನ ಪರಿಚಯ

1. ಗುಂಪಿನ ಹೆಸರು ಮತ್ತು ವಿಳಾಸ
2. ಸ್ಥಾಪನೆಯ ವರ್ಷ
3. ಸ್ಥಾಪನೆಗೆ ಪ್ರೇರಣೆ
4. ಪ್ರತ್ಯೇಕ ಕಛೇರಿ:- ಇದೆ / ಇಲ್ಲ – ಎಲ್ಲಿ
5. ಮೊದಲು ಉಳಿತಾಯ ಮಾಡುವ ಅಭ್ಯಾಸ ಇತ್ತೇ:- ಹೌದು / ಇಲ್ಲ
6. ಉಳಿತಾಯ ಸ್ವರೂಪ (ವಾರಕ್ಕೆ) 10ರೂ / 10ರಿಂದ 20 / 20 ಕ್ಕಿಂತ
   ಹೆಚ್ಚು ಉಳಿತಾಯದ ಉದ್ದೇಶ

II. ಸದಸ್ಯತ್ವದ ಮಾಹಿತಿ

1. ತಂಡದಲ್ಲಿರುವ ಸದಸ್ಯರ ಒಟ್ಟು ಸಂಖ್ಯೆ :/ ಒಟ್ಟು /ಆರಂಭ / ಈಗ
2. ಸದಸ್ಯರ ಸರಾಸರಿ ವಯೋಮಾನ 18-25 / 26-35 / 36-50/ 50ಕ್ಕಿಂತ ಹೆಚ್ಚು
3. ಕುಟುಂಬದ ವಿವರ

   ತಂದೆ ತಾಯಿ : ಇದ್ದಾರೆ / ಇಲ್ಲ ವಯಸ್ಸು : ವೃತ್ತಿ :

   ಗಂಡ ಹೆಂಡತಿ :

   ಮಕ್ಕಳು : ವಯಸ್ಸು: ವಿದ್ಯಾರ್ಹತೆ: ವೃತ್ತಿ:
4. ಶಿಕ್ಷಣದ ಮಟ್ಟ ಅನಕ್ಷರಸ್ಥರು ಪ್ರಾಥಮಿಕ / ಪ್ರೌಢ / ಕಾಲೇಜು / ಇತರ
5. ಸದಸ್ಯರ ಸಂಪನ್ಮೂಲ ವಿವರ

   ಭೂಮಿ : ಪಿತ್ರಾರ್ಜಿತ /ಸ್ವಯಾರ್ಜಿತ / ದರಖಾಸ್ತು / ಅಕ್ರಮ ಸಕ್ರಮ

   ಮನೆ : ಪಿತ್ರಾರ್ಜಿತ /ಸ್ವಯಾರ್ಜಿತ / ಸರಕಾರದಿಂದ / ಇತರ
6. ಮೂಲ ಸವಲತ್ತು

- ❖ ಮನೆಯವರಿಗೆ ರಸ್ತೆಯ ಸೌಲಭ್ಯ : ಇದೆ / ಇಲ್ಲ
- ❖ ವಿದ್ಯುತ್ ಸೌಲಭ್ಯ : ಇದೆ / ಇಲ್ಲ
- ❖ ದೂರವಾಣಿ ಸೌಲಭ್ಯ : ಇದೆ / ಇಲ್ಲ
- ❖ ಸ್ವಂತ ವಾಹನ : ಇದೆ / ಇಲ್ಲ (ಸೈಕಲ್ / ಮೊಪೆಡ್ / ದ್ವಿಚಕ್ರ / ಕಾರು, ಜೀಪು)

❖ ನೀರು ಪುರೈಕೆ : ಸ್ವಂತ ಬಾವಿ / ಸಾರ್ವಜನಿಕರ ಬಾವಿ / ಕೊಳವೆ ಬಾವಿ / ಇತರ

7. ಸರಕಾರದಿಂದ ಸಿಕ್ಕ ಸೌಲಭ್ಯ

   ಯಾಕೆ, ಯಾವ ರೂಪದಲ್ಲಿ

8. ವೃತ್ತಿಯ ವಿವರಣೆ ಕೂಲಿ / ಕೃಷಿ / ಬೀಡಿ / ಇತರ

9. ಮನೆಯಿಂದವಾರದ ಸಭೆಯ ಸ್ಥಳಕ್ಕೆ ಇರುವ ದೂರ

   1.km. ಕಡಿಮೆ/ 1 km ರಿಂದ 3. km / 3.km ಗಿಂತ ಹೆಚ್ಚು

10. ವಾರದ ಸಭೆ ಯಾವ ಸ್ಥಳ :- / ಸಮಯ

11. ಸದಸ್ಯರು ಸಭೆಗೆ ಹಾಜರಾಗುತ್ತಾರೋ ಹೌದು / ಇಲ್ಲ

12. ಗೈರು ಹಾಜರಾದರೆ ದಂಡ ವಿಧಿಸಲಾಗುತ್ತದೆಯೇ ? ಹೌದು / ಇಲ್ಲ

13. ಗುಂಪಿನ ಸದಸ್ಯ ಆದ ಬಳಿಕ ಸ್ವ ಉದ್ಯೋಗ ಮಾಡಿದ್ದೀರಾ ? ಹೌದು / ಇಲ್ಲ ಯಾವುದು ?

14. ಬೇರೆ ಧರ್ಮಕ್ಕೆ ಸೇರಿದವರು ಇದ್ದಾರೆ / ಇಲ್ಲ ಯಾವ ಧರ್ಮ

III. ಚಟುವಟಿಕೆಗಳು / ಸಹಭಾಗಿತ್ವ

1. ಗುಂಪು ನಡೆಸಿದ ಜಾಗೃತಿ ಕಾರ್ಯಕ್ರಮದಿಂದ ನಿಮಗೆ ಪ್ರಯೋಜನವಾಗಿದೆಯೇ ? ಹೌದು / ಇಲ್ಲ

   ಜಾಗೃತಿ ಕಾರ್ಯಕ್ರಮ / ಉಳಿತಾಯ / ಗ್ರಾಹಕ ಚಳುವಳಿ / ಕುಷ್ಟ ರೋಗ ನಿವಾರಣೆ / ಸಾವಯವ ಕೃಷಿ / ಸಾಕ್ಷರತೆ / ಏಡ್ಸ್ ಜನಜಾಗೃತಿ / ಪರಿಸರ ಸಂರಕ್ಷಣೆ / ನೀರಿನ ಕ್ಯೊಲು / ಆರೋಗ್ಯ ಕಾರ್ಯಕ್ರಮ

2. ನಿಮ್ಮ ಗುಂಪಿನಿಂದ ನಿಮಗೆ ಪ್ರಯೋಜನವಾಗಿದೆಯೇ ? ಹೌದು / ಇಲ್ಲ ಯಾವ ಪ್ರಯೋಜನ?

3. ನೀವು ಇತರ ಕಾರ್ಯಕ್ರಮಗಳನ್ನು ಸಂಘಟಿಸಿದ್ದೀರಾ?

   ರಾಷ್ಟ್ರೀಯ ಹಬ್ಬ / ಕನ್ನಡ ರಾಜ್ಯೋತ್ಸವ / ದೀಪಾವಳಿ / ರಂಜಾನ್ / ಕ್ರಿಸ್ಮಸ್

4. ನಿಮ್ಮ ನಿರೀಕ್ಷೆಗೆ ತಕ್ಕ ಹಾಗೆ ಗುಂಪಿನ ಕೆಲಸಗಳು ನಡೆಯುತ್ತಿದೆಯೇ ಹೌದು / ಇಲ್ಲ

5. ಎಲ್ಲಾ ಸದಸ್ಯರು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆಯೇ ? ಹೌದು / ಇಲ್ಲ

6. ಸಭೆಗಳಲ್ಲಿ ಉಳಿತಾಯದ ಹೊರತಾಗಿ ಇತರ ಚಟುವಟುಕೆ ಮಾಡಿತ್ತೀರಾ ? ಹೌದು / ಇಲ್ಲ

7. ನಿಮ್ಮ ಕುಟುಂಬದ ಸಮಸ್ಯೆಗಳು ಮಧ್ಯಪಾನ / ಜೂಜು / ಕೋಳಿ ಅಂಕ / ಲಾಟರಿ / ಹೆಣ್ಣಿನ ಶೋಕಿ

8. ಸಮಸ್ಯೆಗಳನ್ನು ಸರಿಪಡಿಸಲು ಕೈಗೊಂಡ ಕ್ರಮ

ಮಧ್ಯವರ್ಜನ ಶಿಬಿರ / ವೈದ್ಯರ ಸಲಹೆ / ಹಿರಿಯರ ಉಪದೇಶ / ಆಣೆ ಪ್ರಮಾಣ

9. ಗುಂಪಿಗೆ ಸೇರಿದ ಬಳಿಕ ಆರ್ಥಿಕವಾಗಿ ಸ್ವತಂತ್ರರಾಗಿದ್ದೀರಾ ಹೌದು / ಇಲ್ಲ
10. ಧಾರ್ಮಿಕ / ಜಾತಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತೀರಾ ಹೌದು / ಇಲ್ಲ
11. ನಿಮ್ಮ ಗುಂಪು ನಿಮ್ಮನ್ನು ರಾಜಕೀಯ ಚಟುವಟಿಕೆಗೆ ಉತ್ತೇಜಿಸುತ್ತದೆಯೇ ? ಹೌದು / ಇಲ್ಲ
12. ಗುಂಪಿನಿಂದ ಮಾಹಿತಿಯನ್ನು ಒದಗಿಸಲಾಗುತ್ತಿದೆಯೇ ? ಹೌದು / ಇಲ್ಲ ಯಾವುದು ?
13. ಮನೆಯಲ್ಲಿ ಪ್ರಮುಖ ತೀರ್ಮಾನ ಹೇಗೆ ಕೈಗೊಳ್ಳುತ್ತೀರಿ ? ಕುಟುಂಬದ ಯಜಮಾನ / ಗಂಡ

    ಹೆಂಡತಿ / ಸಾಮೂಹಿಕ

14. ಇತರ ಮಾಹಿತಿಗಳು :

    a. ವೃತ್ತಿ ಬದಲಾವಣೆಯ ಯೋಜನೆ
    b. ಆಸ್ತಿ ಕೊಳ್ಳುವ ಬಗ್ಗೆ
    c. ಮಕ್ಕಳ ಭವಿಷ್ಯದ ಬಗ್ಗೆ
    d. ಮನೆ ಬದಲಾವಣೆ ಬಗ್ಗೆ
    e. ವಾಹನ ಕೊಳ್ಳುವ ಬಗ್ಗೆ
    f. ಪಂಚಾಯತಿಯ ಸ್ಪರ್ಧಿಸುವ ಬಗ್ಗೆ
    g. ಗ್ರಾಮ ಸಭೆಯಲ್ಲಿ ಪಾಲ್ಗೊಳ್ಳುವುದು
    h. ಮತದಾನ (ಸ್ವತಂತ್ರ ನಿರ್ಧಾರ / ಪ್ರಭಾವ)
    i. ಪ್ರವಾಸ – ಪ್ರೇಕ್ಷಣೀಯ / ಕೃಷಿ / ಧಾರ್ಮಿಕ / ಕೃಷಿಯೇತರ

IV. ಸಾಲ ಮತ್ತು ಮರುಪಾವತಿ

1. ಆಂತರಿಕ ಸಾಲ

ಉದ್ದೇಶ	ಪಡೆದುಕೊಂಡ ಸದಸ್ಯರ ಸಂಖ್ಯೆ	ಸಾಲದ ಮೊತ್ತ	ಉಳಿತಾಯ	ಬಡ್ಡಿದರ
ಸ್ವ ಉದ್ಯೋಗ				
ಶಿಕ್ಷಣ				
ಗೃಹ ಸಾಲ				
ಕೃಷಿ ಸಾಲ				
ಇತರ				

2. ಬಾಹ್ಯ ಸಾಲ

ಉದ್ದೇಶ	ಪಡೆದುಕೊಂಡ ಸದಸ್ಯರ ಸಂಖ್ಯೆ	ಸಾಲದ ಮೊತ್ತ	ಉಳಿತಾಯ	ಬಡ್ಡಿದರ
ಸ್ವ ಉದ್ಯೋಗ				
ಶಿಕ್ಷಣ				
ಗೃಹ ಸಾಲ				
ಕೃಷಿ ಸಾಲ				
ಇತರ				

3. ಪಡೆದುಕೊಂಡ ಸಾಲಕ್ಕೆ ನೀಡುವ ಜಾಮೀನು ಯಾವುದು ?

4. ಸಾಲ ಮರುಪಾವತಿಯ ಅವಧಿ 6 ತಿಂಗಳಿಗಿಂತ ಕಡಿಮೆ / 6 ರಿಂದ 12 ತಿಂಗಳು / 13 ತಿಂಗಳು /

2 ವರ್ಷಕ್ಕಿಂತ ಹೆಚ್ಚು / ಆಗಿಲ್ಲ

5. ಸಂಘದ ಲೆಕ್ಕ ಪತ್ರ ಇಟ್ಟುಕೊಳ್ಳುವವರು ಯಾರು ? ಅಧ್ಯಕ್ಷ / ಕಾರ್ಯದರ್ಶಿ /ಇತರ


V. ಸಂಘಟನೆ

1. ಅಧ್ಯಕ್ಷರ ಆಯ್ಕೆ :- ಮತದಾನ / ಅವಿರೋಧ
2. ತಂಡ ರಚಿಸುವಾಗ ಸಂಕಷ್ಟಗಳು ಎದುರಾಗಿದೆಯೇ ? ಹೌದು / ಇಲ್ಲ
3. ಯಾರದಾದರೂ ಸದಸ್ಯತ್ವ ರದ್ದು ಪಡಿಸಿದೆಯೇ ? ಹೌದು / ಇಲ್ಲ
4. ಗುಂಪಿನ ಮೇಲ್ವಿಚಾರಕರು ಸರಿಯಾಗಿ ಮೇಲ್ವಿಚಾರಣೆ ಮಾಡುತ್ತಾರೆಯೇ ಹೌದು / ಇಲ್ಲ
5. ಗುಂಪಿನ ಮೇಲ್ವಿಚಾರಕರ ಶಿಬಿರಗಳನ್ನು ಸಂಘಟಿಸುತ್ತಿದ್ದಾರೆಯೇ ? ಹೌದು / ಇಲ್ಲ

ಛಾಯಾಚಿತ್ರಗಳು



ಮಧ್ಯ ಮುಕ್ತರು



ಕಿರು ಹಣಕಾಸಿನ ಮೂಲ ಫಲಾನುಭವಿಗಳು



ಯೋಜನೆಯ ಮೂಲಕ ಶ್ರಮದಾನ



ಕಿರುಹಣಕಾಸಿನ ಮೂಲಕ ಸ್ವ ಉದ್ಯೋಗ

ಗ್ರಂಥಸೂಚಿ

ಪುಸ್ತಕಗಳು, ಲೇಖನಗಳು ವರದಿಗಳು :-

ಎಚ್.ಆರ್. ಕೃಷ್ಣೆಗೌಡ ; "ಗ್ರಾಮೀಣ ಅಭಿವೃದ್ದಿ ಮತ್ತು ಸಹಕಾರ" ಸ್ಪಂದನ ಪ್ರಕಾಶನ, ಬೆಂಗಳೂರು.

ಎನ್.ಟಿ.ಎರ್ರಿ ಸ್ವಾಮಿ ; "ಸ್ವ ಸಹಾಯ ಸಂಘಗಳು ಒಂದು ಪರಿಕಲ್ಪನೆ", ಬದುಕು ಸ್ವಯಂ ಸೇವಾ ಸಂಸ್ಥೆ, ಜಗಳೂರು, ೨೦೦೬.

ಪ್ರಭಾಕರ ಶಿಶಿಲ ಮತ್ತು ಕುಮಾರ ಸ್ವಾಮಿ ; "ಭಾರತದ ಆರ್ಥಿಕ ಅಭಿವೃದ್ಧಿ", ಮಂಗಳ ಪ್ರಕಾಶನ, ೨೦೦೫

ಸುಬ್ಬಯ್ಯ ಸಾಚಿ ದಾಸ್; ಸ್ವ ಸಹಾಯ ಸಂಘ ಮತ್ತು ಕಿರು ಸಾಲ – ಕುರುಕ್ಷೇತ್ರ– **2003, VOL-51, NO-10. PP**

ಮಧುರ ಎಂ.ಆರ್; Comparative Study of SHG funcationing under Govt, and NGO, Unpublished – 2006.

ಕೆ. ಭೈರಪ್ಪ ; "ಸಮಗ್ರ ಗ್ರಾಮೀಣ ಸಮಾಜ ಮತ್ತು ಅಭಿವೃದ್ದಿ", ಸಪ್ನ ಬುಕ್ ಹೌಸ್ ೨೦೦೫.

ಎನ್.ಟಿ. ತಿಂಗಳಾಯ ; ಕಿರು ಹಣಕಾಸು **2006**

ಜಿ.ವಿ. ಜೋಶಿ ; "ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕಿರಣದಲ್ಲಿ ಕಿರು ಹಣಕಾಸಿನ ಪಾತ್ರ" ಕಿಸಾನ್ ಪಬ್ಲಿಕೇಶನ್ಸ್ –2007.

ಮಹೇಂದ್ರ ವರ್ಮನ್; ಇ. ಪಿ. ಡಬ್ಲ್ಯು ಏಪ್ರಿಲ್ **23 2005 PP 1705- 1713**

ಶಿವಬೈರಪ ; "ಮಹಿಳೆಯರ ಆರ್ಥಿಕ ಸ್ವಾವಲಂಬನೆಯಲ್ಲಿ ಕಿರು ಹಣಕಾಸಿನ ಪಾತ್ರ" **2006**

ದಾಸ್‌ಗುಪ್ತಾ ರಾಜಾರಾಮ್; "ಗ್ರಾಮೀಣ ಸ್ವ ಸಹಾಯ ಸಂಘಗಳ ಮೇಲೆ ಕಿರುಹಣಕಾಸಿನ ಪ್ರಭಾವ" – **Vol 56, no 3 July 2001.**

AKSHARA GRANTHALAYA
ACC.NO. 048556
048556